ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

07 ಮೇ 2014 ಪುಟ 20 ರೂ. 15/-

ಪಂಕ್ತಿ ಬೇಧ




ಅದೇ ರಾಗ ಅದೇ ಹಾಡು



ಕಬೀರ್

ಕಗ್ಗೊಲೆ




ರಂಗೀಲಾ ರಗಳೆ



ಕೌನ್ಸಿಲರ್ ಲಲಿತಾ ಕದ್ದದ್ದು ತುಂಡುಬಟ್ಟೆ

ಬಿಜೆಪಿ ಮಾನ ಮೂರಾಬಟ್ಟೆ

ಕವಿವೇಷದಲ್ಲಿ ಚಂದ್ರಾಚಾರಿ






ರಮ್ಯಾಗೆ

ಕೈಕೊಟ್ಟ ಅಂಬಿ ಬಣ



ಮಂಗಳೂರು ಸಗಣಿ ಬಾಕರು





ಪಡೆದುಕೊಂಡಿರುವ 12 ಕೋಟಿ ಯುವಜನರಲ್ಲಿ ಹೆಚ್ಚಿನವರು ಇದೇ ವರ್ಗಕ್ಕೆ ಸೇರುತ್ತಾರೆ. ಹಾಗಾಗಿಯೇ ಅವರ ಮತಗಳಿಕೆಯ ಉದ್ದೇಶದಿಂದಲೂ ಈ ವರ್ಗದ ಸಬಲೀಕರಣದ ಕುರಿತು ಹೆಚ್ಚೆಚ್ಚು ಮಾತನಾಡಲಾಯಿತು.

ಮಧ್ಯಮವರ್ಗವೆಂದರೆ ಯಾರು, ಬಡತನ ರೇಖೆಯೆಂದರೆ ಮಾನದಂಡವೇನು ಎಂಬ ಪ್ರಶ್ನೆಯು ಅಷ್ಟು ಸುಲಭವಾಗಿ ಬಗೆಹರಿದಿಲ್ಲ, ಸದ್ಯಕ್ಕೆ ತಿಂಗಳಿಗೆ 3900 ರೂ.ಗಳಿಗಿಂತ (ದಿನಕ್ಕೆ 2 ಡಾಲರ್-ಅಂತರಾಷ್ಟ್ರೀಯ ಮಾನದಂಡ) ಕಡಿಮೆ ಸಂಪಾದಿಸುವವರನ್ನು ಬಡವರೆಂತಲೂ, ತಿಂಗಳಿಗೆ 16 ಸಾವಿರದಿಂದ 83 ಸಾವಿರದವರೆಗೆ ಉಳಿಯುವ 40 ಚಿಲ್ಲರೆ ಕೋಟಿ ಜನರನ್ನು ನಂತರದ ಐದು ವರ್ಷಗಳಲ್ಲಿ ಮಧ್ಯಮವರ್ಗಕ್ಕೆ ತರಲಾರರೇ? ಆದರೆ ವಾಸ್ತವ ಇದಕ್ಕಿಂತ ಬಹಳ ಭಿನ್ನವಾಗಿದೆ. ಅದನ್ನು ನಂತರ ನೋಡೋಣ. ಆದರೆ ಈ ರೀತಿಯ ಒಂದು ಮಧ್ಯಮವರ್ಗವನ್ನು ಸೃಷ್ಟಿಸುವ ಮಾತುಗಳು ಆಕಸ್ಮಿಕವಾಗಿ ಬರುತ್ತಿಲ್ಲ, ಕಳೆದ 24 ವರ್ಷಗಳ ಹೊಸ ಆರ್ಥಿಕ ನೀತಿಯು ಒಂದು ಗಣನೀಯ ಪ್ರಮಾಣದ ಮಧ್ಯಮ ವರ್ಗವನ್ನು ಸೃಷ್ಟಿಸಿರುವುದು ವಾಸ್ತವ. ಆ ಮಧ್ಯಮ ವರ್ಗವು ಇನ್ನೂ ಕೆಳಗಿರುವ ಬಹುಸಂಖ್ಯಾತರಲ್ಲಿ ಹೊಸ ಆಶೆಯನ್ನು ಮೂಡಿಸಿರುವುದೂ ವಾಸ್ತವ. ಇದೆಲ್ಲವೂ ಜಾಗತಿಕ ಬಂಡವಾಳದ ಹರಿವಿನ ಕಾರಣಕ್ಕೇ ಆಗಿದೆಯೆಂಬಂತೆ ನವ ಆರ್ಥಿಕ ನೀತಿಯು ಈ ದೇಶಗಳಲ್ಲಿ ಪ್ರ... ಮತ್ತು ದ.ಕೊರಿಯಾವನ್ನು ಮಾದರಿ ದೇಶದಂ... ಅದುವರೆಗೆ ಅಮೆರಿಕ ನೀಡುತ್ತಿದ್ದ ಸ... ಕಡಿಮೆಯಾಯಿತು. ಪರಿಣಾಮವಾಗಿ ಇಂದು ... ಮತ್ತಷ್ಟು ಹೆಚ್ಚಿದೆ ಮತ್ತು ಮಧ್ಯಮ ವರ್ಗ... ಹೆಚ್ಚಾಗಿದೆ.

ಭಾರತದ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗಿ... ಹೆಚ್ಚು ಬೆಳವಣಿಗೆಯ ದರವನ್ನು ದಾಖಲಿಸಿದ ... (2003ರಿಂದ 2008) ಉದ್ಯೋಗ ಸೃಷ್ಟಿ ಅ... ಮೇಲೆ ಹೇಳಲಾದ ರೀತಿಯ ಒಂದು ಹೊಸ ...

ಚುನಾವಣೆ: ಸಾಧ್ಯತೆ, ನಿರೀಕ್ಷೆ ಮತ್ತು ವಾಸ್ತ...

ಆಳುವ ಮೈತ್ರಿಕೂಟದ ನೇತೃತ್ವ ವಹಿಸಲು ತುದಿಗಾಲಲ್ಲಿ ನಿಂತಿರುವ ಎರಡು ಪಕ್ಷಗಳು ಈ ಸಾರಿ ಒಂದು ಮುಖ್ಯ ಸಂಗತಿಯನ್ನು ಪ್ರಸ್ತಾಪಿಸಿದ್ದಾವೆ. ಇದುವರೆಗಿನ ಚುನಾವಣಾ ಇತಿಹಾಸದಲ್ಲಿ ಕಂಡರಿಯದ ಮತ್ತು ಭಾರತದ ಆರ್ಥಿಕತೆಯ ದೃಷ್ಟಿಯಿಂದ ಮಹತ್ವದ್ದಾದ ಭರವಸೆ ಇದು. ಕೋಟ್ಯಾಂತರ ಮಧ್ಯಮ ವರ್ಗವನ್ನು ಸೃಷ್ಟಿಸುವ ಭರವಸೆ. ಇಂತಹದ್ದೊಂದು ಭರವಸೆಯನ್ನು ಇದುವರೆಗೆ ಯಾರೂ ನೀಡಿರಲಿಲ್ಲ ಎಂಬ ಕಾರಣಕ್ಕೆ ಮಾತ್ರ ಇದು ಮಹತ್ವದ್ದಲ್ಲ; ಬದಲಿಗೆ, ಇದರ ಹಿಂದೆ ಭಾರತದ ಆರ್ಥಿಕ ನೀತಿಗಳನ್ನು ರೂಪಿಸುತ್ತಿರುವವರ ಒಂದು ದೃಷ್ಟಿಕೋನ ಕೆಲಸ ಮಾಡುತ್ತಿದೆ. ಆ ಕಾರಣಕ್ಕಾಗಿ ಇದು ಚರ್ಚೆಗೆ ಅರ್ಹವಾದ ಸಂಗತಿಯಾಗಿದೆ.


ಮೊದಲಿಗೆ ಅವರೇನೆಂದು ಹೇಳಿದ್ದಾರೆಂಬುದನ್ನು ನೋಡೋಣ.

ಬಿಹಾರದ ಕಿಷನ್‌ಗಂಜ್‌ನಲ್ಲಿ ಭಾಷಣ ಮಾಡುತ್ತಾ ರಾಹುಲ್ ಗಾಂಧಿ ಹೀಗೆ ಹೇಳಿದರು: "ಪ್ರಸ್ತುತ ಭಾರತದಲ್ಲಿ ಬಡತನ ರೇಖೆಗಿಂತ ಮೇಲಿರುವ, ಆದರೆ ಮಧ್ಯಮ ವರ್ಗಕ್ಕಿಂತ ಕಡಿಮೆ ಆದಾಯವನ್ನು ಹೊಂದಿರುವ ಒಂದು ದೊಡ್ಡ ವರ್ಗವಿದೆ. ಮುಂದಿನ ಐದು ವರ್ಷಗಳಲ್ಲಿ ಕಾಂಗ್ರೆಸ್ ಪಕ್ಷವು 70 ಕೋಟಿ ಜನರನ್ನು ಮಧ್ಯಮ ವರ್ಗದ ಮಟ್ಟಕ್ಕೆ ತರುತ್ತದೆ."

ಭಾರತೀಯ ಜನತಾ ಪಕ್ಷವೂ ತನ್ನ ಪ್ರಣಾಳಿಕೆಯಲ್ಲಿ ಈ ರೀತಿಯ ಮಾತನ್ನು ಹೇಳಿದೆ: "ಭಾರತದಲ್ಲಿಂದು ಅಪಾರ ತಿಳಿವಳಿಕೆ, ಪ್ರತಿಭೆ ಮತ್ತು ಕೊಳ್ಳುವ ಶಕ್ತಿಯನ್ನು ಹೊಂದಿರುವ ದೊಡ್ಡ ಮಧ್ಯಮ ವರ್ಗವಿದೆ. ಬಡತನದ ನೆಲೆಯಿಂದ ಮೇಲೇರಿದ್ದು ಇನ್ನೂ ಮಧ್ಯಮ ವರ್ಗವಾಗಿ ಸ್ಥಿರಗೊಂಡಿಲ್ಲದ ಈ 'ನವ ಮಧ್ಯಮ ವರ್ಗ'ಕ್ಕೆ ವಿಶೇಷವಾದ ಬೆಂಬಲವನ್ನು ಸರ್ಕಾರವು ನೀಡುತ್ತದೆ."

ಈ ಎರಡು ಅಂಶಗಳು ಮಾತ್ರ 'ಮಧ್ಯಮ ವರ್ಗ'ಕ್ಕೆ ಕಾಂಗ್ರೆಸ್-ಬಿಜೆಪಿಗಳು ಮಹತ್ವ ನೀಡಿರುವುದನ್ನು ಸೂಚಿಸುವುದಿಲ್ಲ, ಎರಡೂ ಪಕ್ಷಗಳು, ಅದರಲ್ಲೂ ಬಿಜೆಪಿಯು ಹೆಚ್ಚುಕಡಿಮೆ ತನ್ನಿಡೀ ಪ್ರಚಾರವನ್ನು ಈ ವರ್ಗದ ಸುತ್ತಲೇ ಕೇಂದ್ರೀಕರಿಸಿತ್ತು, ಇಲ್ಲಿ ಗಮನಿಸಬೇಕಾದ ಒಂದು ಅಂಶವೆಂದರೆ, ಫೋಕಸ್ ಇರುವುದು ಈಗಾಗಲೇ ಮಧ್ಯಮ ವರ್ಗವಾಗಿ ಸ್ಥಿರಗೊಂಡಿರುವವರ ಮೇಲಲ್ಲ; 'ಬಡತನ ರೇಖೆಯ ಮೇಲಕ್ಕೆ ಬಂದಿರುವ'ವರ ಮೇಲೆ. ಸದರಿ ಪಕ್ಷಗಳ ಪ್ರಕಾರ ಹೊಸದಾಗಿ ಮತದಾನದ ಹಕ್ಕನ್ನು

ಸಂಪಾದಿಸುವವರನ್ನು ಮಧ್ಯಮ ವರ್ಗವೆಂತಲೂ ಪರಿಗಣಿಸಲಾಗುತ್ತಿದೆ (ಮೆಕೆನ್ಸಿ ಗ್ಲೋಬಲ್ ಇನ್‌ಸ್ಟಿಟ್ಯೂಟ್ ಮಾನದಂಡ). ಈ ಮಾನದಂಡದ ಪ್ರಕಾರ 2005ರಲ್ಲಿ ಭಾರತದಲ್ಲಿ 5 ಕೋಟಿ ಮಧ್ಯಮ ವರ್ಗದವರಿದ್ದರು. ಇವತ್ತು ಈ ದೇಶದ ಅಭಿವೃದ್ಧಿ ದರ ದುಪ್ಪಟ್ಟಾದರೆ 2025ರ ಹೊತ್ತಿಗೆ 58 ಕೋಟಿ ಮಧ್ಯಮ ವರ್ಗದವರಾಗುತ್ತಾರೆ ಎಂದು ಅಂದಾಜಿಸಲಾಗುತ್ತಿದೆ. ಅಂದರೆ



ಮುಂದಿನ 11 ವರ್ಷಗಳಲ್ಲಿ, ಆದರೆ ಕಾಂಗ್ರೆಸ್‌ನ ಅಧಿನಾಯಕ ಮುಂದಿನ 5 ವರ್ಷಗಳಲ್ಲೇ 70 ಕೋಟಿ ಜನರನ್ನು 'ಸ್ಥಿರ' ಮಧ್ಯಮ ವರ್ಗದವರನ್ನಾಗಿಸುವ ಮಾತನ್ನಾಡುತ್ತಿದ್ದಾರೆ. ಬಿಜೆಪಿ ಯಾವ ಸಂಖ್ಯೆಯನ್ನೂ ಹೇಳಿಲ್ಲವಾದರೂ, ಅದರ ಸರ್ವಾಧಿಕಾರಿ ಮೋದಿಯ ಮಾಯಾಜಾಲದ ಪರಿ ಇನ್ನೂ ಹೆಚ್ಚಿನದ್ದನ್ನೇ ಸಾಧಿಸುವ ಯೂಫೋರಿಯಾವನ್ನು ನಿರ್ಮಾಣ ಮಾಡುತ್ತಿದೆ.

ಮೇಲಿನ ಮಾನದಂಡಗಳಿಗೆ ಹೊಂದಿಕೊಳ್ಳುವ 60 ಕೋಟಿ ಮಧ್ಯಮ ವರ್ಗ ಇನ್ನೈದು ವರ್ಷಗಳಲ್ಲಿ ಸೃಷ್ಟಿಯಾಗುವುದಾದರೆ, ಸಮಾಜವಾದವೂ ಬೇಡ ಎಂದುಬಿಡಬಹುದೇನೋ? ಇಷ್ಟೇ ಮಾಡಿರುವವರು, ಇನ್ನೂ ನಂಬಿಕೊಂಡಿರುವವರು, ಇನ್ನೂ ಒಳ್ಳೆಯದು ಕಾದಿದೆ ಎಂಬ ಭ್ರಮೆಯನ್ನು ಮೂಡಿಸಲು ಪ್ರಯತ್ನ ಮಾಡುತ್ತಿದ್ದಾರೆ.

ಪ್ರಪಂಚದ ಬೇರೆ ದೇಶಗಳ ಅನುಭವದಲ್ಲಿ ಎಲ್ಲಿಯಾದರೂ ಮಧ್ಯಮ ವರ್ಗವನ್ನು ಸೃಷ್ಟಿಸುವ ಪ್ರಯೋಗಗಳು ಯಶಸ್ವಿಯಾಗಿವೆಯೇ ಎಂಬುದನ್ನು ನೋಡೋಣ. ಇಂತಹ ಪ್ರಜ್ಞಾಪೂರ್ವಕ ಪ್ರಯತ್ನ ನಡೆದ ಎರಡು ದೇಶಗಳೆಂದರೆ ದಕ್ಷಿಣ ಕೊರಿಯಾ ಮತ್ತು ಬ್ರೆಜಿಲ್.

1965ರಿಂದ 1986ರವರೆಗೆ ದಕ್ಷಿಣ ಕೊರಿಯಾದ ಬೆಳವಣಿಗೆಯ ದರ 6.5% ಇದ್ದು, ವಾರ್ಷಿಕ ತಲಾ ಆದಾಯವು 1986ರ ಹೊತ್ತಿಗೆ 7,700 ಡಾಲರ್ ಮುಟ್ಟಿತ್ತು, ಅದೇ ಅವಧಿಯಲ್ಲಿ ಬ್ರೆಜಿಲ್‌ನಲ್ಲಿ ಸರಾಸರಿ 5.6% ಬೆಳವಣಿಗೆಯ ದರವಿದ್ದು, ವಾರ್ಷಿಕ ತಲಾ ಆದಾಯವು 1986ರ ಹೊತ್ತಿಗೆ 7,600 ಡಾಲರ್‌ಗಳಾಗಿತ್ತು. ಅಂದರೆ ತಲಾ ಆದಾಯದಲ್ಲಿ ಅಂತಹ ದೊಡ್ಡ ವ್ಯತ್ಯಾಸವಿರದ ಈ ದೇಶಗಳ ಮಧ್ಯಮ ವರ್ಗದ ಪ್ರಮಾಣ ಮಾತ್ರ ಭಿನ್ನವಾಗಿತ್ತು, ದ.ಕೊರಿಯಾದಲ್ಲಿ ಮಧ್ಯಮ ವರ್ಗದ ಪ್ರಮಾಣ 53% ಇದ್ದರೆ, ಬ್ರೆಜಿಲ್‌ನಲ್ಲಿ 29% ಮಾತ್ರ ಇತ್ತು. ತಲಾ ಆದಾಯ ಹೆಚ್ಚಾಗಿದ್ದರೂ, ಬ್ರೆಜಿಲ್‌ನಲ್ಲಿ ಅಸಮಾನತೆ ಹೆಚ್ಚಿದ್ದರಿಂದ ಈ ವ್ಯತ್ಯಾಸ ಉಂಟಾಗಿತ್ತು, 1986ರ ನಂತರ ...

ವರ್ಗ ಸೃಷ್ಟಿಯಾದದ್ದೂ ನಿಜ. ಆದರೆ ಅದೇ ಸ... ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಸೃಷ್ಟಿಯಾದ ಉ... ಅಸಂಘಟಿತ ವಲಯದ್ದಾಗಿದ್ದವು ಮತ್ತು ಅ... ಮತ್ತು ಕೆಳಮಧ್ಯಮವರ್ಗವನ್ನು ಸಂಕಷ್ಟಕ್ಕೆ ತಳ್ಳಿ... ಗಾತ್ರದ ಕುಬೇರರು ಹತ್ತರ ಸಂಖ್ಯೆಯಲ್ಲಿ ... ಹೀಗಿರುವಾಗ ಬಂದ ಲೋಕಸಭಾ ಚು... ಸಾಮಾನ್ಯ ಜನರಲ್ಲಿ ಹುಟ್ಟು ಹಾಕಿರುವ ನಿರ... ಮತ್ತು ಆಕ್ರೋಶಗಳನ್ನು ಗುರಿ ಮ... ಮಾತನಾಡುವುದು ರಾಜಕೀಯ... ಅನಿವಾರ್ಯ ವಾಗಿದೆ. ಇದನ್... ಕಾಂಗ್ರೆಸ್ ಮಾತ್ರವಲ್ಲದೇ ಆಮ್‌ಆ... ಮಾಡಿದೆ. ಬೆಲೆ ಏರಿಕೆ, ಭ... ನಿರುದ್ಯೋಗ, ಉದ್ಯೋಗ ಭದ್ರತೆ... ಮುನ್ನೆಲೆಗೆ ಬಂದಿವೆ.

ಪ್ರತೀ ವರ್ಷ 1.2 ಕೋ... ದುಡಿವ ಜನರು ದೇಶ... ಸೇರ್ಪಡೆಯಾಗುತ್ತಿದ್ದರೆ, ... ಉದ್ಯೋಗಗಳು ಮಾತ್ರ ಸೃಷ್ಟಿ... ಉಳಿದವರು ಅಸಂಘಟಿತ ವಲಯ... ಅರೆ ಉದ್ಯೋಗದ ಸ್ಥಿತಿಯ... ಮಾಡುತ್ತಿದ್ದಾರೆ. ನಿಜ ಏನೆಂದರೆ ... ರೀತಿ ಅಭದ್ರತೆಯಲ್ಲಿ ಇರುವು... ಭ್ರಷ್ಟಾಚಾರವು ಹೆಚ್ಚಾಗಿರುವು... ಕುಬೇರರು ಹೆಚ್ಚಾಗಿದ್ದಾರೆ. ಅವರ... ಹೆಚ್ಚಾಗಿದೆ. ಆ ಮೂಲಕ ದೇಶದ ... ದರವೂ ಒಂದು ಪ್ರವ... ಉಳಿದುಕೊಂಡು ಬಂದಿದೆ. ಅಂತಹುದೇ ... ನೀತಿಯನ್ನು ಇನ್ನು ಮುಂದಕ್ಕೂ ಮುಂದುವರ... ಕಾಂಗ್ರೆಸ್ಸು ಮತ್ತು ಅದನ್ನು ಮತ್ತಷ್ಟು ಆಕ್ರಮಣ... ಮಾಡಬಯಸುವ ಬಿಜೆಪಿಗಳು ಮಧ್ಯಮವರ್ಗ... ಪ್ರಮಾಣದಲ್ಲಿ ಹಿಗ್ಗಿಸಬಯಸುವ ... ಮಾತನಾಡುತ್ತಿದ್ದಾರೆ. ಇದು ಪರಸ್ಪರ ವೈರುಧ್ಯದಿಂ...

ಜಾಗತಿಕ ಬಂಡವಾಳ(ಇದರಲ್ಲಿ ಅಂಬಾ... ಅದಾನಿ ಇತ್ಯಾದಿ ಭಾರತದ ದೊಡ್ಡ ಬಂ... ಬಂಡವಾಳವೂ ಇದೆ)ದ ಹರಿವನ್ನು ಎಷ್ಟು ... ಅಷ್ಟು ಹಿಗ್ಗಿಸುವುದು ಸರ್ಕಾರದ ಆರ್ಥಿಕ ನೀ... ಅವರ ಉದ್ದಿಮೆಗಳ ಮೇಲೆ ತೆರಿಗೆಯನ್ನು ... ಸಂಪನ್ಮೂಲದಿಂದ ಸಾಮಾಜಿಕ ಕಲ್ಯಾಣದ... ಕ್ರಮಗಳನ್ನು ಹೆಚ್ಚಿಸಬಹುದು. ಆದರೆ ... ಬಂಡವಾಳದ ಹರಿವು ಕಡಿಮೆಯಾಗುತ್ತದೆ. ಹೀಗ... ತೆರಿಗೆ ಹಾಕುವುದಿಲ್ಲ, ಕಾರ್ಮಿಕರಿಗೆ ಬದುಕ... ಭದ್ರತೆ ಕೊಟ್ಟರೆ ಬಂಡವಾಳದ ಹರಿವು ಕಡಿಮ... ಹಾಗಾಗಿ ಅದನ್ನೂ ಕೇಳುವುದಿಲ್ಲ, ಕೃಷಿ ಕ್ಷೇ... ಚಿಲ್ಲರೆ ವ್ಯಾಪಾರ ಕ್ಷೇತ್ರದಲ್ಲಿ ರೈತರು ಹ... ವ್ಯಾಪಾರಸ್ಥರನ್ನು ರಕ್ಷಿಸುವುದಿಲ್ಲ; ಏಕೆಂದರೆ ... ಆರ್ಥಿಕ ನೀತಿಗೆ ವಿರುದ್ಧ. ಈ ನೀತಿಯಲ್ಲಿ ... ತರದೇ, ಸ್ಥಿರ ಮಧ್ಯಮವರ್ಗವನ್ನು ಕೋಟಿಗಟ್ಟ... ಸೃಷ್ಟಿಸುತ್ತಾರೆ?

ಸಮಾಜವಾದ ಮಾತ್ರ ಅಭಿವೃದ್ಧಿ ಮತ್ತು... ಯಿಂದ ಕೂಡಿದ ಅಭಿವೃದ್ಧಿಯನ್ನು ತರ... ಇತಿಹಾಸವು ಅದನ್ನು ಸಾಬೀತುಗೊಳಿಸಿದೆ... ಭ್ರಮೆಗಳನ್ನು ಕಟ್ಟಿಕೊಡುವ ಕಲೆ ಬಂಡವಾಳಶಾ... ಚುನಾವಣಾ ಸಂದರ್ಭವು ಆ ಕಲೆಯನ್ನು ... ಪ್ರದರ್ಶಿಸಲು ಸಾಧ್ಯವಾಗುವ ನಾಟಕೋತ್ಸ... ಕೇಳಬೇಕಾದ ಪ್ರಶ್ನೆಗಳನ್ನು ಕೇಳದೇ, ಬಾಯಿ ತೆ... ನೋಡುವ ಪ್ರೇಕ್ಷಕರಿರುವ ತನಕ ... ನಡೆಯುತ್ತಿರುತ್ತದೆ.

ರಾಮದೇವನ ಆಶ್ರಮದಲ್ಲಿ ಪತ್ನಿಯನ್ನು ಬಚ್ಚಿಟ್ಟಿರುವ ಮೋದಿ





ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

ನರಹಂತಕ ನರೇಂದ್ರ ಮೋದಿಯ 'ಧರ್ಮಪತ್ನಿ' ಜಶೋದಾಬೆನ್ ಈಗೆಲ್ಲಿದ್ದಾರೆ? ಆಕೆಗಾಗಿ ಮಾಧ್ಯಮದವರು ಎಷ್ಟು ಹುಡುಕಾಡಿದರೂ ಆಕೆ ಸಿಗುತ್ತಿಲ್ಲ ಯಾಕೆ? ಆಕೆ ತನ್ನ 'ಚಾರ್ ಧಮ್' ಯಾತ್ರೆಯಿಂದ ಮೇ 17 ನೇ ತಾರೀಖು - ಅಂದರೆ ಲೋಕಸಭೆಯ ಚುನಾವಣೆಯ ಫಲಿತಾಂಶಗಳು ಪ್ರಕಟವಾದ ಮಾರನೆ ದಿನ - ಗುಜರಾತಿಗೆ ವಾಪಸ್ ಬರುತ್ತಾರೆಂದು ಆಕೆಯ ಸಹೋದರ ಹೇಳಿರುವುದರ ಹಿಂದಿನ ಮರ್ಮವೇನು?


ಇಂತಹ ಎಲ್ಲ ಪ್ರಶ್ನೆಗಳ ಉತ್ತರಗಳಿಗೂ, ಮೋದಿಯ ಕಪಟತನಕ್ಕೂ ಬಿಡಿಸಲಾಗದ ನಂಟಿದೆ.

ಮೋದಿ ಬರೋಡಾದಲ್ಲಿ ಕಳೆದ ಏಪ್ರಿಲ್ ಒಂದು ನಾಮಪತ್ರ ಸಲ್ಲಿಸಿದಾಗ ಪ್ರಥಮಬಾರಿಗೆ ತಾನು ವಿವಾಹಿತ ಎಂದು ಘೋಷಿಸಿಕೊಂಡದ್ದಕ್ಕೂ, ಅದರ ಹಿಂದಿನ ದಿನವೇ ಜಶೋದಾಬೆನ್ ತನ್ನ ಸಹೋದರನ ಮನೆಯಿಂದ ನಾಪತ್ತೆ ಆಗಿದ್ದಕ್ಕೂ ನೇರಾನೇರಾ ಸಂಬಂಧವಿದೆ. ನಾಮಪತ್ರದಲ್ಲಿ ಜಶೋದಾಬೆನ್ ಅವರ ಹೆಸರನ್ನು ಮಾತ್ರ ಲಗತ್ತಿಸಿದ್ದ ಮೋದಿ ಆಕೆಯ ಪಗಾರ, ಉಳಿತಾಯ, ಆಸ್ತಿಪಾಸ್ತಿಗಳ ಬಗ್ಗೆ ತನಗೇನೂ ಗೊತ್ತಿಲ್ಲ ಎಂದು ಸುಳ್ಳು ಹೇಳಿದ್ದ. ಆದರೆ ಆಕೆ ಎಲ್ಲಿದ್ದಾಳೆ? ಹೇಗಿದ್ದಾಳೆ? ಎಷ್ಟು ಸಂಬಳ ದುಡಿಯುತ್ತಿದ್ದಾಳೆ ಎಂಬುದೆಲ್ಲಾ ಆತನಿಗೆ ಗೊತ್ತಿತ್ತು ಎಂಬುದು ಹಲವು ವರ್ಷಗಳ ಹಿಂದೆಯೇ ಸಾಬೀತಾಗಿತ್ತು.

ಇಲ್ಲವಾದರೆ 'ಓಪನ್' ಪತ್ರಿಕೆಯ ವರದಿಗಾರರು ಹಲವು ವರ್ಷಗಳ ಹಿಂದೆ ಆಕೆಯನ್ನು ಭೇಟಿಯಾಗಲು ಹೋಗಿದ್ದಾಗ ಪತ್ರಕರ್ತರ ಆಗಮನದ ಬಗ್ಗೆ ಶಾಲೆಯ ಪ್ರಾಂಶುಪಾಲರು 'ಮೇಲಿನವರಿಗೆ' ತಿಳಿಸಿದ್ದೇಕೆ? ನಂತರ ವಿವಿಧ ವಾಹನಗಳಲ್ಲಿ ಹಲವಾರು ಅಪರಿಚಿತ ವ್ಯಕ್ತಿಗಳು ಬಂದು ಜಶೋದಾಬೆನ್ ಅವರು ಬಾಯಿ ಬಿಡದಂತೆ ಧಮಕಿ ಹಾಕಿದ್ದು ಯಾಕೆ? ಅದೇ ರೀತಿ ಟೈಮ್ಸ್ ಆಫ್ ಇಂಡಿಯಾದ ಪತ್ರಕರ್ತ ಆಕೆಯನ್ನು ಸಂದರ್ಶಿಸಲು ಹೋಗಿದ್ದಾಗ ಸ್ವತಃ ಮೋದಿಯೇ ಆತನಿಗೆ ಫೋನ್ ಮಾಡಿ "ನೀನು ಯಾಕೆ ಅಲ್ಲಿಗೆ ಹೋಗಿದ್ದೀಯಾ? ಏನು ನಿನ್ನ ಅಜೆಂಡಾ?" ಎಂದು ಬೆದರಿಸಿದ್ದು ಯಾಕೆ?

ಮೋದಿ ತನ್ನ ಧರ್ಮಪತ್ನಿಯನ್ನು ತಿರಸ್ಕರಿಸಿದ್ದರೂ, ನಾಲ್ಕು ದಶಕಗಳ ಕಾಲ ಆಕೆಯನ್ನು ನಿರ್ಲಕ್ಷಿಸಿದ್ದರೂ, ಆಕೆ ತನ್ನ ವಿರುದ್ಧ ಬಾಯಿ ಬಿಡದಂತೆ ನೋಡಿಕೊಳ್ಳುತ್ತಲೇ ಬಂದಿದ್ದಾನೆ.

ಪಾಪ ಜಶೋದಾಬೆನ್ ಅಮಾಯಕಿ. ಕೆಳವರ್ಗದಲ್ಲಿ ಹುಟ್ಟಿ ಬೆಳೆದ ಸಂಪ್ರದಾಯಸ್ಥೆ. ತನ್ನ ಜೀವನದಲ್ಲಿ ಆಗಿದ್ದೆಲ್ಲವನ್ನು ತುಟಿಪಿಟಿಕ್ ಎನ್ನದೇ ಸ್ವೀಕರಿಸಿದ ಮಹಿಳೆ. 'ಪತಿಯೇ ಪರಮ ದೈವ' ಎಂಬ ನಿಲುವಿನ ಆಕೆ ಈಗಲೂ ಆತನ ಶ್ರೇಯೋಭಿವೃದ್ಧಿಯನ್ನು ಬಯಸುವ ಮುಗ್ಧೆ. ರಾಧೆ ಬೇರೆಯವನನ್ನು



ಮದುವೆಯಾಗಿದ್ದರೂ ಕೃಷ್ಣನನ್ನು ಪ್ರೇಮಿಸಿದಂತೆ ಜಶೋದಾಬೆನ್ ಎಂದೂ ಬೇರೆಯವನ ಕೈ ಹಿಡಿಯುವ ಬಗ್ಗೆ ಯೋಚಿಸಲೂ ಇಲ್ಲ.

ಆದರೆ ಮೋದಿ? ಆತ ಕಪಟ ಕೃಷ್ಣ. ಮದುವೆಯಾದ ಹೆಂಗಸನ್ನು ಎಲ್ಲ ತರಹದ ಕಷ್ಟಕಾರ್ಪಣ್ಯಗಳನ್ನು ಎದುರಿಸಲು ಬಿಟ್ಟ; ದಾಂಪತ್ಯದ ಸುಖ, ಸಂಸಾರದ ನೆಮ್ಮದಿ, ಭವಿಷ್ಯದ ಬಗ್ಗೆ ಭರವಸೆ ಎಂತದ್ದೂ ಇಲ್ಲದೆ ಜೀವನವನ್ನು ಏಕಾಂಗಿಯಾಗಿ ಎದುರಿಸುವಂತೆ ಮಾಡಿದ. ಅಷ್ಟೇ ಅಲ್ಲದೆ ರಸಿಕ ಶಿಖಾಮಣಿಯಂತೆ ಮಾನಸಿ ಸೋನಿ ಎಂಬ ಯುವತಿಯ ಸೆಳೆತಕ್ಕೆ ಬಿದ್ದು ಆಕೆಯೊಂದಿಗೆ ಸಂಬಂಧ ಇಟ್ಟುಕೊಂಡ. ಮಾನಸಿ ಕೈಕೊಟ್ಟ ನಂತರ ಆಕೆಯ ಹಿಂದೆ ತನ್ನ ಸರ್ಕಾರದ ಪೊಲೀಸರನ್ನೇ ಅಕ್ರಮವಾಗಿ ಛೂ ಬಿಟ್ಟ.

ಇಂತಹ ಮೋದಿ ತಾನು ವಿವಾಹಿತ ಎಂದು ಘೋಷಿಸಿಕೊಳ್ಳುವ ಹಿಂದಿನ ದಿನವೇ ಜಶೋದಾಬೆನ್ ನಾಪತ್ತೆಯಾಗಿದ್ದು ಕಾಕತಾಳಿಯವಲ್ಲ. ಹೇಳಿಕೇಳಿ ಜಶೋದಾಬೆನ್ ಗಂಡನ ಆದೇಶಗಳಿಗೆ ತಗ್ಗಿಬಗ್ಗಿ ನಡೆಯುವ ಹೆಂಗಸು. ಆಕೆಯ ಸಹೋದರರೂ ಮೋದಿಯ ಅಧಿಕಾರಕ್ಕೆ ಬೆದರುವ ಅಮಾಯಕರು. ಆದ್ದರಿಂದ ಮೋದಿಯೇ ಆಕೆಯನ್ನು ಗುಜರಾತಿನಿಂದ ಕಳುಹಿಸಿದ್ದಾನೆ ಎಂಬ ಅನುಮಾನ ಅನೇಕರಲ್ಲಿ ಇದ್ದೇ ಇತ್ತು, ಅದೀಗ ನಿಜವಾಗಿದೆ.

'ದಿ ವೀಕ್' ಪತ್ರಿಕೆಯಲ್ಲಿ ಕೆಲವು ದಿನಗಳ ಹಿಂದೆ ಪ್ರಕಟವಾಗಿರುವ ವರದಿಯೊಂದರಲ್ಲಿನ ಮಾಹಿತಿ ಹೀಗಿವೆ:

"ಮೋದಿ ತಾನು ವಿವಾಹಿತ ಎಂದು ಘೋಷಿಸಿಕೊಳ್ಳುವ ಸಮಯಕ್ಕೆ ಸರಿಯಾಗಿ ಹಿಂದೂ ಸಂಘಟನೆಯ ಮತ್ತು ಭದ್ರತಾ ವ್ಯವಸ್ಥೆಯ ಹಲವಾರು ಜನ ಹಿಂದೂ ಯಾತ್ರಿಕರ ವೇಷ ಧರಿಸಿಕೊಂಡು ಮೂರು ಎಸ್‌ಯುವಿ ವಾಹನಗಳಲ್ಲಿ ಜಶೋದಾಬೆನ್ ಅವರ ಸಹೋದರನ ಮನೆಯ ಮುಂದೆ ಹಾಜರಾದರು. "ನಿಮ್ಮ ಹಲವಾರು ದಿನಗಳ ಆಶಯವಾದ 'ಚಾರ್ ಧಮ್' ಯಾತ್ರೆ ಈಗ ನನಸಾಗುವ ಸಮಯ ಬಂದಿದೆ. ನಮ್ಮೊಂದಿಗೆ ಬನ್ನಿ" ಎಂದು ಆಕೆಯನ್ನು ಅಹಮದಾಬಾದಿಗೆ ಕರೆದುಕೊಂಡು ಹೋದರು. ಆನಂತರ ಉತ್ತರ ಪ್ರದೇಶ ಮತ್ತು ಉತ್ತರಖಾಂಡ್ ಗಡಿಯಿಂದ ಆಕೆಯನ್ನು ವಿಶೇಷ ವಿಮಾನದಲ್ಲಿ ರಿಷಿಕೇಶ್‌ನಲ್ಲಿರುವ ಆಶ್ರಮವೊಂದಕ್ಕೆ ಕರೆದುಕೊಂಡು ಹೋದರು. ಆ ಆಶ್ರಮವನ್ನು ನಡೆಸುವವನು ಯೋಗಾ ಗುರು ಮತ್ತು ಮೋದಿ ಬೆಂಬಲಿಗ ಬಾಬಾ ರಾಮದೇವ್.

ಇವತ್ತಿಗೂ ಜಶೋದಾಬೆನ್ ಆ ಆಶ್ರಮದಲ್ಲಿ ಇದ್ದಾರೆ. ಆದರೆ ತನ್ನನ್ನು ಕರೆದುಕೊಂಡು ಬಂದು ತನ್ನೊಂದಿಗೆ ಇರುವ ಜನ ನಿಜವಾಗಲೂ ಯಾತ್ರಿಕರಲ್ಲ, ಬದಲಾಗಿ ಗುಜರಾತಿನ ಪೊಲೀಸರು ಮತ್ತು ಭದ್ರತಾ ವ್ಯವಸ್ಥೆಯವರು ಎಂಬುದು ಆಕೆಗೆ ಪ್ರಾಯಶಃ ಗೊತ್ತಿಲ್ಲ. ಅವರೆಲ್ಲ ಆಕೆ ಮಾಧ್ಯಮದವರಿಗೆ ಸಿಗದಂತೆ, ಯಾರೊಂದಿಗೂ ಮಾತನಾಡದಂತೆ ಆಕೆಯ ಸುತ್ತ ಇದ್ದು ಎಚ್ಚರ ವಹಿಸುತ್ತಿದ್ದಾರೆ."

ಎಂದೂ ವಿಮಾನವನ್ನು ಕಂಡಿರದಿದ್ದ, ಎಸ್‌ಯುವಿ ತಹರದ ಐಷಾರಾಮಿ ವಾಹನಗಳನ್ನು ಏರಿರದಿದ್ದ ಜಶೋದಾಬೆನ್ ಈಗ ಏಕಾಏಕಿ ಅದನ್ನೆಲ್ಲ ಅನುಭವಿಸಿದ್ದಾರೆಂದರೆ ಮೋದಿಯೇ ಆಕೆಯನ್ನು ಬಾಬಾ ರಾಮದೇವನ ಆಶ್ರಮಕ್ಕೆ ಕಳುಹಿಸಿದ್ದಾನೆ ಎಂದು ಸ್ಪಷ್ಟವಾಗುತ್ತಲ್ಲವೆ.

ಇದರ ಅರ್ಥ ಏನು? ಮೋದಿ ಈಗಲೂ ತನ್ನ ಸ್ವಾರ್ಥಕ್ಕಾಗಿ ಜಶೋದಾಬೆನ್ ಎಂಬ ಅಮಾಯಕಿಯನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾನೆ ಎಂದಲ್ಲವೇ? ಇಂತಹ ಮನುಷ್ಯ ಈ ದೇಶದ ನಾಯಕನಾಗಬೇಕೇ? ●

ನಿಷ್ಠುರ ಅಧಿಕಾರಿಯ ಪತ್ನಿಯ ನಿವೇದನೆ...

ಆತ್ಮೀಯ ಭಾರತೀಯರೆ,

ಕಳೆದ ಏಳು ದಿನಗಳಲ್ಲಿ ನಾವು ಮೂರು ವಿವಿಧ ರೀತಿಗಳಲ್ಲಿ ನರೇಂದ್ರ ಮೋದಿಯ ಸಮಾನತೆ ಮತ್ತು ಅಭಿವೃದ್ಧಿಯ ಮುಖವಾಡ ಕಳಚಿರುವುದನ್ನು ನೋಡಿದ್ದೇವೆ:

1. ಗಿರಿರಾಜ್ ಸಿಂಗ್ ಎಂಬ ಕಟ್ಟಾ ಮೋದಿ ಬೆಂಬಲಿಗ ಮತ್ತು ಲೋಕಸಭಾ ಅಭ್ಯರ್ಥಿ ಸಂಸದ ಮೋದಿಯನ್ನು ಟೀಕಿಸುವವರೆಲ್ಲ ಪಾಕಿಸ್ತಾನಕ್ಕೆ ಹೋಗಬೇಕು ಎಂದು ಹೇಳಿದ್ದಾನೆ.

2. ಪ್ರವೀಣ್ ತೊಗಾಡಿಯಾ ಎಂಬ ವಿಶ್ವ ಹಿಂದೂ ಪರಿಷತ್ತಿನ ನಾಯಕ ಮತ್ತು ಮೋದಿಯ ಪಡಿಜೀವ ಹಿಂದೂ ಪ್ರದೇಶಗಳಲ್ಲಿ ಮುಸಲ್ಮಾನರಿಗೆ ಪ್ರವೇಶ ಇರಕೂಡದೆಂದಿದ್ದಾನೆ.

3. ರಾಮದಾಸ್ ಕದಮ್ ಎಂಬಾತ ಮೋದಿಯ ಸಮ್ಮುಖದಲ್ಲೇ ಸಾರ್ವಜನಿಕ ಭಾಷಣದಲ್ಲಿ ಮುಸಲ್ಮಾನರನ್ನು ಪಿಶಾಚಿಗಳೆಂದು ಅವಹೇಳನ ಮಾಡಿದ್ದಾನಲ್ಲದೆ ಆ ಸಮುದಾಯದವರಿಗೆ ಬೆದರಿಕೆ ಹಾಕಿದ್ದಾನೆ.

ಈ ತರಹದ ಒರಟು ಮಾತುಗಳು ನನ್ನ ಆಳದಲ್ಲಿ ಕ್ರೋಧವನ್ನು ಕೆರಳಿಸಿವೆ. ಭಾರತೀಯಳಾಗಿ, ಸುಶಿಕ್ಷಿತ ಮಹಿಳೆಯಾಗಿ, ಶ್ರದ್ಧೆಯುಳ್ಳ ತಾಯಿಯಾಗಿ, ಹೊಣೆಯರಿತ ಸಹೋದರಿಯಾಗಿ, ಪ್ರೀತಿಯ ಮಗಳಾಗಿ, ಅಚಲ ಸ್ನೇಹಿತೆಯಾಗಿ, ಮೋದಿಯ ಸೈದ್ಧಾಂತಿಕ ವಿರೋಧಿಯಾಗಿ, ಜವಾಬ್ದಾರಿಯುಳ್ಳ ಮತದಾರಳಾಗಿ ಮತ್ತು ಸೇಡಿನ ಮನೋಪ್ರವೃತ್ತಿಯ ಸರ್ಕಾರದ ಮುಂದೆ ತಲೆಬಾಗದೆ ನಿಂತಿರುವ ಓರ್ವ ಪ್ರಾಮಾಣಿಕ ಐಪಿಎಸ್ ಅಧಿಕಾರಿಯ ಪತ್ನಿಯಾಗಿ ನನಗನ್ನಿಸುವುದೇನೆಂದರೆ ಮೋದಿಯಂತಹ ಯಾವ ಕಾರಣಕ್ಕೂ ಭಾರತದ ಪಾರ್ಲಿಮೆಂಟನ್ನು ಪ್ರವೇಶಿಸದಂತೆ ಮತದಾರರು ನೋಡಿಕೊಳ್ಳಬೇಕು.

ಕಲ್ಪಿಸಿಕೊಳ್ಳಿ... ತೀರದ ಅಧಿಕಾರದಾಹದಿಂದಾಗಿ ತನ್ನ ಮಡದಿ ಮತ್ತು ಕುಟುಂಬಕ್ಕೇ ತೋರದ ಸ್ವಪ್ರತಿಷ್ಠೆಯ ಹುಚ್ಚು ಹಿಡಿದಿರುವವನನ್ನು ಗೆಲ್ಲಿಸಿದರೆ ಏನಾಗುತ್ತದೆ?

ಕಲ್ಪಿಸಿಕೊಳ್ಳಿ... ಮಹಿಳೆಯರ ಬಗ್ಗೆ ಕಿಂಚಿತ್ತೂ ಗೌರವ ಹೊಂದಿರದ, ನಿಸ್ವಾರ್ಥ ಪ್ರೀತಿಯ ಬಗ್ಗೆ ಅರಿವಿಲ್ಲದ, ಸ್ವಯಂ ಗೀಳನ್ನು ಹೊಂದಿರುವ ಮನುಷ್ಯನನ್ನು ಗೆಲ್ಲಿಸಿದರೆ ಏನಾಗುತ್ತದೆ?

ಕಲ್ಪಿಸಿಕೊಳ್ಳಿ... ತನ್ನ ಅಪ್ರಾಮಾಣಿಕ ಶಬ್ದ ಚಮತ್ಕಾರದ ಬಗ್ಗೆ ಹೆಮ್ಮೆ ಹೊಂದಿರುವ ಆದರೆ ಇತರರ ಮಾತುಗಳ ಬಗ್ಗೆ ಒಂದಿಷ್ಟೂ ಗೌರವ ಇಲ್ಲದ ಒಬ್ಬ ಪುಢಾರಿಯನ್ನು ಗೆಲ್ಲಿಸಿದರೆ ಏನಾಗುತ್ತದೆ?

ಕಲ್ಪಿಸಿಕೊಳ್ಳಿ. . . ಅರ್ಧ ಸತ್ಯಗಳನ್ನು ಮತ್ತು ಕಲ್ಪಿತ ಅಭಿವೃದ್ಧಿಯನ್ನೇ ತನ್ನ ರಾಜಕೀಯಕ್ಕೆ ಬಂಡವಾಳ ಮಾಡಿಕೊಂಡಿರುವ ಓರ್ವ ಮೋಸಗಾರನನ್ನು ಗೆಲ್ಲಿಸಿದರೆ ಏನಾಗುತ್ತದೆ?

ಓರ್ವ ಮಹಿಳೆಯಾಗಿ, ಮಡದಿಯಾಗಿ, ಇಬ್ಬರು ಒಳ್ಳೆ ಮಕ್ಕಳ ತಾಯಿಯಾಗಿ, ನರೇಂದ್ರ ಮೋದಿಯ ನೇತೃತ್ವದ ಸರ್ಕಾರದ ದುಷ್ಟತನವನ್ನು, ಸೇಡಿನ ಮನೋಪ್ರವೃತ್ತಿಯನ್ನೂ ನಾನು ಎದುರಿಸಿದ್ದೇನೆ. ನನಗೆ ಹಲವಾರು ಬಾರಿ ಬೆದರಿಕೆಗಳನ್ನು ಮೋದಿ ಸರ್ಕಾರ ಹಾಕಿದೆ, ಆತನ ಅಸಹ್ಯ ಹುಟ್ಟಿಸುವ ವರ್ತನೆಗೆ ನಾನು ಗುರಿಯಾಗಿದ್ದೇನೆ, ನನ್ನ ಕುಟುಂಬದ ಸದಸ್ಯರನ್ನು ಅವಹೇಳನ ಮಾಡುವ ಪ್ರಯತ್ನಗಳೂ ನಡೆದಿವೆ.


ಅಧಿಕಾರದಾಹದ ಈತ ತಾನು ಬಹಳ ದೊಡ್ಡ ವ್ಯಕ್ತಿಯೆಂಬ ಭ್ರಾಂತಿಯನ್ನು ಹೊಂದಿದ್ದಾನಲ್ಲದೆ, ತನ್ನ ರಾಜಕೀಯ ಬೆಳವಣಿಗೆಗೆ ಮತ್ತು ಸ್ವಹಿತಾಸಕ್ತಿಗೆ ತನ್ನ ವಿರೋಧಿಗಳನ್ನು ನಿರ್ನಾಮ ಮಾಡಲೂ ಹಿಂಜರಿಯುವವನಲ್ಲ. ನಾನು ಅಂತಹ ಅಪಾಯವನ್ನೆಲ್ಲ ಕಂಡಿದ್ದೇನಲ್ಲದೆ ಇವತ್ತಿಗೂ ಪ್ರತಿದಿನ ಅಂತಹ ಆತಂಕದಲ್ಲಿ ಜೀವನ ಸಾಗಿಸುತ್ತಿದ್ದೇನೆ. ಈತನ ದುಷ್ಟ ಸರ್ಕಾರದ ವಿರುದ್ಧ ಅಚಂಚಲವಾಗಿ ನಿಂತಿರುವ ಧೈರ್ಯಶಾಲಿ ಅಧಿಕಾರಿಯ ಪತ್ನಿಯಾಗಿ ಇವನ್ನೆಲ್ಲ ನಾನು ಅನುಭವಿಸಿದ್ದೇನೆ.

ಯಾವ ಮಹಿಳೆಯೂ ನಾನು ಅನುಭವಿಸಿರುವ ಯಾತನೆಯನ್ನು ಅನುಭವಿಸಕೂಡದು. ನಮ್ಮ ದೇಶದ ಶೇ. 50 ಮತದಾರರು ಮಹಿಳೆಯರು. ನಾವು ಮತ ಚಲಾಯಿಸುವಾಗ ನಾವು ನಮಗಾಗಿ ಮಾತ್ರವಲ್ಲ, ನಮ್ಮ ಮಕ್ಕಳಿಗಾಗಿ, ನಮ್ಮ ಸಂಸಾರದ ಸದಸ್ಯರಿಗಾಗಿ, ನಮ್ಮ ಪ್ರೀತಿಪಾತ್ರರಿಗಾಗಿ ಮತ ಚಲಾಯಿಸುತ್ತೇವೆ. ಆದ್ದರಿಂದ ಮೋದಿಯಂತಹ ರಾಕ್ಷಸ ಯಾವ ನಿಟ್ಟಿನಲ್ಲೂ ನಮ್ಮ ಭಾರತ ದೇಶದ ಸರ್ಕಾರದ ಮುಖ್ಯಸ್ಥನಾಗುವುದು ಸರಿಯಲ್ಲ. ನಮ್ಮ ಭವಿಷ್ಯ ನಮ್ಮ ಕೈಯಲ್ಲಿದೆ.

ನಮ್ಮ ದೇಶದ ಪ್ರಜ್ಞಾವಂತರಲ್ಲಿ, ಅದರಲ್ಲೂ ವಿಶೇಷವಾಗಿ ಮಹಿಳೆಯರಲ್ಲಿ, ನಾನು ಮಾಡುವ ಮನವಿ ಯಾವುದೆಂದರೆ ದಯವಿಟ್ಟು ಈ ಬೂಸಿ ಮನುಷ್ಯನ ಸುತ್ತ ಹಬ್ಬಿರುವ ಮೀಡಿಯಾ ಹೈಪ್ ಮತ್ತು ಚಮತ್ಕಾರಿಕ ಮೋದಿಯನ್ನು ನಿರ್ಲಕ್ಷಿಸಿ, ಆತನ ನಿಜವಾದ ಅಸಲಿಯತ್ತು ಏನೆಂದು ಅರ್ಥಮಾಡಿಕೊಂಡು, ಈ ದೇಶದ ಉತ್ತಮ ಭವಿಷ್ಯವನ್ನು ಮನಸ್ಸಿನಲ್ಲಿಟ್ಟುಕೊಂಡು ನಿಮ್ಮ ಮತಗಳನ್ನು ಜವಾಬ್ದಾರಿಯಿಂದ ಚಲಾಯಿಸಿ.

ಇತಿ ನಿಮ್ಮ

ಶ್ವೇತ ಸಂಜೀವ್ ಭಟ್



ಕವಿಯತ್ರಿಯರೇ ಎಚ್ಚರಿಕೆ

ಕವಿ ವೇಷದಲ್ಲಿ ಬರುತ್ತಿದ್ದಾನೆ ಚಂದ್ರಾಚಾರಿ!


ರಾತ್ರಿ ಕಂಡ ಬಾವಿಯೊಳಕ್ಕೆ ಹಗಲು ಬೀಳ ಹೊರಟಂತೆ ಫೇಸ್‌ಬುಕ್ ಆತಿ ಸಾಹಿತಿಗಳ ವಲಯದಿಂದ ಭಯಾನಕ ಸುದ್ದಿಯೊಂದು ಹೊರಬಿದ್ದಿದೆ.

ಸಿನಿಮಾ ನಟಿ ಶೃತಿ ಸಂಸಾರವನ್ನು ನಡುಬೀದಿಯಲ್ಲಿ ಹರಾಜು ಮಾಡಿದ ಚಂದ್ರಾಚಾರಿ ಅಲಿಯಾಸ್ ಚಂದ್ರಶೇಖರ್ ಉರ್ಫ್ ಚಂದ್ರಚೂಡ್ ಯಾನೇ ಚಕ್ರವರ್ತಿ ಅರ್ಥಾತ್ ಚಂದ್ರಕಾಂತ್ ಇತ್ಯಾದಿ ನಾನಾ ವೇಷ, ಹೆಸರುಗಳನ್ನು ಹೊತ್ತ ಖದೀಮ ಈಗ ಕವಿ ಗೆಟಪ್ಪಿನಲ್ಲಿ ಅವತರಿಸಿದ್ದಾನಂತೆ. ಇದೇ ಏಪ್ರಿಲ್ 27ರ ಭಾನುವಾರ ರಾತ್ರಿ ಚಂದ್ರಾಚಾರಿ 'ಪಾಪಿಯೊಬ್ಬನ ಪ್ರೇಮ ಪದ್ಯಗಳು' ಎಂಬ ಕವನಸಂಕಲನವನ್ನು ಚಾಮರಾಜಪೇಟೆಯ ಸ್ಮಶಾನದಲ್ಲಿ ಬಿಡುಗಡೆ ಮಾಡುತ್ತಾನಂತೆ!


ಹುಟ್ಟಾ ಕಾಮುಕ, ಹೆಣ್ಣು ಬಾಕ, ಹೈಟೆಕ್ ಸರಬರಾಜುದಾರ ಚಂದ್ರಚೂಡ್ ಅಲಿಯಾಸ್ ಚಂದ್ರಾಚಾರಿಗೆ ಕೊನೆಗಾದರೂ ತಾನೊಬ್ಬ ಪಾಪಿ ಎಂಬುದು ಅರ್ಥ ವಾಯಿತಲ್ಲ!


ಇನ್ನು ಪಾಪಿ ಎಂದಮೇಲೆ ಆತನಲ್ಲಿ ಪ್ರೇಮವಾಗಲಿ, ಮನುಷ್ಯತ್ವವಾಗಲಿ ಹೇಗೆ ತಾನೇ ಸಾಧ್ಯ? ಆದೇನಿದ್ದರೂ ಕಾಮ ಮಾತ್ರ. ಹೀಗಾಗಿ ಪಾಪಿಯೊಬ್ಬನ ಪ್ರೇಮ ಪದ್ಯಗಳನ್ನು ಪಾಪಿಯೊಬ್ಬನ ಕಾಮ ಪದ್ಯಗಳೆಂದು ತಿದ್ದಿಕೊಳ್ಳಿ ಎಂಬುದು ಪಾಗಲ್ ನಂಜುಂಡಸ್ವಾಮಿ, ಹುಲಿಕುಂಟೆ ಮೂರ್ತಿ, ಜ್ಯೋತಿ ಇರ್ವತ್ತೂರು, ತಣ್ಣೀಕ್ಕೆ ಭಾರತಿಯಂಥ ಯುವ ಸಾಹಿತಿಗಳ ರೋಷಾಗ್ರಹ. ಪಾಪಿಯೊಬ್ಬನ ಪ್ರೇಮ ಪದ್ಯಗಳು ಕವನ ಸಂಕಲನವನ್ನು ಸ್ಮಶಾನದಲ್ಲಿ ಅಂದರೆ ರುದ್ರಭೂಮಿಯಲ್ಲಿ ಬಿಡುಗಡೆ ಮಾಡುತ್ತಿರುವುದೇ ಶತಮಾನದ ಅದ್ಭುತವೆಂಬಂತೆ ಒಂದೆರಡು ಟೀವಿ ಚಾನಲ್ಲುಗಳು ಸುದ್ದಿ ಮಾಡಿವೆ. ಇದರಿಂದ ಪ್ರಚೋದಿತರಾಗಿ ಕೆಲವರು 'ವಿಕಾರಿಯೊಬ್ಬನ ಆತ್ಮಚರಿತ್ರೆ'ಯನ್ನು ಪರಪ್ಪನ ಅಗ್ರಹಾರ ಜೈಲಲ್ಲಿ; 'ಕಾಮುಕನೊಬ್ಬನ ಸ್ವಗತ' ಕೃತಿಯನ್ನು ವೇಶ್ಯಾಗೃಹದಲ್ಲೇ ಬಿಡುಗಡೆ ಮಾಡುತ್ತೇವೆಂದು ಶಪಥಗೈದ ವರದಿಗಳೂ ಬರುತ್ತಿವೆ.

ಅಂದಹಾಗೆ ಹುಟ್ಟಾ ವಂಚಕ, ಮಹಾ ಕಾಮುಕ, ಹೆಣ್ಣು ಬಾಕ ಚಂದ್ರಾಚಾರಿ ಅಲಿಯಾಸ್ ಚಂದ್ರಚೂಡ ನಟಿ ಶೃತಿ ಸಂಸಾರದ ಉದ್ಧಾರ ಕಾರ್ಯವನ್ನೆಲ್ಲ ತೊರೆದು ಅದ್ಯಾವತ್ತು ಪ್ರೇಮ ಪದ್ಯಗಳನ್ನು ಬರೆಯಲಾರಂಭಿಸಿದ? ಅಂಥಾ ಶೃತಿಯೇ ಜೊತೆ ಇರುವಾಗ ಇನ್ನೆಂಥ ಪ್ರೇಮ ಪದ್ಯಗಳು ಸಾಧ್ಯ? ಕೈಹಿಡಿದ ಹೆಂಡತಿ ಮಗಳನ್ನು ಬೀದಿಗೆ ಹಾಕಿ ನಟಿ ಹಿಂದೆ ಜೊಲ್ಲು ಸುರಿಸಿಕೊಂಡು ಬಂದವನಿಗೆ ಇನ್ನೂ ಪ್ರೇಮ ಪದ್ಯಗಳು ಉದುರುತ್ತವೆ ಎಂದರೆ ಹರಾಮೀ ಚಂದ್ರಾಚಾರಿಯ ಹೃದಯದಲ್ಲಿ ಪ್ರೇಮಾಂಕುರವಾಗುವಂತೆ ಸ್ಫೂರ್ತಿಯಾದ ಆ ರಂಭೆ, ಮೇನಕೆ, ಊರ್ವಶಿಯನ್ನು



ಅನಾಹುತಕಾರಿ ಕೃತ್ಯವೆಂದರೆ ಹೆಣ್ಣು ಬಾಕ ಚಂದ್ರಾಚಾರಿಗೆ 'ಶಬರಿಯ ಅವಸರ'(?) ಎಂಬ ಮಾರ್ಮಿಕ ಹೆಸರಿನ ತನ್ನ ಕವನ ಸಂಕಲನವನ್ನು ಅರ್ಪಿಸಿದ್ದು. ಈ ಹಿಂದೆ ಚೆಡ್ಡಿವೀರ ಸೂಲಿಬೆಲೆಯನ್ನು ಕರ್ನಾಟಕದ ವಿವೇಕಾನಂದ ಎಂದು ಬಣ್ಣಿಸಿ ತನ್ನ ಕಾವ್ಯಗುಚ್ಛಗೊಂದನ್ನು ಆತನ ಪಾದಾರವಿಂದಕ್ಕರ್ಪಿಸಿದ ಇದೇ ಚೇತನಾ ಇದ್ದಕ್ಕಿದ್ದಂತೆ





ಜ್ಞಾನೋದಯವಾದವಳಂತೆ ಬಿಡದಿಯ ನಿತ್ಯಾನಂದ ಸ್ವರೂಪಿ ಚಂದ್ರಾಚಾರಿಗೆ ತನ್ನ ಹೊಸ ಕವನ ಸಂಕಲನದ ಅರ್ಪಣೆ ಮಾಡುತ್ತಾಳೆಂದರೆ ಆದಕ್ಕೆ ಬೇರೆಯದೇ ಕಾರಣವಿರಬೇಕು.

'ನಟಿ ಶೃತಿಯ ಪತಿಯಾಗಿದ್ದ ಮಹೇಂದರ್‌ಗೆ ನೀವೆ ನನಗೆ 'ಗುರುದೈವ, ವಿದ್ಯೆ ಕಲಿಸಿದ ತಂದೆ' ಎಂದೆಲ್ಲಾ ಯಾಮಾರಿಸಿ ಸಿನಿಮಾ ಡೈರೆಕ್ಷನ್ ಕಲಿಯುತ್ತೇನೆಂದು ಮಹೇಂದರ್ 'ಮನೆ ಹೊಕ್ಕವನು ಕೊನೆಗೆ ಮಹೇಂದರ್‌ನನ್ನೇ ಮನೆಯಿಂದ' ಹೊರದಬ್ಬಿ ಆತನ ಪತ್ನಿಗೆ ತಾನೇ ಗಂಡ ಎಂದು ಮಾನಗೆಟ್ಟು ಪೋಜು ಕೊಟ್ಟವನು ಪಾಪಿ ಚಂದ್ರಚೂಡ್ ಅಲಿಯಾಸ್ ಚಂದ್ರಾಚಾರಿ.

ಕೇವಲ ಶೃತಿಯಷ್ಟೇ ಅಲ್ಲ, ಹಾಸನದಲ್ಲಿರುವಾಗಲೇ ಬರೋಬ್ಬರಿ ಅರ್ಧ ಡಜನ್ ಯುವತಿಯರನ್ನು ಊರು ಬಿಡಿಸಿದ್ದ. ಶಿಕ್ಷಕಿ ಮಂಜುಳಾರನ್ನು ಇನ್ನಿಲ್ಲದಂತೆ ಕಾಡಿಬೇಡಿ ಮದುವೆಯಾಗಿ ಅವರಿಗೊಂದು ಹೆಣ್ಣು ಮಗುವನ್ನು ದಯಪಾಲಿಸಿದ ಮೇಲೂ ಈತನ ಪಶುವಾಂಛೆ ತಣಿಯಲಿಲ್ಲ. ಕೊನೆಗೆ ಹಾಸನದ ಪ್ರಜ್ಞಾವಂತರೆಲ್ಲ ಬೀದಿಗಿಳಿದು ಈತನನ್ನು ಊರು ಬಿಡಿಸಬೇಕಾಯಿತು. ಹಾಗೆ ಹಾಸನದಿಂದ ಪರಾರಿಯಾದವನು ತಾನೊಬ್ಬ ಸಿನಿಮಾ ಪತ್ರಕರ್ತ ಎಂದು ಹೇಳಿಕೊಂಡು ಗಾಂಧಿನಗರದ ಅನೇಕ ಟೀವಿ ನಟಿಯರನ್ನು ಮುಕ್ಕಿದ. ಅರಸೀಕೆರೆಯಲ್ಲಿರುವಾಗ ಚಂದ್ರಾಚಾರಿಯಾಗಿ

ದ್ದವನು ಹಾಸನಕ್ಕೆ ಬಂದು ಚಂದ್ರಶೇಖರ್ ಆದ. ನ
ಬೆಂಗಳೂರಿಗೆ ಬಂದಮೇಲೆ ತನ್ನ ಹೆಸರನ್ನು ಚಂದ್ರಚೂ
ಎಂದು ಬದಲಿಸಿಕೊಂಡು ಗಾಯಕನೊಬ್ಬನ ಕುಟುಂ
ಬೆಂಕಿ ಇಟ್ಟ. ಆತನ ಪತ್ನಿ ನಡುರಾತ್ರಿಯಲ್ಲಿ ತನ್ನನ್ನು ಯಾ
ಹರಿ ಗೋಗರೆಯುತ್ತಾಳೆ ಎಂಬುದನ್ನು ತನ್ನ ಸೆಲ್ ಫೋ
ಸ್ಪೀಕರ್ ಹಾಕಿ ಜೊತೆಗಿದ್ದವರಿಗೆಲ್ಲಾ ಕೇಳಿಸುತ್ತಿದ್ದ.

ಫಿಲ್ಮ್ ಫೈನಾನ್ಸಿಯರ್ ನಂಜುಂಡಿ ನಾಗರಬ
ಬಳಿಯ ತಮ್ಮ ಅಪಾರ್ಟ್‌ಮೆಂಟ್‌ನ ರೂಮೊಂ
ಈತನಿಗೆ ಬಿಟ್ಟುಕೊಟ್ಟರೆ ಎದುರು ಮನೆಯ ವಿವಾ
ಹೆಂಗಸನ್ನೇ ಪಟಾಯಿಸಿ ಆಕೆಯ ಗಂಡನನ್ನು ಒಡಿಸಿಬ
ಅದೇ ಅಪಾರ್ಟ್‌ಮೆಂಟ್‌ನಲ್ಲಿದ್ದ ಬಾಲಕಿಯೊಬ್ಬಳನ್ನು
ಎಂದು ಯಾಮಾರಿಸಿಯೇ ಅಬಾರ್ಷನ್ ಮಾಡಿಸಿದ್ದ. ಇ
ಕಾಮುಕನ ಬಲೆಗೆ ಬಿದ್ದವಳು ಸಿನಿಮಾ ನಟಿ
ಮಾನಮರ್ಯಾದೆ, ರಾಜಕೀಯ ಸ್ಥಾನಮಾನ, ಸಾಮಾ
ಗೌರವವನ್ನೆಲ್ಲ ಚಂದ್ರಚೂಡನಿಂದಾಗಿಯೇ ಕಳಕೊಂ
ಅಂತರಪಿಶಾಚಿಯಂತಾದ ಶೃತಿಗಾದರೂ
ನಿಯತ್ತಾಗಿರಬೇಕಿತ್ತು.


ವಿಕಟವೆಂದರೆ ತಾನು ಶೃತಿಯ ಗಂಡ ಎಂ
ಹೇಳಿಕೊಂಡೇ 'ಜನ್ಮ' ಎಂಬ ಸಿನಿಮಾ ಮಾಡ್ತಾ ಇದ್
ನಾನೇ ಡೈರೆಕ್ಟರ್ ಎಂದು ಬಿಗ್ ಬಜಾರ್‌ನಲ್ಲಿ ಕೆ
ಮಾಡುತ್ತಿದ್ದ ಮಂಗಳೂರು ಮೂಲದ ಯುವತಿಯೊಬ್ಬ
ಹೀರೋಯಿನ್ ಮಾಡ್ತೀನಿ ಎಂದು ತಿಂದು ತೇ
ಮತ್ತೊಬ್ಬಳು ನರ್ಸ್‌ಗೂ ನೀನೇ ಸೆಕೆಂಡ್ ಹೀರೋಯಿ
ಎಂದು ಯಾಮಾರಿಸಿ ಗರ್ಭದಾನ ಮಾಡಿದ್ದ. ಹೆಣ್ಣು ವ
ಹಣಕ್ಕಾಗಿ ಎಲ್ಲಿಗೆ ಬೇಕಾದರೂ ನುಗ್ಗಬಲ್ಲ, ಯ
ಬದುಕಿಗೂ ಬೆಂಕಿ ಇಕ್ಕಬಲ್ಲ ಕ್ರಿಮಿ ಚಂದ್ರಾಚಾರಿಗೆ ಚೇ
ತನ್ನ ಕವನ ಸಂಕಲನವನ್ನು ಅರ್ಪಿಸುತ್ತಾಳೆಂ
ಅಚ್ಚರಿಯಾಗುತ್ತದೆ.

ಅಷ್ಟಕ್ಕೂ ಈ ಚಂದ್ರಾಚಾರಿ ಅದ್ಯಾವತ್ತು ಕವಿಯ
ಎಂದು ಕೆದಕ ಹೊರಟರೆ ಅದೇ ಮತ್ತೊಂದು ವಂ
ವೃತ್ತಾಂತವಾಗುತ್ತದೆ. ಎರಡೆರಡು ಬಾರಿ ಶೃತಿಯ
ಪುಚಾರಕ್ಕೆಂದು ಮದುವೆಯಾಗಲು ಹೋಗಿ ಚಿಕ್ಕಮಗಳೂ
ಗ್ರಾಮಸ್ಥರಿಂದ ಅಟ್ಟಾಡಿಸಿಕೊಂಡು ಒದೆ ತಿಂದ ಚಂದ್ರಾ
ಇನ್ನೆಲ್ಲೂ ಮುಖವಿಲ್ಲದೆ ರವೀಂದ್ರ ಕಲಾಕ್ಷೇತ್ರದ ಸೋಂಬ
ಕಟ್ಟೆ ಸೇರಿಕೊಂಡಿದ್ದ. ಅಲ್ಲಿ ನಾಟಕ, ಸಾಹಿತ್ಯ ಎಂ
ಅಂಡಲೆಯುತ್ತಿದ್ದ ಕಾರ್ಪೆಂಟರ್, ಮಂಜುನಾಥ್, ರಾಜೀ
ಪ್ರಸಾದ್, ದೀಪಾ, ಬೇಲೂರು ರಘುನಂದನ್, ಶ
ಚಕ್ರವರ್ತಿ ಮುಂತಾದವರ ಪರಿಚಯವಾಯಿತು.

⏭ 0







ಮೀರಿಸಿದ ಚೆಲುವಾಂತ ಚಂದ್ರಿಕೆ ಯಾರಿರಬಹುದು? ಹಾಗಾದರೆ ಶೃತಿ ಗತಿಯೇನು? ಸಾಹಿತ್ಯ ಕಾವ್ಯ ಇತ್ಯಾದಿ ವಲಯಕ್ಕೆ ಚಂದ್ರಾಚಾರಿ ಎಂಟ್ರಿ ಕೊಟ್ಟಿದ್ದಾನೆಂದ ಮೇಲೆ ಯಾರ ಸಂಸಾರಕ್ಕೆ ಬೆಂಕಿ ಬೀಳುತ್ತೋ? ಯಾವ ಕವಿಯತ್ರಿಯ ಗತಿ ಏನಾಗುತ್ತೋ, ಬಲ್ಲವರ್‍ಯಾರು? ನಡೆದ ಘಟನಾವಳಿಗಳೇನು ಕಮ್ಮಿಯೇ?


ಈ ಹೈಕಿ ಒಂದು ಸುದ್ದಿಯ ಪ್ರಕಾರ ಮೋದಿ ಬ್ರಿಗೇಡಿನ ಕಮಾಂಡರ್ ಚಕ್ರವರ್ತಿ ಸೂಲಿಬೆಲೆ ಮತ್ತು ಸಿನಿಮಾ ನಟಿ ಶೃತಿಯ ಅನಧಿಕೃತ ಗಂಡ ಚಂದ್ರಚೂಡ್ ಚಕ್ರವರ್ತಿಯ ನಡುವೆ ಭೀಕರ ಮಾರಾಮಾರಿಯೇ ನಡೆಯಿತಂತೆ. ಇಂದ್ರಲೋಕದ ಅಪ್ಸರೆ ತಿಲೋತ್ತಮೆಗಾಗಿ ಸುಂದೋಪಸುಂದರರು ಹೊಡೆದಾಡಿಕೊಂಡು ಸತ್ತಂತೆ ಮಹಾಕಾಮುಕ ಚಂದ್ರಾಚಾರಿ ಮತ್ತು ಚೆಡ್ಡಿವೀರ ಚಕ್ರವರ್ತಿ ಸೂಲಿಬೆಲೆ ಮಧ್ಯೆ ಮಾರಾಮಾರಿಗೆ ಕಾರಣಳಾದವಳು ಚೇತನಾ ಎಂಬ ಕಾವ್ಯ ಕನ್ನಿಕೆಯಂತೆ!

ಅಂದಹಾಗೆ ಇದೀ ಫೇಸ್‌ಬುಕ್ ಸಾಹಿತ್ಯಿಕ ವಲಯದಲ್ಲೇ ಬಿರುಗಾಳಿಯೆಬ್ಬಿಸಿದ ಚೇತನಾ ಮಾಡಿದ

ಶ್ರೀರಾಂಪುರದ ಮನೆಹಾಳ ಲಂಬೂಬಾಬು ಮತ್ತು ಹಾಸಿಗೆ ಸೇವ

ತನ್ನ ಸ್ಮಶಾನ ಕವಿಗೋಷ್ಠಿಗೆ ಬೇಕಾದ ರೌಡಿ ಪಡೆ, ಲಿಕ್ಕರ್, ಬಿರಿಯಾನಿ, ಎಣ್ಣೆ ಇತ್ಯಾದಿಗಳನ್ನೆಲ್ಲ ಸರಬರಾಜು ಮಾಡುವುದಕ್ಕೆಂದೇ ಚಂದ್ರಾಚಾರಿ ಕಿರಾತಕನೊಬ್ಬನನ್ನು ಜೊತೆ ಹಾಕಿಕೊಂಡಿದ್ದಾನೆ. ಆತ ಶ್ರೀರಾಂಪುರದ ಪುರಾತನ ಪಾತಕಿ ಲಂಬೂಬಾಬು!


ಶ್ರೀರಾಂಪುರದ ಪ್ರಕಾಶ್‌ನಗರ ಏರಿಯಾದ ಮೊದಲಿಯಾರ್ ಚೌಲ್ಟ್ರಿ ಪಕ್ಕದಲ್ಲಿ ಅಡ್ಡೆ ಹಾಕುವ ಲಂಬೂಬಾಬು ಸದ್ಯ ಗೆಡ್ಡಾ ನಾಗ ಎಂಬ ಅಂಡರ್‌ವರ್ಲ್ಡ್ ರೌಡಿಯ ನಂಬಿಕಸ್ಥ ಶಿಷ್ಯ. ಗೆಡ್ಡಾ ನಾಗನ ತಮ್ಮ ಕಿಟ್ಟಿ ಇನ್‌ಸ್ಪೆಕ್ಟರ್ ಮೈಲಾರಪ್ಪನವರ ಕೈಯಲ್ಲಿ ಗುಂಡೇಟು ತಿಂದು ಎನ್‌ಕೌಂಟರ್ ಆಗುವವರೆಗೂ ಬಾಬು ಕಿಟ್ಟಿಗೆ ಬಲಗೈ ಬಂಟನಂತಿದ್ದ. ಕಿಟ್ಟಿ ಕೊಲೆಯಾದ ತರುವಾಯ ಮೀಟ್ರು ಮತ್ತು ಧಮ್ಮಿಲ್ಲದ ಕಾರಣ ಅಳ್ಳಾಟಿ ಕೆಲಸಕ್ಕೆ ನಿಂತ. ಪೊಲೀಸ್ ಇನ್‌ಫಾರ್ಮೆಂಟ್ ಕೂಡ ಆದ. ಶ್ರೀರಾಂಪುರ,



ಪ್ರಕಾಶ್‌ನಗರ, ದೇವಯ್ಯ ಪಾರ್ಕ್, ರಾಜ್‌ಕುಮಾರ್
ಸುತ್ತಮುತ್ತ ಅನೇಕ ಅಸಹಾಯಕ ತಮಿಳು ಮನೆಕೆಲ
ಹೆಂಗಸರನ್ನು ಮುಕ್ಕಿದ ಲಂಬೂಬಾಬು ಪ್ರವೃತ್ತಿಯ
ಚಂದ್ರಾಚಾರಿಯ ಅಪ್ಪನಂಥವನು.

ಭಾನುವಾರ ರಾತ್ರಿ ಚಾಮರಾಜಪೇಟೆಯ ಸ್ಮಶಾನ
ನಡೆಯುವ ಚಂದ್ರಚೂಡನ ಗುಂಡು ಪಾರ್ಟಿಗೆ
ಮತ್ತು ಬಿರಿಯಾನಿ ವ್ಯವಸ್ಥೆ ಕಲ್ಪಿಸಿದವನು
ಲಂಬೂಬಾಬು. ಈತನೇ ಹೇಳಿಸಿ ಇಪ್ಪತ್ತಕ್ಕೂ ಅ
ಹಾಸಿಗೆ ದಿಂಬುಗಳನ್ನು ಸ್ಮಶಾನದ ಸಂದಿಗೊಂದಿಗ
ಹಾಕಿಸುವ ವ್ಯವಸ್ಥೆ ಕಲ್ಪಿಸಿದ್ದಾನಂತೆ. ಲಂಬೂಬಾಬು ಶಿಷ್ಯ
ಇಪ್ಪತ್ತಕ್ಕೂ ಅಧಿಕ ರೌಡಿಗಳು ಗಲಾಟೆಯಾಗದ
ಸರ್ಪಗಾವಲಿರುತ್ತಾರಂತೆ. ಎಲ್ಲೆಲ್ಲಿ ಯಾವ್ಯಾವ ಸಂದಿಯ
ಹಾಸಿಗೆ ದಿಂಬು ಹಾಕಬೇಕೆಂಬುದನ್ನೂ ಲಂಬೂಬಾಬು
ತನ್ನ ಚೇಲಾಗಳ ಮೂಲಕ ಏರ್ಪಾಡು ಮಾಡಿದ್ದಾನ

ಮಂಗಳೂರು: ಚೆಡ್ಡಿ ಸಂಸದ ನಳಿನ್‌ನ ರಂಗೀಲಾ ರಗಳೆ!!



ಪರಸತಿ, ಪರಧನಕ್ಕೆ ಸದಾ ಹಪಹಪಿಸುವ ...ಜೆಪಿ"ಗಳ ಕಾಮಕಾಂಡಕ್ಕೆ ಮತ್ತೊಂದು ಅನೈತಿಕ-...ಡ್ವಾಳ ಪುರಾಣ ಭರ್ಜರಿ ಎಂಟ್ರಿ ಹೊಡೆದಿದೆ! ದಕ್ಷಿಣ ...ಡದ ಔಟ್ ಗೋಯಿಂಗ್ ಭಜರಂಗಿ ಭಂಡ ಸಂಸದ ...ನ್‌ಕುಮಾರ್ ಕಟೀಲ್ ಅಸಹಾಯಕ ಹುಡುಗಿಯೊಬ್ಬಳಿಗೆ ...ರಾರು ಫೋನ್ ಕಾಲ್ ಮಾಡಿ ಡಿಂಗ್ ಡಾಂಗ್ ...ಸಿದ್ದು ಈಗ ಸಾಕ್ಷಾಧಾರ ಸಮೇತ ಬಹಿರಂಗವಾಗಿದೆ. ...ಗೆ ಸಂಘ ಪರಿವಾರದ ಸ್ವಯಂಘೋಷಿತ ಪರಿಶುದ್ಧ ...ಲ್-ಚಲನ್ -ಚಾರಿತ್ರ್ಯದ ಯಡ್ಡಿ, ಅಕು, ಹರಕು ತಾಳದ ...ಲಪ್ಪ, ರೇಣುಕಾಚಾರಿ, ರಘುಪತಿ ಭಟ್ಟ, ರಾಮದಾಸ್, ...ಲೆಮಾರ್, ಸವದಿ, ಜೀವರಾಜ್... ವಗೈರೆ ಕೀಚಕ ...ಸ್ಥಾನಕ್ಕೆ ನಳಿನ್ ಸೇರಿಕೊಂಡಿರುವುದು ಕರಾವಳಿಯಲ್ಲಿ ...ಗು-ರಂಗಿನ ಚರ್ಚೆಗಳನ್ನು ಎಬ್ಬಿಸಿಬಿಟ್ಟಿದೆ....

...ಪರಮ ದೈವಭಕ್ತ ಲುಕ್‌ನ ಬ್ರಹ್ಮಕಲಶೋತ್ಸವ ...ರೋ ನಳೀನ್‌ನ ಹಗ್ಗ ಕಚ್ಚುವ ಚಾಳಿ ಇಂದು-...ಯದೇನಲ್ಲ. ಆತ ಐದು ವರ್ಷದ ಹಿಂದೆ ಮೊದಲ ...ರಿಗೆ ಬಿಜೆಪಿ ಕ್ಯಾಂಡಿಡೇಟಾಗಿ ಲೋಕಸಭೆ ಎಲೆಕ್ಷನ್‌ಗೆ ...ದಾಗಲೇ ಆತನ ರಸಿಕತೆಯ ರಂಗು ಕರಾವಳಿಯನ್ನು ...ರಿಸಿತ್ತು! ನಳಿನ್‌ನ 'ದೇಶ ಪ್ರೇಮ'ದ ಆರೆಸ್ಸೆಸ್ ...ುವಟಿಕೆ ಕಟ್ಟಿಕೊಂಡ ಹೆಂಡತಿಯನ್ನೇ ಕಡೆಗಣಿಸಿ ಕಳ್ಳಾಟ ...ುವ ಮಟ್ಟ ಮುಟ್ಟಿದೆಯೆಂದು ಗುಲ್ಲೆದ್ದಿತ್ತು. ನಳಿನ್‌ನ ...ನೆಯಾಚೆಯ 'ಸಂಘ'- 'ಸಹವಾಸ'ಕ್ಕೆ ಧರ್ಮಪತ್ನಿಯೇ ...ೇಸಿಹೋಗಿದ್ದಾರೆಂದು ಜನ ಮಾತಾಡಿಕೊಳ್ಳುತ್ತಿದ್ದರು. ...ಸ್ಕೂಲು ಶಿಕ್ಷಣ ಮುಗಿಸುವಷ್ಟರಲ್ಲೇ ಸುಸ್ತು ಹೊಡೆದ ...ನ್ ಮದುವೆಯಾಗಿದ್ದು ಮಾತ್ರ ಎಂಬಿಎದಂಥ ಉನ್ನತ ...ಸಂಗ ಮುಗಿಸಿದ ಹುಡುಗಿಯನ್ನು! ಈ ಶೈಕ್ಷಣಿಕ-...ದ್ಧಿಕ ಅಸಮಾನತೆಯ ಮದುವೆಗೆ 'ಗುತ್ತಿನ ಮನೆ ಗತ್ತು' ...ಗೆ ಹಾಕಿತ್ತಂತೆ. ನಳಿನ್ ಮತ್ತಾತನ ಹೆಂಡತಿಯ ತವರು ...ನೆಯವರು ಬಂಟರ ಪ್ರತಿಷ್ಠಿತ ಗುತ್ತಿನ (ಪಾಳೆಗಾರಿಕೆ?) ...ನೆತನದವರು. ಆದರೆ ನಳಿನ್ ದೈಹಿಕವಾಗಿ ಅದೆಷ್ಟು ...ರ ಆಳೋ ನೈತಿಕವಾಗಿ ಅಷ್ಟೇ ಕುಬ್ಜ ಆಸಾಮಿ.

...ಈ ಸಂಘ ಪರಿವಾರಿ ದೇಶಭಕ್ತ ಸುಬಗನ ಚಾರಿತ್ರ್ಯ ...ಹಿಮೆಯ ಎರಡೆರಡು ಹಗರಣಗಳು ಮುಗಿದ ಮಹಾ ...ಾವಣೆಯ ಸಮರಾಂಗಣದಲ್ಲೇ ಸ್ಫೋಟಿಸಬೇಕಾ?! ...ದು, ಉಳ್ಳಾಲ ಬಳಿಯ ಅಡ್ಯಾರಿನ ಬಿಲ್ಲವ ...ುದಾಯದ ಅಮಾಯಕ ಹುಡುಗಿಗೆ ಸರ್ಕಾರಿ ನೌಕರಿಯ ...ಆಸೆ ತೋರಿಸಿ ದಾರಿ ತಪ್ಪಿಸಿದ ಬರ್ನಾಸ್ ...ಸ್ಥಿತಿಯಾದರೆ, ಮತ್ತೊಂದು- ಕಾಪು ಕಡೆಯ ಬಂಟರ ...ದಂಪತಿಯ ಸಂಸಾರ ಸಂಸದ ನಳಿನ್‌ನ ಚಟ ...ುವಟಿಕೆಗೆ ಬಲಿಯಾಗಿ ಚಿಂದಿಯಾದ ದುರಂತ ಕತೆ! ...ಾಯೆಂದರೆ, ಈ ಎರಡೂ ನೀಲಿ ನಾಟಕ ನಳಿನ್‌ನ ...ಹಾಸ-ಭೂಗೋಳ ಅನಾವರಣ ಮಾಡುವುದರ ...ಜತೆಗೇ ಕರಾವಳಿ ಬಿಜೆಪಿಯೊಳಗಿನ ಸಂಘ ಪರಿವಾರದ ...ರ ಅಧಿಕಾರದಾಹದ ಕಾಲೆಳೆದಾಟದ ಕಿತಾಪತಿಯನ್ನೂ ...ರಂಗ ಮಾಡಿದೆ! ಈ ಚೆಡ್ಡಿ ಪಾಪಿಗಳ ಎಂಪಿ ಆಗುವ ...ಲಿಗೆ ಪಾಪದ ಹಿಂದೂ ಹೆಂಗಸರ ಮಾನ ಹರಾಜಾಗಿದ್ದು ...ಂತವೇ ಸರಿ!!

...ನಾಲಾಯಕ್ ನಳಿನ್‌ನ ಫೋನ್ ಲವ್ವಿ-ಡವ್ವಿ ಆತನ ...ಿಕ ಕೀಚಕ ಕೀರಿಕೆಗೆ ಎಂಪಿಗಿರಿ ಅಧಿಕಾರ ...ದಾಗಿರುವುದನ್ನು ನಿಸ್ಸಂಶಯವಾಗಿ ಸಾಬೀತು ...ಸುತ್ತಿದೆ. 'ಆಕೆ' ಉಳ್ಳಾಲದ ತೊಕ್ಕೊಟ್ಟು ಪರಿಸರದ ...ಿ, ಪಂಚಾಯ್ತಿಯ ಬಿಜೆಪಿ ಸದಸ್ಯರೊಬ್ಬರ ಹತ್ತಿರದ ...ಸಂಬಂಧಿ ಹುಡುಗಿ. 'ನಳಿನ್ ಮತ್ತು ಸದ್ರಿ ಜಿ.ಪಂ. ...ಸ್ಯನ ನಡುವೆ ನಿಕಟ ನಂಟಿದೆ. ಹೀಗಾಗಿ ನಳಿನ್ ...ಗ ಆ ಮನೆಗೆ ಫೋನಾಯಿಸುತ್ತಿದ್ದ, ಆಗ ಆ ಹುಡುಗಿ ...ನ್ ರಿಸೀವ್ ಮಾಡುವುದೂ ಇತ್ತು, ನಳಿನ್ ಆ ...ಸದಸ್ಯನ ಮನೆಯತ್ತ ಹೋದಾಗ ಆ ಚೆಂದುಳ್ಳಿ ...ೆ ಆತನ ಕಾಕದೃಷ್ಟಿಗೂ ಬೀಳುತ್ತಾಳೆ. ಬಿಲ್ಲವ ಜಾತಿಯ

ಆ ಕುಟುಂಬ ಆರೆಸ್ಸೆಸ್‌ನ ಹಿಂದುತ್ವದ ಬ್ರೈನ್‌ವಾಶ್‌ಗೆ ಒಳಗಾಗಿದ್ದರಿಂದ ಕಪಟ ಹಿಂದೂವಾದಿ ನಳಿನ್ ಬಗ್ಗೆ ಅದೊಂಥರಾ ಗೌರವಾದರ ಅಲ್ಲಿತ್ತು.

'ಆಕೆ' ಮತ್ತು ನಳಿನ್ ನಡುವೆ ನಿಧಾನಕ್ಕೆ ಸಂಪರ್ಕ ಏರ್ಪಡುತ್ತದೆ. ಆಕೆ ತನಗೊಂದು ಸರ್ಕಾರಿ ನೌಕರಿ ಕೊಡಿಸುವಂತೆ ಕೇಳುತ್ತಾಳೆ. ನಳಿನ್ ಸರ್ಕಾರಿ ನೌಕರಿ ಕೊಡಿಸುವ ಭರವಸೆ ನೀಡುತ್ತಾನೆ. ಸಂಪರ್ಕ ಸಲಿಗೆಯಾಗುತ್ತದೆ. ನಳಿನ್ ತನ್ನ ಎರಡು ಬಿಎಸ್‌ಎನ್‌ಎಲ್ ಮೊಬೈಲ್‌ನ ನಂಬರ್ **9448549445** ಮತ್ತು **9448459445** ನಂಬರ್‌ನಿಂದ ಆಗಾಗ ಆಕೆಗೆ ಫೋನಾಯಿಸಲು ಶುರು ಮಾಡುತ್ತಾನೆ. ನಳಿನ್‌ನ ಸಾಚಾತನದ ಮುಖವಾಡದಲ್ಲಿನ ನೀಚತನ ಆ ಮುಗ್ಧ ಹುಡುಗಿಗೆ ಅರ್ಥವೇ ಆಗುವುದಿಲ್ಲ. ಅದ್ದೇಗೋ ಆತನ ಖೆಡ್ಡಾಕ್ಕೆ ಬಿದ್ದು ಬಿಡುತ್ತಾಳೆ. ಸಂಸದ ಸಾಹೇಬರೊಂದಿಗೆ ತನ್ನ **9591244673** ಮೊಬೈಲ್‌ನಿಂದ ನಡುರಾತ್ರಿಯೆಲ್ಲ ಮಾತಾಡುತ್ತಾಳೆ. ಹೀಗೇ ಎರಡು ವರ್ಷ ಕಳೆದುಹೋಗುತ್ತದೆ. ಅಲ್ಲಿಗೆ ಸಂಸದ ನಳಿನ್ 'ಆಕೆ' ಜತೆ ಬರೋಬ್ಬರಿ **3,642** ಬಾರಿ ತನ್ನೆರಡು ಮೊಬೈಲ್ ಫೋನ್‌ಗಳಿಂದ ನಿರಂತರವಾಗಿ ಮಾತಾಡಿ ಮುಗಿದಿರುತ್ತದೆ. ರಾತ್ರಿ **10.30**ರ ನಂತರ ತಾಸುಗಟ್ಟಲೆ ಅದೇನು ಆ ಹುಡುಗಿಯೊಂದಿಗೆ ನಳಿನ್ ಮಾತಾಡಿದನೋ ಆತನ ಪಕ್ಷದ ಟ್ರೇಡ್ ಗಾಡ್ ಶ್ರೀರಾಮನಿಗೇ ಗೊತ್ತು!! ಬಹುತೇಕ ಕಾಲ್‌ಗಳು ರಾತ್ರಿ **10**ರ ಬಳಿಕವೇ ನಡೆದಿದೆ. ಆದರೆ ಸರ್ಕಾರಿ ನೌಕರಿ ಮಾತ್ರ ಆಕೆಗೆ ನಯವಂಚಕ ವಿಟ ಪುರುಷ ನಳಿನ್‌ನಿಂದ ಕೊಡಿಸಲಾಗಲೇ ಇಲ್ಲ. ನೌಕರಿ ಪಡೆಯುವ ಆಸೆಯಿಂದ ಆಕೆ ಸಂಸದ ಸಾಹೇಬರಿಗೆ ಮರುಳಾಗುತ್ತಲೇ ಹೋದಳು. ಈ ಮನೆಹಾಳನಿಂದ ಮಾನ ಬೀದಿಗೆ ಬೀಳಬಹುದೆಂದು ಆಕೆ ಕನಸು-ಮನಸಲ್ಲೂ ಎಣಿಸಿರಲಿಕ್ಕಿಲ್ಲ ಪಾಪ!

B Number	Date	Time	Dur(s)		Call Type	IMEI
9448549445 nalin	1-Nov-12	8:09:41	0	Basaveswaranagar	SMO	352475052066850
9448549445 nalin	1-Nov-12	8:09:51	0	Basaveswaranagar	SMT	352475052066850
9448549445 nalin	1-Nov-12	12:46:24	8	Basaveswaranagar	OUT	352475052066850
9448549445 nalin	1-Nov-12	13:19:47	174	Basaveswaranagar	IN	352475052066850
9448549445 nalin	1-Nov-12	20:53:15	29	Basaveswaranagar	IN	352475052066850
9448549445 nalin	2-Nov-12	7:32:55	151	Basaveswaranagar	OUT	352475052066850
9448549445 nalin	4-Nov-12	17:37:48	153	Mylanahalli	IN	352475052066850
9448549445 nalin	5-Nov-12	16:01:45	34	Mandya-Blr Road	OUT	351841051687590
9448549445 nalin	5-Nov-12	22:04:34	59	Basaveswaranagar	IN	351841051687590
9448549445 nalin	5-Nov-12	22:15:09	87	Basaveswaranagar	OUT	351841051687590
9448549445 nalin	5-Nov-12	22:22:27	356	Basaveswaranagar	IN	351841051687590
9448549445 nalin	5-Nov-12	22:28:43	663	Basaveswaranagar	IN	351841051687590
9448549445 nalin	6-Nov-12	7:25:36	43	Basaveswaranagar	IN	351841051687590
9448549445 nalin	6-Nov-12	7:26:31	31	Basaveswaranagar	IN	351841051687590
9448549445 nalin	6-Nov-12	22:19:26	1169	Basaveswaranagar	OUT	351841051687590
9448549445 nalin	7-Nov-12	23:38:00	0	#N/A	SMO	351841051687590
9448549445 nalin	7-Nov-12	23:38:12	0	#N/A	SMT	351841051687590
9448549445 nalin	8-Nov-12	7:06:38	0	#N/A	SMT	351841051687590
9448549445 nalin	8-Nov-12	21:44:32	74	#N/A	IN	351841051687590
9448549445 nalin	10-Nov-12	19:09:44	103	Tranquil Orchards Suites	IN	351841051687590
9448549445 nalin	10-Nov-12	22:09:45	17	Tranquil Orchards Suites	IN	351841051687590
9448549445 nalin	11-Nov-12	10:52:46	152	Basaveswaranagar	IN	351841051687590
9448549445 nalin	12-Nov-12	7:20:56	1	Basaveswaranagar	IN	351841051687590
9448549445 nalin	12-Nov-12	7:45:50	0	Basaveswaranagar	SMO	351841051687590
9448549445 nalin	12-Nov-12	7:45:58	0	Basaveswaranagar	SMT	351841051687590
9448549445 nalin	12-Nov-12	9:02:18	0	Basaveswaranagar	SMT	351841051687590
9448549445 nalin	13-Nov-12	17:32:44	115	#N/A	RCF	
9448549445 nalin	16-Nov-12	8:35:12	0	Marase	SMT	351841051687590
9448549445 nalin	16-Nov-12	8:35:31	0	Marase	SMO	351841051687590
9448549445 nalin	16-Nov-12	8:35:38	0	Marase	SMT	351841051687590
9448549445 nalin	16-Nov-12	8:36:33	0	Marase	SMO	351841051687590
9448549445 nalin	16-Nov-12	8:36:40	0	Marase	SMT	351841051687590
9448549445 nalin	16-Nov-12	10:48:28	0	Madhugere	SMO	351841051687590
9448549445 nalin	16-Nov-12	10:48:33	0	Madhugere	SMT	351841051687590
9448549445 nalin	16-Nov-12	11:59:09	0	Kumbalgod	SMT	351841051687590
9448549445 nalin	17-Nov-12	14:43:33	0	Herakala	SMO	351841051687590
9448549445 nalin	17-Nov-12	14:43:43	0	Herakala	SMT	351841051687590
9448549445 nalin	19-Nov-12	21:47:27	0	Sarapady	SMO	351841051687590
9448549445 nalin	19-Nov-12	21:47:36	0	Sarapady	SMT	351841051687590
9448549445 nalin	1-Dec-12	13:14:42	0	Basaveswaranagar	SMO	351841051687590
9448549445 nalin	1-Dec-12	13:14:49	0	Basaveswaranagar	SMT	351841051687590
9448549445 nalin	1-Dec-12	13:18:27	0	Basaveswaranagar	SMT	351841051687590
9448549445 nalin	1-Dec-12	13:19:53	0	Basaveswaranagar	SMO	351841051687590
9448549445 nalin	1-Dec-12	13:20:07	0	Basaveswaranagar	SMT	351841051687590
9448459445	1-Dec-12	13:22:33	27	Basaveswaranagar	IN	351841051687590
9448459445	1-Dec-12	22:40:16	34	Basaveswaranagar	IN	351841051687590
9448459445	1-Dec-12	22:43:16	77	Basaveswaranagar	IN	351841051687590
9448549445 nalin	1-Dec-12	22:51:38	2	Basaveswaranagar	OUT	351841051687590


ವಿಚ್ಛೇದನ ಕೇಸಲ್ಲಿ ನಳಿನ್!!

ಕಚ್ಚೆ ಹರುಕ ಸಂಸದ-ಸಂಘ ಪರಿವಾರದ ಚಪಲಚೆನ್ನಿಗರಾಯ ನಳಿನ್‌ಕುಮಾರ್ ಕಟೀಲ್‌ನ ಫೋನ್ ಪ್ರೇಮ ಪ್ರಸಂಗದಷ್ಟೇ ಪಾಪ್ಯುಲರ್ ಕಾಪುದ ಇಸ್ಲಂಪಾಡಿ ಡೈವೋರ್ಸ್ ರಹಸ್ಯ!! ನಳಿನ್‌ನ ಅಂಗ ಸಂಘ ಸಹವಾಸದ ಅಡ್ಡೆಗಳು ಅದೆಲ್ಲೆಲ್ಲಿರಬಹುದೆಂಬುದೇ ಈಗ ದೊಡ್ಡ ಕುತೂಹಲದ ಸಂಗತಿಯಂತಾಗಿದೆ. ಕರಾವಳಿಯಲ್ಲಿ "ರಸಿಕತೆಯಲ್ಲಿ ರಘುಪತಿ ಭಟ್ಟರಿಗಿಂತಲೂ ನಳಿನ್‌ನೇ ಜೋರು ಮಾರಾಯ್ರೆ....!" ಎಂಬ ಉದ್ಗಾರಗಳು ಈಗ ಕಡಲತಡಿಯಲ್ಲಿ ಮೊಳಗುತ್ತಿವೆ. ದಕ್ಷಿಣ ಕನ್ನಡದಲ್ಲಿ ಮೋದಿ 'ಅಲೆ'ಯನ್ನೇ ಅಡಗಿಸಿಬಿಟ್ಟಿದೆ ನಳಿನ್ ಕಾಮ ಸುನಾಮಿ!

ಅದು ಕಾಪು ಮೂಲದ ಮುಂಬೈನ ಸುಂದರ ಸಂಸಾರ. ಅದೇನಾಯಿತೋ ಏನೋ? ಇದ್ದಕ್ಕಿದ್ದಂತೆ ಗಂಡ-ಹೆಂಡತಿ ದೂರಾಗಿಬಿಟ್ಟರು. ನಳಿನ್‌ನ ಸ್ವಜಾತಿ ಬಂಟ ಪರಿವಾರದ ಈ ದಾಂಪತ್ಯದಲ್ಲಿ ಪತಿ-ಪತ್ನಿ ಮಧ್ಯೆ ನಳಿನ್ ತೂರಿಕೊಂಡಿದ್ದನಾ? ಇಂಥದೊಂದು ಅನುಮಾನ ಈಗ ಪುಟಿಪುಟಿದು ಏಳುತ್ತಿದೆ. ನಳಿನ್ ಆ ಸಂಸಾರದ ವಿಚ್ಛೇದನಕ್ಕೆ ಕಾರಣನೋ? ಅಲ್ಲವೋ? ಒಟ್ಟಿನಲ್ಲಿ ಮುಂಬೈನ ಗಂಡನ ತೊರೆದು ಕಾಪುಗೆ ಬಂದಿರುವ ಹುಡುಗಿ ಈಗ ಪರಿಹಾರಕ್ಕೆ ನ್ಯಾಯಾಲಯದ ಮೊರೆಹೋಗಿದ್ದಾಳೆ. ಕೇಸು ಡೈವೋರ್ಸ್‌ಗೂ ಬಂದು ನಿಂತಿದೆ.

ಮತ್ತದೇ ದಗಾಕೋರ ಪ್ಲೀಡರ್ ಪೀಪಿ ಕೈಗೇ ಈ ಕೇಸು ಬಂದಿದೆ. ನಳಿನ್‌ಗೆ ಬಿಜೆಪಿ ಟಿಕೆಟ್ ತಪ್ಪಿಸಿ ತಾನೇ ಕ್ಯಾಂಡಿಡೇಟಾಗಲು ಹವಣಿಸಿದ್ದ ಪೀಪಿ ಗಂಡನ ಲಾಯರ್. ಈ ಗಂಡ ಮಹಾಶಯ ತನ್ನ ಮಡದಿಗೆ ಸಂಸದ ನಳಿನ್ ಜೊತೆ ದೋಸ್ತಿ ಇತ್ತೆಂಬಂತೆ ಪಿಸುಗುಡುತ್ತಿದ್ದಾನೆ. ನಳಿನ್‌ಗೆ ಗಂಡಾಂತರ ಆಗುವಂಥ ಗುಸು-ಗುಸು, ಪಿಸುಪಿಸು ಮೂಲ ಪೀಪಿ ಎನ್ನುವವರೂ ಇದ್ದಾರೆ. "ನಿನ್ನಿಂದ ಹೆಂಡತಿ ಪರಿಹಾರ ಪಡೆಯದಂತೆ ನಾನು ನ್ಯಾಯಾಲಯದಲ್ಲಿ ನೋಡಿಕೊಳ್ಳೇನೆ... ನೀನು ನಳಿನ್‌ನ ನೋಡಿಕೋ..." ಎಂದು ವಕೀಲರು ಗಂಡನಿಗೆ ನಿರ್ದೇಶನ ನೀಡಿದ್ದೇ ಇಲೆಕ್ಷನ್ ಹೊತ್ತಲ್ಲಿ ಬಿಜೆಪಿಗೆ ಬಾಧೆಯಾಗುವಂತಾಯ್ತೆಂದು ಕಲ್ಲಡ್ಕ ಹೈಕಮಾಂಡ್ ಬೈಠಕ್‌ನಲ್ಲಿ ಚರ್ಚೆಯಾಗುತ್ತಿದೆ.

ಘುಜಾ ಎಂದರೆ ನೈತಿಕತೆ, ಶೀಲದ ಬಗ್ಗೆ ಉದ್ದುದ್ದ ಭಾಷಣ ಬಿಗಿಯುವ ಆರ್‌ಎಸ್‌ಎಸ್ ಡಾನ್ ಕಲ್ಲಡ್ಕ ಭಟ್ಟರು ತನ್ನ ಶಿಷ್ಯೋತ್ತಮ ನಳಿನ್‌ಗೆ ಕಲಿಸಿದ ಚಪಲದ ಪಾಠ ಇದೇನಾ? ಎಂದು ಜನರೀಗ ಮಾತಾಡುತ್ತಾ ಮುಸಿಮುಸಿ ನಗುತ್ತಿದ್ದಾರೆ. ಬಿಜೆಪಿಯ ರಾಜಕಾರಣಕ್ಕೆ ಧರ್ಮೋನ್ಮಾದ ಒಂದೇ ಅಲ್ಲ, ಕಾಮೋನ್ಮಾದವೂ ಆಧರಿಕೊಂಡಿದೆ ಎಂಬುದಕ್ಕೆ ನಳಿನ್‌ನ ಅಡ್ಯಾರಿನ ಅಡ್ಡೆ-ಕಾಪು ಕ್ಯಾಂಪಸ್‌ಗಳೂ ಸಾಕ್ಷಿಯಾಗಿವೆ. ಬಿಜೆಪಿ ಬಯಲಲ್ಲೇ ಬೆತ್ತಲಾಗಿ ನಿಂತಿದೆ!!



ಅಷ್ಟೊತ್ತಿಗೆ 'ಆಕೆ'ಗೆ ಖಾಸಗಿ ಜೀವವಿಮಾ ಕಂಪನಿಯೊಂದರಲ್ಲಿ ಕೆಲಸ ಸಿಗುತ್ತದೆ. ಎಂಪಿಗಿರಿ ಅಧಿಕಾರ ಬಳಸಿ ಒಂದಿಷ್ಟು ಪಾಲಿಸಿ ಮಾಡಿಸಿ ಕೊಡುತ್ತಾನೆ ನಳಿನ್. ಆಕೆಯ ಇನ್‌ಷೂರನ್ಸ್ ಟಾರ್ಗೆಟ್‌ಗೆ ಸಂಸದನ ವರ್ಚಸ್ಸು ನೆರವಾಗುತ್ತದೆ. ಅಲ್ಲಿಗೆ 'ಆಕೆ'ಯನ್ನು ನಳಿನ್ ಪಳಗಿಸಿಯೂ ಆಗಿರುತ್ತದೆ! ಮೂರನೇ ದರ್ಜೆಯ ಪಡ್ಡೆ ಹೈಕ್ಳಂತೆ ನಳಿನ್ ಆ ಚಲುವೆಯೊಂದಿಗೆ ದಿನದಿನವೂ ಗಂಟೆಗಟ್ಟಲೆ ಫೋನಾಯಣ ನಡೆಸುತ್ತಾನೆ. ತನ್ನ ಎಂಪಿಗಿರಿ ಕೆಲಸ-ಕಾರ್ಯದ ಒತ್ತಡ ಅದೇನೇ ಇರಲಿ, ಬಾಸ್ ಕಲ್ಲಡ್ಕ ಭಟ್ಟರ ಆರ್ಡರ್ ಆಗಿರಲಿ ಅಥವಾ ಕೋಮು ಕಿತಾಪತಿಯ ಜರೂರತ್ತೇ ಇರಲಿ ಪುರಸೊತ್ತು ಮಾಡಿಕೊಂಡು ನಳಿನ್ ಪ್ರೇಮಾಲಾಪ ನಡೆಸುತ್ತಲೇ ಇದ್ದ!


ಅನೈತಿಕ ಆತುರದಲ್ಲಿದ್ದ ನಳಿನ್‌ಗೆ ನಾಚಿಕೆಯೂ ಇರಲಿಲ್ಲ; ಭಯವೂ ಇರಲಿಲ್ಲ. ಆತನ ರೋಮಾನ್ಸ್ ಲಹರಿ ನಿರಂತರ-ನಿರಾತಂಕವಾಗಿ ನಡೆದೇ ಇತ್ತು. ತನ್ನ ರಸಿಕಲೋಕದಲ್ಲಿ ಖಳನಾಯಕನೊಬ್ಬನ ಪ್ರವೇಶವಾಗಿದ್ದು ತೆವಲಿನ ಪಿತ್ಥವೇರಿದ್ದ ನಳಿನ್‌ಗೆ ಅರಿವಾಗಲೇ ಇಲ್ಲ. ನಳಿನ್‌ನ 'ಹೊರ ವ್ಯವಹಾರ'ದ ಅರಿವಿದ್ದ ಪ್ರಳಯಾಂತಕ ಪ್ಲೀಡರ್ ಪೀಪಿ ಈತನ ಬೆನ್ನಿಗೆ ಬಿದ್ದಿದ್ದ. ಹೆಸರುವಾಸಿ 'ಕ್ರಿಮಿನಲ್' ಲಾಯರ್ ಆಗಿರುವ ಈ ಪೀಪಿಗೆ ಇಂಟಲಿಜೆನ್ಸ್ ಪೊಲೀಸರ ಸಂಪರ್ಕವೂ ಇತ್ತು. ಆ ಇಂಟಲಿಜೆನ್ಸ್ ಇಲಾಖೆಯನ್ನು ಬಳಸಿಕೊಂಡು ನಳಿನ್ ಅಡ್ಯಾರಿನ ಅಂಗನೆಯೊಂದಿಗೆ ಫೋನಲ್ಲಿ ಮಾತಾಡಿದ್ದ ಏರ್‌ಟೆಲ್ ಕಾಲ್ ಲಿಸ್ಟ್ ತೆಗೆಸುತ್ತಾನೆ. ಅದನ್ನು ಸಿಡಿ ಮಾಡಿಸುತ್ತಾನೆ. **3,642** ಬಾರಿ ಬಿಲ್ಲವರ ಬೆಡಗಿ ಜತೆ ಮಾತಿನ ಚಕ್ಕಂದವಾಡಿದ ನಳಿನ್‌ನ ಮಹಿಮೆ ಕಂಡ-ಕಂಡಲ್ಲಿ ಬಿತ್ತರಿಸುತ್ತಾನೆ.

ಯಾಕೆ ಈ ಪ್ರಳಯಾಂತಕ ಪ್ಲೀಡರ್ ನಳಿನ್‌ನ ಬಂಡವಾಳ ಬಹಿರಂಗ ಮಾಡಲು ಹಠ ತೊಡುತ್ತಾನೆ? ಇಲ್ಲೇ ಅಡಗಿದೆ ನೋಡಿ ಸಂಘ ಪರಿವಾರಿಗಳ ಅಧಿಕಾರ ರಾಜಕಾರಣದ ಹಿಕಮತ್ತು! ರಕ್ತದ ರುಚಿ ಕಂಡ ಹುಲಿಯಂತಾಗಿದ್ದಾರೆ ಅಧಿಕಾರದ ಟೇಸ್ಟ್ ನೋಡಿರುವ ಕರಾವಳಿಯ ಚೆಡ್ಡಿ-ಭಜರಂಗಿ-ಬಿಜೆಪಿ ಕೊಳ್ಳಿ ದೆವ್ವಗಳು. ನಳಿನ್‌ಗೆ ಎಂಪಿಗಿರಿ ಟಿಕೆಟ್ ತಪ್ಪಿಸಿ ತಾನೇ ಬಿಜೆಪಿ ಕ್ಯಾಂಡಿಡೇಟಾಗುವ ಆಸೆಗೆ ಪೀಪಿ ಬಿದ್ದಿದ್ದ. ಬಾಬಾ ರಾಮದೇವ್ ಎಂಬ ಯೋಗಾಸನ ತರಬೇತಿದಾರನ ಸಖ್ಯ ಕುದುರಿಸಿಕೊಂಡಿದ್ದ ಪೀಪಿ ಆ ಢೋಂಗಿ ಬಾಬಾನ ಬಿಜೆಪಿಯೊಳಗಿನ ಪ್ರಭಾವದಿಂದ ಟಿಕೆಟ್ ತರುವ ಕನಸು ಕಾಣುತ್ತಿದ್ದ. ಆದರೆ ಅದಕ್ಕೂ ಮೊದಲು ಸಿಟ್ಟಿಂಗ್ ಎಂಪಿ ನಳಿನ್‌ನ ಹೆಸರು ಕೆಡಿಸುವ ದರ್ದು ಆತನಿಗಿತ್ತು. ಹಾಗೆ ಮಾಡದಿದ್ದರೆ ನಳಿನ್‌ಗೆ ಟಿಕೆಟ್ ತಪ್ಪಿಸುವುದು ಸಾಧ್ಯವಿಲ್ಲವಾಗಿತ್ತು.

ಕರಾವಳಿ ಬಿಜೆಪಿ-ಆರೆಸ್ಸೆಸ್‌ನ ರಿಂಗ್‌ಮಾಸ್ಟರ್ ಕಲ್ಲಡ್ಕ ಪ್ರಭಾಕರ್ ಭಟ್ಟನ ಕೃಪಾಕಟಾಕ್ಷವೂ ಪೀಪಿಗೆ ಸಿಕ್ಕಿತ್ತು! "ನೀವು ಕಮ್ಯೂನಲ್ ಭಾವನೆ ಕೆರಳಿಸುವ ಅದೆಷ್ಟೇ ಉಗ್ರ ಭಾಷಣ ಮಾಡಿ... ಸಾಬಿಗಳನ್ನು ಹೀಯಾಳಿಸಿ, ಅವರ ಹೆಂಗಸರ ಮೂದಲಿಸಿ.... ಎಂಥ ಕೇಸು ಬಿದ್ರೂ ನಾನು ಕೋರ್ಟಿನಲ್ಲಿ ನೋಡಿಕೊಳ್ತೇನೆ... ಪುಕ್ಕಟೆಯಾಗಿ ಕೇಸು ನಡೆಸ್ತೇನೆ...." ಎಂದು ಕಲ್ಲಡ್ಕ ಡಾನ್‌ಗೆ ಅನಾಹುತಕಾರಿ ವಕೀಲ ಪೀಪಿ ಮಾತು ಕೊಟ್ಟಿದ್ದ. ಇದರಿಂದ ಸುಪ್ರೀತನಾಗಿದ್ದ ಚೆಡ್ಡಿ ದೊರೆ ಪೀಪಿಗೇ ಬಿಜೆಪಿ ಅಭ್ಯರ್ಥಿತನ ಕೊಡಿಸುವ ನಿರ್ಧಾರಕ್ಕೆ ಒಂದು ಹಂತದಲ್ಲಿ ಬಂದಿದ್ದ. ಆದರೆ ವಕೀಲರು-ಸಾರ್ವಜನಿಕರು-ಅಧಿಕಾರಿಗಳು ಮತ್ತು ಬಿಜೆಪಿ ಲೀಡರ್‌ಗಳನ್ನು ತನ್ನ ಕೊಳಕು ಬುದ್ಧಿಯಿಂದ ಎದುರು ಹಾಕಿಕೊಂಡಿದ್ದ ಫಿಟ್ಟಿಂಗ್ ಮಾಸ್ಟರ್ ಪೀಪಿಗೆ ಟಿಕೆಟ್ ಕೊಡಿಸುವುದು ಡಾನ್‌ಗೆ ಕಷ್ಟವಾಯ್ತು.

⏭ 07

ಚಿಕ್ಕಬಳ್ಳಾಪುರ:ಕುಮಾರಣ್ಣನಿಗೆ ಆಟ ಮೊಯ್ಲಿಗೆ ಪ್ರಾಣಸಂಕಟ



ಐದು ವರ್ಷಗಳ ಕೇಂದ್ರ ಮಂತ್ರಿಗಿರಿ, ಐದು ಮಂದಿ ಎಮ್ಮೆಲ್ಲೆಗಳ ಬಲ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ, ಆರ್ಥಿಕ ಅನುಕೂಲಗಳ ಮಹಾಪೂರ ಎಲ್ಲಾ ಇದ್ರೂ ವೀರಪ್ಪ ಮೊಯ್ಲಿಗೆ ನೀರು ಕುಡಿಯಲೇಬೇಕಾದ ಗ್ರಹಚಾರ!

ಜೆಡಿಎಸ್ ನಾಯಕ ಕುಮಾರಸ್ವಾಮಿ ಪರ ಚಿಕ್ಕಬಳ್ಳಾಪುರದುದ್ದಕ್ಕೂ ಎದ್ದ ಅಲೆ, ಸಹಾನುಭೂತಿ ಮತ್ತು ಜನ ಬೆಂಬಲದ ಮುಂದೆ ಮೊಯ್ಲಿ ಸಾಹೇಬರಿಗೆ ನಿದ್ದೆ ಬರುತ್ತಿಲ್ಲ. ಬಿಜೆಪಿ ಹೊಸಕೋಟೆಯ ನರಹಂತಕ ಬಚ್ಚೇಗೌಡನನ್ನು ಕಣಕ್ಕಿಳಿಸಿದೆ. ಸಾಕ್ಷಾತ್ ಮೋದಿಯೇ ಚಿಕ್ಕಬಳ್ಳಾಪುರಕ್ಕೆ ಬಂದು ಭಯಂಕರ ಭಾಷಣವನ್ನು ಮಾಡಿದ್ದಾಗಿದೆ. ಆದರೆ ಮೊಯ್ಲಿ ಸಾಹೇಬರು ತಲೆಬಿಸಿ ಮಾಡಿಕೊಂಡಿರುವುದು ಕುಮಾರಣ್ಣನ ಪರ ಎದ್ದ ಅನುಕಂಪದ ಅಲೆಗೇ!


ಚಿಕ್ಕಬಳ್ಳಾಪುರದ ಎಂಟು ಕ್ಷೇತ್ರಗಳ ಪೈಕಿ ಹೊಸಕೋಟೆ ಶಾಸಕ ಎಂಟಿಬಿ ನಾಗರಾಜ್ ಕಾಂಗ್ರೆಸ್ಸೇ. ಚಿಕ್ಕಬಳ್ಳಾಪುರದ ಶಾಸಕ ಸುಧಾಕರ್, ಗೌರಿಬಿದನೂರಿನ ಶಿವಶಂಕರ್‌ರೆಡ್ಡಿ, ದೊಡ್ಡಬಳ್ಳಾಪುರದ ವೆಂಕಟರಮಣಪ್ಪ ಸೇರಿದಂತೆ ಬಾಗೇಪಲ್ಲಿಯಿಂದ ಪಕ್ಷೇತರನಾಗಿ ಗೆದ್ದಿದ್ದ ಸುಬ್ಬಾರೆಡ್ಡಿ ಕೂಡ ಈಗ ಕಾಂಗ್ರೆಸ್ ಸೇರಿದ್ದಾರೆ. ಅಲ್ಲಿಗೆ ಚಿಕ್ಕಬಳ್ಳಾಪುರದ ಎಂಟು ಕ್ಷೇತ್ರಗಳ ಪೈಕಿ ಐವರು ಕಾಂಗ್ರೆಸ್ ಎಮ್ಮೆಲ್ಲೆಗಳೆ. ಬಿಜೆಪಿ ಕೇವಲ ಯಲಹಂಕದಲ್ಲಿ ಶಾಸಕ ವಿಶ್ವನಾಥ್ ರೆಡ್ಡಿಯನ್ನಷ್ಟೇ ಅವಲಂಬಿಸಬೇಕು. ನೆಲಮಂಗಲ ಮತ್ತು ದೇವನಹಳ್ಳಿಗಳಲ್ಲಿ ಈಗಾಗಲೇ ಇಬ್ಬರು ಜೆಡಿಎಸ್ ಶಾಸಕರನ್ನಿಟ್ಟುಕೊಂಡು ಮೊಯ್ಲಿ ವಿರುದ್ಧ ತೊಡೆ ತಟ್ಟಿದ ಕುಮಾರಸ್ವಾಮಿಯನ್ನು ಕಂಡು ಮೊಯ್ಲಿ ಈ ಪಾಟಿ ನಿದ್ದೆ ಕೆಡಿಸಿಕೊಳ್ಳುವುದಕ್ಕೂ ಕಾರಣವಿದೆ.

ಅದು ಕಾಂಗ್ರೆಸ್ಸಿನೊಳಗೇ ಮೊಯ್ಲಿ ಮುಗಿಸಲು ಕಾದು ಕೂತ ಅತೃಪ್ತ ಆತ್ಮಗಳ ಹಿಂಡು.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ದೊಡ್ಡಬಳ್ಳಾಪುರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ವಿರುದ್ಧ ಸೋತ ಮುನೇಗೌಡ ಇನ್ನು 700 ಹೆಚ್ಚಿಗೆ ಮತಗಳು ಬಿದ್ದಿದ್ದರೆ ಗೆದ್ದು ಬಿಡುತ್ತಿದ್ದ. ತನಗೆ ಜೆಡಿಎಸ್ ಟಿಕೆಟ್ ಕೊಡಲಿಲ್ಲ ಎಂಬ ಆತನ ಸಿಟ್ಟಿಗೆ ಕಾರಣನಾಗಿದ್ದು ಚನ್ನಿಗಪ್ಪ. ಜೆಡಿಎಸ್‌ನಿಂದ ಚನ್ನಿಗಪ್ಪ ಪಡೆದ ಓಟು ಮತ್ತು ಬಂಡಾಯ ಜೆಡಿಎಸ್ ಮುನೇಗೌಡ ಪಡೆದ ಓಟುಗಳೆಲ್ಲವನ್ನೂ ಸೇರಿಸಿಬಿಟ್ಟರೆ ಗೆದ್ದ ಕಾಂಗ್ರೆಸ್ಸಿಗಿಂತಲೂ ಒಂದೂವರೆ ಪಟ್ಟು ಜೆಡಿಎಸ್ ಓಟುಗಳ ಮೊತ್ತ ದೊಡ್ಡದಾಗುತ್ತದೆ. ಹಾಗೇ ಚಿಕ್ಕಬಳ್ಳಾಪುರದಲ್ಲಿ ಜೆಡಿಎಸ್‌ನಿಂದ ಸೋತಿದ್ದ ಬಚ್ಚೇಗೌಡ ತಾನು ಪಡೆದಿದ್ದ ಅಷ್ಟೂ ಮತಗಳನ್ನು ಕುಮಾರಣ್ಣನಿಗೆ ಕೊಡಿಸಿದರೂ ಸಾಕು. ಯಲಹಂಕದಲ್ಲಿ ಸೋತ ಜೆಡಿಎಸ್ ಅಭ್ಯರ್ಥಿ ಪಡೆದದ್ದು, ಗೌರಿಬಿದನೂರಿನಲ್ಲಿ ಜೆಡಿಎಸ್ ಪಾಲು, ಹೊಸಕೋಟೆಯಲ್ಲಿ ಜಾತಿಯ ಕಾರಣಕ್ಕೆಂದು ಬರುವ ಅಷ್ಟಿಷ್ಟು ಓಟುಗಳು ಸಿಕ್ಕಿಬಿಟ್ಟರೂ ಸಾಕು. ಹೇಗೂ ದೇವನಹಳ್ಳಿ ಮತ್ತು ನೆಲಮಂಗಲಗಳಲ್ಲಿ ಜೆಡಿಎಸ್ಸೇ ಗೆದ್ದಿದೆಯಾದ್ದರಿಂದ ಅದು ಕುಮಾರಣ್ಣನ ಪಾಲಿಗೆ ಬೋನಸ್ಸಾಗಿ ಓಟಿನ ಗುಡ್ಡೆಯಾಗಿ ಬಿಡುತ್ತದೆ.

ಮಿಕ್ಕಂತೆ ಅಭಿಮಾನದ ಮೇಲೆ ಬೀಳುವ ಮತಗಳನ್ನೂ ಲೆಕ್ಕ ಹಾಕಿದರೆ ಕುಮಾರಸ್ವಾಮಿ ಗೆಲ್ಲುವುದು ಕಷ್ಟವೇನಲ್ಲ. ಹೊಸಕೋಟೆಯ ಬಚ್ಚೇಗೌಡ ಏನೇ ಜಾತಿ ಓಟುಗಳೆಂದು ಕಿತ್ತರೂ ಅದು ಜೆಡಿಎಸ್ ಪಾಳಿಗೆ ದೊಡ್ಡ ಲೆಕ್ಕವೇನಲ್ಲ.

ಈ ಎಲ್ಲಾ ಸಾಧ್ಯತೆಗಳಿರುವುದನ್ನು ಮನಗಂಡೇ ಚಿಕ್ಕಬಳ್ಳಾಪುರದ ಅಖಾಡಕ್ಕಿಳಿದ ಕುಮಾರಸ್ವಾಮಿ ಇನ್ನಿಲ್ಲದಂತೆ ಮೊಯ್ಲಿಯ ನಿದ್ದೆಗೆಡಿಸಿರುವುದಕ್ಕೆ ಬೇರೆಯದೇ ನಿಗೂಢ ಕಾರಣವೊಂದಿದೆ. ಅದು ಮೊಯ್ಲಿ ವಿರುದ್ಧದ ಕಾಂಗ್ರೆಸ್ ಒಳಸಿಟ್ಟು. ಆ ಕಾಲದಿಂದಲೂ ಮೊಯ್ಲಿಯನ್ನು ಬೆಂಬಲಿಸಿಕೊಂಡೇ ಬಂದ ಬಾಗೇಪಲ್ಲಿ ಮಾಜಿ ಶಾಸಕ ಸಂಪಂಗಿ ಕಳೆದ ಚುನಾವಣೆಯಲ್ಲಿ ಪಕ್ಷೇತರ ಸುಬ್ಬಾರೆಡ್ಡಿ ವಿರುದ್ಧ ಸೋತ. ಈಗ ತನ್ನ ಹಳೇ ಶಿಷ್ಯನನ್ನು ಧಿಕ್ಕರಿಸಿ ಮೊಯ್ಲಿ



ಸುಬ್ಬಾರೆಡ್ಡಿಯನ್ನು ಕಾಂಗ್ರೆಸ್ಸಿಗೆ ಸೇರಿಸಿಕೊಂಡಿದ್ದು ಸಂಪಂಗಿಯ ಹೊಟ್ಟೆಯೊಳಕ್ಕೆ ಬೆಂಕಿ ಇಟ್ಟಂತಾಗಿದೆ. ಹಾಗೊಮ್ಮೆ ಮೊಯ್ಲಿ ಏನಾದರೂ ಮತ್ತೆ ಗೆದ್ದರೆಂದರೆ ಅದು ಸುಬ್ಬಾರೆಡ್ಡಿಯಿಂದಲೇ ಗೆದ್ದಂತಾಗಿ ತಾನು ಶಾಶ್ವತವಾಗಿ ಮೂಲೆಗುಂಪಾಗಬೇಕಾ-ಗುತ್ತದೆ ಎಂಬ ಸಂಪಂಗಿಯ ಹೊಟ್ಟೆ ಸಂಕಟ ಮೊಯ್ಲಿಗೆ ಅರ್ಥವಾಗಬೇಕು?

ಯಲಹಂಕದಲ್ಲಿ ಕೆಲವೇ ಮತಗಳ ಅಂತರದಿಂ ಜೆಡಿಎಸ್ ಅಭ್ಯರ್ಥಿಯಾಗಿ ಸೋತಿದ್ದ ಚಂದ್ರಪ್ಪನನ್ನು ಮ ಕಾಂಗ್ರೆಸ್ಸಿಗೆ ಸೇರಿಸಿಕೊಂಡಿದ್ದು ವಿಶ್ವನಾಥ್ ವಿರುದ್ಧ ಕಾಂಗ್ರೆ ಅಭ್ಯರ್ಥಿಯಾಗಿ ಸೋತಿದ್ದ ಗೋಪಾಲಕೃಷ್ಣನನ್ನು ಕಂಗೆಡಿಸಿ ತನಗಿಂತ ಹೆಚ್ಚಿಗೆ ಮತ ಗಳಿಸಿದ್ದ ಚಂದ್ರಪ್ಪನೇ ನಾ ಕಾಂಗ್ರೆಸ್ ಅಭ್ಯರ್ಥಿಯಾದರೆ ಏನು ಗತಿ ಎಂಬ ಭೀತಿ ಬಿದ್ದ ಗೋಪಾಲಕೃಷ್ಣ ಕಮ್ಮಿಯೆಂದರೂ 40 ಸಾವಿರದಷ ಮತಗಳಿಗೆ ಪೆಟ್ಟು ಕೊಡಬಲ್ಲ. ಆ ಕಾಲದಿಂದಲ ಚಿಕ್ಕಬಳ್ಳಾಪುರದಲ್ಲಿ ಕಾಂಗ್ರೆಸ್ ಕಟ್ಟಿದ ತನಗೆ ವಂಚಿ ಸುಧಾಕರ್‌ಗೆ ಟಿಕೆಟ್ ಕೊಡಿಸಿದ್ದರಿಂದಾಗಿ ಮಾಜಿ ವಿದ್ಯಾರ್ಥಿ ನಾಯಕ ಮತ್ತು ಮಾಜಿ ಒಕ್ಕಲಿಗರ ಸಂಘದ ಡೈರೆಕ್ಟ ಆಂಜನಪ್ಪನ ವರಿಗೂ ಮೊಯ್ಲಿ ಮೇಲೆ ಸಿಟ್ಟಿ ಯಲಹಂಕದ ಮಾಜಿ ಶಾಸಕ ಸೂರ್ಯನಾರಾಯಣ ಗೌಡ ಮಗ ಗೋಪಿನಾಥ್‌ಗೂ ತನಗೆ ಟಿಕೆಟ್ ತಪ್ಪಿಸಿದ ಮೊಯ ವಿರುದ್ಧ ಸಿಟ್ಟಿದೆ.


ಚಿಕ್ಕಬಳ್ಳಾಪುರದ ಉದ್ದಕ್ಕೂ ಆಯಾ ವಿಧಾನಸಭ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಕಾಂಗ್ರೆಸ್ಸಿನ ಇಂಥಾ ತರಹೇವಾ ಗುಂಪುಗಳ ಮಧ್ಯದ ಕಚ್ಚಾಟವೆಂಬುದು ಪರೋಕ್ಷವಾ ಕುಮಾರಸ್ವಾಮಿಗೆ ಲಾಭವಾಗುವ ಸಾಧ್ಯತೆಗಳೇ ಹೆಚ ಮಗ ಹರ್ಷ ಮೊಯ್ಲಿ ಆಯಾ ತಾಲ್ಲೂಕುಗಳಲ್ಲಿ ರಿಕಾ ಹೂಡಿ ಇಂಥ ಅಸಮಾಧಾನಕ್ಕೆ ಎಷ್ಟು ಅಂತ ತೇ ಹಾಕಲು ಸಾಧ್ಯ. ಪತ್ನಿ ಮಾಲತಿ ಮೊಯ್ಲಿ, ಮಗ ಇತ್ಯಾದಿಯಾಗಿ ಸಮಸ್ತ ಮೊಯ್ಲಿಯ ಪರಮಾಪ್ತ ಕೂ ಅಹೋರಾತ್ರಿ ಹೆಣೆಯುತ್ತಿರುವ ನಾನಾ ಷಡ್ಯಂತ್ರಗಳು ನಿಜಕ ಮೊಯ್ಲಿಯನ್ನು ಕಾಪಾಡುತ್ತವಾ? ಅಥವಾ ಕೇವ ಅನುಕಂಪದ ಅಲೆಯೊಂದೇ ತನ್ನನ್ನು ಗೆಲ್ಲಿಸುತ್ತದೆ ಎಂ ಕುಮಾರಣ್ಣನ ಭ್ರಮೆಯೋ ನಿರರ್ಥಕವಾ? ಕಾದ ನೋಡಬೇಕಷ್ಟೇ!

● ರಾ. ಸೋಮನಾಥ

ಮೆಗಾಸ್ಟಾರ್‌ಗೆ ಇದಿರಾಗಿ ಟಿವಿ ನಟ ಬಾಲಾಜಿ!

ಸಾಕ್ಷಾತ್ ಚಿರಂಜೀವಿಯನ್ನೇ ಚಿಕ್ಕಬಳ್ಳಾಪುರಕ್ಕೆ ಕರೆತಂದು ರೋಡ್‌ಷೋ ಮಾಡಿಸಿದ ಮೊಯ್ಲಿ ಆ ಮೂಲಕ ಎರಡೂವರೆ ಲಕ್ಷದಷ್ಟಿರುವ ಬಲಿಜ ಮತಗಳನ್ನು ಬುಟ್ಟಿಗೆ ಹಾಕಿಕೊಳ್ಳುವ ಮಾಸ್ಟರ್ ಪ್ಲಾನಿಗೆ ಕೈಹಾಕಿದ್ದೇನೋ ಸರಿ-

ತಮಾಷೆಯೆಂದರೆ ತೆಲುಗು ನಟ ಚಿರಂಜೀವಿಗೆ ವಿರುದ್ಧವಾಗಿ ಜೆಡಿಎಸ್ ಪರ ಬಲಿಜ ಮತ ಬುಟ್ಟಿಗೆ ಕೈಹಾಕಿದ್ದು ಓರ್ವ ಯಕಶ್ಚಿತ್ ಟಿವಿ ನಟ. ಟಿ.ಎನ್. ಸೀತಾರಾಮ್‌ರ ಮುಕ್ತ ಮನ್ವಂತರ ಇತ್ಯಾದಿ ಧಾರಾವಾಹಿ ಗಳಲ್ಲಿ ಪುಢಾರಿಯಾಗೋ, ಕ್ರಿಮಿನಲ್ ರಾಜಕಾರಣಿಯಾಗೋ ಕಾಣಿಸಿಕೊಳ್ಳುವ ವಿಲಕ್ಷಣ ಮ್ಯಾನರಿಸಂನ ವಿಲ್ಲನ್ ಪಾತ್ರಧಾರಿಯ ಹೆಸರು ಯಲಹಂಕ ಬಾಲಾಜಿ. ಪ್ರತಿ ಸಂಜೆ ಈ ಟೀವಿಯ ಸೀತಾರಾಮ್ ಧಾರಾವಾಹಿಯಲ್ಲಿ ಬಾಲಾಜಿಯ ಪಾತ್ರಕ್ಕೆಂದೇ ಕಾದು ಕೂರುವ ಪ್ರೇಕ್ಷಕ ಸಮೂಹವಿದೆ.



ಈ ಯಲಹಂಕ ಬಾಲಾಜಿ ಜಾತಿಯಲ್ಲಿ ಬಲಿಜ ಮತ್ತು ಚಿಕ್ಕಬಳ್ಳಾಪುರ ತಾಲ್ಲೂಕು ಕಳವರ ಗ್ರಾಮದ ಪಟೇಲರ ವಂಶಸ್ಥ. ಆ ಕಾಲದಿಂದಲೂ ಜೆಡಿಎಸ್‌ನ ಕಟ್ಟಾ ಬೆಂಬಲಿಗ ಬಾಲಾಜಿ ಪ್ರಕಾರ, ಬಲಿಜ ಜನಾಂಗದ ಎಂ.ಎಸ್. ರಾಮಯ್ಯನವರ ಮಗ ಎಂ.ಆರ್. ಸೀತಾರಾಮ್‌ಗೆ ಜಾಲಪ್ಪನವರು ಕೊಡಿಸಿದ್ದ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರವನ್ನು ಆಂಧ್ರಕ್ಕೆ ಮುಖ್ಯಮಂತ್ರಿಯಾಗಿದ್ದ ವೈಎಸ್‌ಆರ್ ಕುಟಿಲತೆಯಿಂದ ತನ್ನ ಪಾಲಾಗುವ ಹಾಗೆ ಕುತಂತ್ರ ಮಾಡಿದ್ದೇ ಮೊಯ್ಲಿ!

ಬಲಿಜ ಸಮೂಹಕ್ಕಾಗಲಿ ಹಿಂದುಳಿದವರಿಗಾಗಲಿ ಮೊಯ್ಲಿ ಚಿಕ್ಕಬಳ್ಳಾಪುರದಲ್ಲಿ ಯಾವುದೇ ರಾಜಕೀಯ ಅವಕಾಶ ಕಲ್ಪಿಸಲಿಲ್ಲ, ಮೊಯ್ಲಿಯನ್ನು ಗೆಲ್ಲಿಸಲು ತನ್ನ ಸ್ವಂತ ಅಳಿಯನ ವಿರುದ್ಧ ಮೊಯ್ಲಿ ಪರವಾಗಿ ಪ್ರಚಾರ ಮಾಡಿ ಮೊಯ್ಲಿಯವರನ್ನು ಗೆಲ್ಲಿಸಿಕೊಟ್ಟ ದೇವನಹಳ್ಳಿಯ ಎಸ್. ರಾಮಣ್ಣನವರಿಗಾದರೂ ಯಾವುದಾದರೂ ರಾಜಕೀಯ ಅವಕಾಶ ಕಲ್ಪಿಸಬಹುದಿತ್ತು. ಆವತ್ತು ತನ್ನನ್ನು ಚಿಕ್ಕಬಳ್ಳಾಪುರಕ್ಕೆ ಕರೆತಂದು ತನು, ಮನ, ಧನ ಧಾರೆಯೆರೆದು ಗೆಲ್ಲಿಸಿಕೊಟ್ಟ ಸಂಪಂಗಿಯವರನ್ನಾಗಲಿ ದೇವನಹಳ್ಳಿಯ ವೆಂಕಟಸ್ವಾಮಿಯನ್ನಾಗಲಿ ಗೆಲ್ಲಿಸಲು ಮೊಯ್ಲಿ ಯಾವುದೇ ಪ್ರಯತ್ನ ಮಾಡಲಿಲ್ಲ.

ಅಷ್ಟೇ ಏಕೆ, ತನ್ನ ಗುರು ಜಾಲಪ್ಪ ಮತ್ತವರ ಮಗ ನರಸಿಂಹಸ್ವಾಮಿಯನ್ನು ಎದುರು ಹಾಕಿಕೊಂಡು ಮೊಯ್ಲಿ ಗೆಲ್ಲಿಸಲು ಕೈ ಜೋಡಿಸಿದ ದೊಡ್ಡಬಳ್ಳಾಪುರದ ಮಾಜಿ ಶಾಸಕ ಆರ್.ಜಿ. ವೆಂಕಟಾಚಲಯ್ಯನವರಿಗೂ ಮೊಯ್ಲಿ ಕೈಕೊಟ್ಟರು. ತಾನು ಮುಖ್ಯಮಂತ್ರಿಯಾಗಿದ್ದಾಗ ಖರ್ಗೆ ಮತ್ತು ಕೃಷ್ಣ ಎಷ್ಟೇ ಕಾಡಿ ಬೇಡಿದರೂ ದಲಿತ ಹೆಣ್ಣು ಮಗಳೆಂಬ ಒಂದೇ ಕಾರಣಕ್ಕೆ ಚಿಕ್ಕಬಳ್ಳಾಪುರದ ಶಾಸಕಿಯನ್ನು ಮೊಯ್ಲಿ ಮಂತ್ರಿ ಮಾಡಲಿಲ್ಲ. ಬಸವಲಿಂಗಪ್ಪನವರನ್ನು ಮೊಯ್ಲಿಯೇ ನಿಂತು ಮೂಲೆಗುಂಪು ಮಾಡಿದ್ದು. ಇದೇ ಕೊರಗಿಗೆ ಬಿದ್ದು ಬಸವಲಿಂಗಪ್ಪ ಕೊನೆಯುಸಿರೆಳೆದರು. ಚಿಕ್ಕಬಳ್ಳಾಪುರಕ್ಕೆ ಬರಬೇಕಿದ್ದ ಐಐಟಿ ಮೊಯ್ಲಿ ಪಿತೂರಿಯಿಂದಾಗಿಯೇ ನಿಂತು ಹೋಯ್ತು. ಇವರಿಗಿಂತಲೂ ಚಿಕ್ಕ ಖಾತೆ ಹೊಂದಿದ್ದ ಖರ್ಗೆ ಮತ್ತು ಮುನಿಯಪ್ಪ ತಮ್ಮ ಕ್ಷೇತ್ರಕ್ಕೆ ಮಾಡಿದ್ದರ ಮುಂದೆ ಮೊಯ್ಲಿ ಚಿಕ್ಕಬಳ್ಳಾಪುರಕ್ಕೆ ಮಾಡಿದ್ದು ಏನೇನೂ ಅಲ್ಲ, ಕಳೆದ 5 ವರ್ಷದಿಂದ ಮೊಯ್ಲಿ ಚಿಕ್ಕಬಳ್ಳಾಪುರದ ಒಬ್ಬೇ ಒಬ್ಬ ಬಡವನ ಮನೆಬಾಗಿಲು ತುಳಿಯಲಿಲ್ಲ.

ಹೀಗೆ ಸಾಗುವ ಯಲಹಂಕ ಬಾಲಾಜಿಯ ಕರಪತ್ರ ಚಿಕ್ಕಬಳ್ಳಾಪುರದ ಬಲಿಜ ಸಮೂಹದ ಮಧ್ಯೆ ತೆಲುಗು ನಟ ಚಿರಂಜೀವಿ ಎಬ್ಬಿಸಿದ ಅಲೆಯನ್ನೂ ಮೀರಿಸಿದ ಪ್ರಭಾವ ಬೀರುತ್ತಿದೆ. ಮೆಗಾಸ್ಟಾರ್ ಚಿರಂಜೀವಿಯನ್ನು ಟೀವಿ ನಟ ಬಾಲಾಜಿಯ ಪ್ರಶ್ನೆಗಳು ಮಂಕಾಗಿಸಿ ಬಿಡುತ್ತವೆ.

ಕವಿಯತ್ರಿಯರೇ ಎಚ್ಚರಿಕೆ

04 ⏮

ಇದ್ದಕ್ಕಿದ್ದಂತೆ ಚಂದ್ರಾಚಾರಿಯ ಗೆಟಪ್ಪೇ ಬದಲಾಯಿತು. ಮೂರ್ರಾಸಿನ ಜುಬ್ಬಾ ಆರು ಕಾಸಿನ ಸಿಗರೇಟ್ ಪ್ಯಾಕೆತ್ತಿಕೊಂಡವನೇ ಕೈಯಲ್ಲಿ ದಿನಕ್ಕೊಂದರಂತೆ ಕಾಮು, ಕಾಫ್ಕ, ಬೋದಿಲೇರ್, ಫ್ರಾಯ್ಡ್; ಇತ್ಯಾದಿ ಚಿಂತಕರ ಪುಸ್ತಕ ಹಿಡಕೊಂಡು ರವೀಂದ್ರ ಕಲಾಕ್ಷೇತ್ರಕ್ಕೆ ಬರುತ್ತಿದ್ದ. ಯಾರಾದರೂ ಬೋದಿಲೇರ್ ಯಾರೆಂದರೆ ಬೋದಿಸತ್ವನ ಎರಡನೇ ಅವತಾರ ಎನ್ನುತ್ತಿದ್ದ. ಸಿಗ್ಮಂಡ್ ಫ್ರಾಯ್ಡ್ ಥಿಯರಿ ಬಗ್ಗೆ ಕೇಳಿದರೆ ಸಿಕ್ಕವರನ್ನು ಫ್ರಾಡ್ ಮಾಡೋದೇ ಚಾಣಾಕ್ಷ ತಂತ್ರ ಎನ್ನುತ್ತಿದ್ದ. ಕಾಮು ಎಂದರೆ ಕಾಮ ಸಿದ್ಧಾಂತ, ಕಾಫ್ಕ ಎಂದರೆ ಕ್ಯಾಪ್ ಅರ್ಥಾತ್ ಟೋಪಿ ಥಿಯರಿ, ಫ್ರಾಯ್ಡ್ ಅಂದರೆ ಫ್ರಾಡ್-ಹೀಗೆ ಒಂದಕ್ಕೊಂದು ಸಂಬಂಧವೇ ಇಲ್ಲದೆ ಅಸಂಬದ್ಧವಾಗಿ ತನ್ನ ವೈಚಾರಿಕ ಪ್ರತಿಭೆ ತೇಲಿಬಿಡುತ್ತಿದ್ದ ಚಂದ್ರಾಚಾರಿ ಬರುತ್ತಿದ್ದದು ಹೊಚ್ಚ ಹೊಸ ಸ್ವಿಫ್ಟ್ ಕಾರಿನಲ್ಲಿ, ಪಾಪ ಅದರ ಸಾಲದ ಕಂತು ಕಟ್ಟದೇ ನಾಲ್ಕು ತಿಂಗಳಾಗಿದೆ ಎಂಬ ಸತ್ಯ ಕಾರ್ಪೆಂಟರ್, ಮಂಜು, ಶರತ್‌ರಂಥ ಬಾಲಕರಿಗೆಲ್ಲಿ ಅರ್ಥವಾಗಬೇಕು!

ಮಾತೆತ್ತಿದರೆ ತನ್ನ ಮೊಬೈಲ್ ಕಿವಿಗೊತ್ತಿಕೊಂಡು 'ಲಾರಿ ಲೋಡು ತೆಂಗಿನಕಾಯಿ ಬಂತೇನೋ, ಮಾರ್ಕೆಟ್ಟಿನಲ್ಲಿ 10 ಲಕ್ಷ ಈಸ್ಕೊಂಡು ಅದನ್ನು ಬ್ಯಾಂಕಿಗೆ ಕಟ್ಟು. ನನ್ನ ಫಾರ್ಚುನ್ ಕಾರನ್ನು ರಮ್ಯಾ ಮಂಡ್ಯಕ್ಕೆ ಒಯ್ದಿದ್ದಾಳೆ ಯಾವತ್ತು ಕೊಡ್ತಾಳೆ ಕೇಳು. ಬಾಂಬೆಗೆ ಅರ್ಜೆಂಟ್ ಹೋಗ್ಬೇಕು ಫ್ಲೈಟ್ ಟಿಕೆಟ್ ಬುಕ್ ಮಾಡು...!' ಎಂದು ಬಂಡಲ್ ಬಿಟ್ಟದ್ದನ್ನೇ ಚೇತನಾ, ದೀಪಾ, ಚರಿತಾ, ಅಂಜಲಿ, ಜ್ಯೋತಿ, ವಿದ್ಯಾ, ಸುಧಾ; ಇತ್ಯಾದಿ ಆತುರಗೇಡಿ ಕವಿಯತ್ರಿಯರು ನಂಬಿಬಿಟ್ಟರು. ಸಿಕ್ಕಾಪಟ್ಟೆ ಶ್ರೀಮಂತ, ಜೊತೆಗೆ ಪ್ರಜ್ಞಾವಂತ ಎಂದುಕೊಂಡು ಇನ್ನೂ ಅನೇಕ ಯುವತಿಯರು ಚೂಡನ ಫೇಸ್‌ಬುಕ್‌ಗೆ ಫ್ರೆಂಡ್ ರಿಕ್ವೆಸ್ಟ್ ರವಾನಿಸುತ್ತಲೇ ಇದ್ದರು.



ಮಂಜುನಾಥ್



ಕಾರ್ಪೆಂಟರ್


ಈ ಮಧ್ಯೆ ಆರತಿ ಎಂಬಾಕೆಗೆ ಅದೇನು ರೋಗವೋ ಗೊತ್ತಿಲ್ಲ, ಇತ್ತೀಚೆಗೆ ಹೊಟ್ಟೆಗೆ ಅನ್ನ ತಿನ್ನುವುದನ್ನೇ ಮರೆತುಬಿಟ್ಟಿದ್ದಾಳಂತೆ. ಈ ಪುಣ್ಯಾತಗಿತ್ತಿ ಪದೇ ಪದೇ ಚಂದ್ರಾಚಾರಿಯನ್ನು ಚಂದನ ಧಾರಾವಾಹಿಯ ಕವಿಗೋಷ್ಠಿಗೆ ಕರೆಸಿ ಇನ್ನಷ್ಟು ಕವಿಯತ್ರಿಯರನ್ನು ಪರಿಚಯಿಸತೊಡಗಿದಳು.

ವಾಸ್ತವವೆಂದರೆ ಚಂದ್ರಾಚಾರಿ ಪಕ್ಕಾ ಚೆಡ್ಡಿ. ಲಂಕೇಶರ ಗುಣಮುಖ ನಾಟಕ, ಲಂಕೇಶ್ ಜನ್ಮ ದಿನಾಚರಣೆ ಇತ್ಯಾದಿಗಳನ್ನು ಚಂದ್ರಾಚಾರಿ ಏಕೆ ಹುಟ್ಟು ಹಾಕುತ್ತಾನೆಂದರೆ; ಲಂಕೇಶ್ ಎಂಬುದು ಆತನ ಪಾಲಿಗೆ ರೋಲ್‌ಕಾಲ್ ವಸೂಲಿಗೆ 'ಅಸ್ತ್ರ'ವಿದ್ದಂತೆ.

ಕಲಾಕ್ಷೇತ್ರದಲ್ಲಿ ಲಂಕೇಶ್ ಜನ್ಮದಿನಾಚರಣೆ ನಡೆಸಿದ ಮಾರನೇ ಬೆಳಗ್ಗೆಯೇ ಬಿಜೆಪಿ ನಾಯಕ ಸದಾನಂದಗೌಡರ ಮನೆ ಮುಂದೆ ಭಿಕ್ಷಾಪಾತ್ರ ಹಿಡಿದು ನಿಂತಿದ್ದ. ಲಂಕೇಶ್‌ರ ಕ್ರಾಂತಿಕಾರಿ ಹೋರಾಟದ ಭಾಷಣ ಬಿಗಿದವನೇ ಮರುಕ್ಷಣವೇ ಬೆಂಗಳೂರು ದಕ್ಷಿಣ ಬಿಜೆಪಿ ಅಭ್ಯರ್ಥಿ ಅನಂತ್‌ಕುಮಾರ್‌ರಿಂದ ಹಣ ಕಿತ್ತು ಮೋದಿ ಸಿದ್ಧಾಂತವನ್ನು ಹೊಗಳಿದ್ದ. ಹಾವೇರಿಯಲ್ಲಿ ಬಿಜೆ ಅಭ್ಯರ್ಥಿ ಶಿವಕುಮಾರ್ ಉದಾಸಿಯಿಂದ 15 ಲಕ್ಷ ಹಿ ಎಲ್ಲೆಲ್ಲಿ ಬಿಜೆಪಿ ಅಭ್ಯರ್ಥಿಗಳಿರುತ್ತಾರೋ ಅಂಥವರಿಂದ ಲಂಕೇಶ್ ಹೆಸರಲ್ಲಿ ಲಕ್ಷಾಂತರ ಕಾಸು ಕಿತ್ತಿದ್ದ.

ಈ ಎಲ್ಲಾ ದುರಾಚಾರದ ಮುಂದುವರಿಕೆಯಂತೆ ಈ 'ಪಾಪಿಯೊಬ್ಬನ ಪ್ರೇಮ ಪದ್ಯಗಳು' ಎಂಬ ಕವನಸಂಕಲ ಪ್ರಕಟಿಸುತ್ತಿದ್ದಾನಂತೆ. ತನ್ನ ವಿಕೃತಿಗೆ ತಕ್ಕಂತೆ ಅದ ಚಾಮರಾಜಪೇಟೆಯ ಟಿಆರ್ ಮಿಲ್ ಹಿಂಭಾಗ ಸ್ಮಶಾನದಲ್ಲಿ ಬಿಡುಗಡೆ ಮಾಡುತ್ತಾನಂತೆ. ಅಲ್ಲಿಗೆ ಯಾರ ಫೇಸ್‌ಬುಕ್ ಕಮಂಗಿಗಳು ಬರುತ್ತಾರೋ ಗೊತ್ತಿಲ್ಲ. ಆ ಬಂದ ಕವಿಯತ್ರಿಯರ್‍ಯಾರೂ ಉದ್ಧಾರವಾಗುವ ಲಕ್ಷಣಗಳಿ ಮೊದಲೇ ಸ್ಮಶಾನ. ಅದೂ ರಾತ್ರಿ ಹೊತ್ತಿನ ಕಾರ್ಯಕ್ರ ಜೊತೆಗೆ ಬಿರಿಯಾನಿ ಮತ್ತು ವಿಸ್ಕಿ, ಬ್ರಾಂಡಿಯ ಯಥೇ ಭೋಜನ. ಸ್ಮಶಾನವಾದರೂ ಕುಡಿದು ಚಿತ್ತಾದವ ಮಲಗಲಿಕ್ಕೆಂದು ಅಲ್ಲಲ್ಲೇ ಹಾಸಿಗೆ ದಿಂಬು. ಕಾರ್ಯಕ್ರ ಗ್ಲಾಮರಸ್ಸಾಗಿರಲೆಂದು ಎಲ್ಲೆಲ್ಲಿಂದಲೋ ಕವಿಯತ್ರಿಯ ಬಂದಂತೆ 'ಚಂದ್ರಾಚಾರಿಯೇ ಹೇಳಿ ಕರೆಸುವ ಲೈ ಬ್ಯಾಂಡ್ ಸುಂದರಿಯರು. ಜೊತೆಗೆ ಕವ್ವಾಲಿ... ಸುವ್ವಲಾ ಯಾವುದಕ್ಕೂ ಚಾಮರಾಜಪೇಟೆ ಪೊಲೀಸ ಹುಷಾರಾಗಿರಬೇಕು. ಇಲ್ಲಿಗೆ ಬರುವ ಕವಿಯತ್ರಿಯ ಯುವತಿಯರ ಮಾನ ಮತ್ತು ಪ್ರಾಣದ ಬಗ್ಗೆ ಕ ರಾಜ್ಯ ಮಹಿಳಾ ಆಯೋಗವಾದರೂ ಎಚ್ಚರಿಕೆಯಿಂದಿರಬೇ

● ರಾ. ಸೋಮನಾಥ




ಪಾಠ ಕಲಿಸಿದ ಮಂಗಳೂರಿನ ಪ್ರಜ್ಞಾವಂತ ಜನತೆಗೆ ಅಭಿನಂದನೆ ಸಲ್ಲಿಸಿ ವಿಷಯಕ್ಕೆ ಬರುತ್ತೇನೆ.

ಕರಾವಳಿ ಕರ್ನಾಟಕದ ಸಾಕ್ಷಿಪ್ರಜ್ಞೆ, ರಾಜ್ಯದ ಸಮಕಾಲೀನ ಶ್ರೇಷ್ಠ ಬುದ್ಧಿಜೀವಿ, ಚಿಂತಕರಲ್ಲೊಬ್ಬರಾದ ಸುರೇಶ್‌ಭಟ್ ಇಳಿವಯಸ್ಸಿನಲ್ಲೂ ಬಿಸಿ ರಕ್ತದ ಯುವಕರನ್ನೂ ನಾಚಿಸುವಂತಹ ಅಚಂಚಲ ಬದ್ಧತೆಯ ಹೋರಾಟಗಾರ. ಇತ್ತೀಚೆಗೆ ನಕ್ಸಲ್ ನಿಗ್ರಹ ದಳದ ಪೊಲೀಸ್‌ನಿಂದ ಕಗ್ಗೊಲೆಗೊಳಗಾದ ಅಮಾಯಕ ಕಬೀರನ ಹತ್ಯೆ ಖಂಡಿಸಿ ಕೋಮು ಸೌಹಾರ್ದ ವೇದಿಕೆಯ ಜಿಲ್ಲಾಧ್ಯಕ್ಷರಾದ ಸುರೇಶ್ ಭಟ್ ನೇತೃತ್ವದಲ್ಲಿ ಮಂಗಳೂರಿನಲ್ಲಿ ಪತ್ರಿಕಾಗೋಷ್ಠಿ ನಡೆದಿತ್ತು. ಪತ್ರಿಕಾಗೋಷ್ಠಿಯ ಬಳಿಕ ನಾವು ಹಿರಿಕಿರಿ ಸಂಗಾತಿಗಳೆಲ್ಲಾ ಕೂತು ಚಹ ಹೀರುತ್ತಾ ಮಾತನಾಡುತ್ತಿದ್ದೆವು. ಇದ್ದಕ್ಕಿದ್ದಂತೆಯೇ ನಾವಿದ್ದ ಓಪನ್ ರೂಮ್‌ಗೆ ಪ್ರವೇಶಿಸಿದ ಇಬ್ಬರು ಯುವಕರಲ್ಲಿ ಒಬ್ಬಾತ ಸುರೇಶ್ ಭಟ್‌ರ ಹಿಂಬದಿಯಿಂದ ಬಂದು ಕರ್ಚೀಫ್‌ವೊಂದರಲ್ಲಿ ಕುತ್ತಿಗೆಗೆ ಬಿಗಿದ. ಇನ್ನೊಬ್ಬಾತ ಅವರ ಮುಖಕ್ಕೆ ತಾನು ಪ್ಲಾಸ್ಟಿಕ್ ಚೀಲವೊಂದರಲ್ಲಿ ತಂದಿದ್ದ ಸಗಣಿ ಬಳಿದ. ಅಷ್ಟರಲ್ಲಾಗಲೇ ನಾನು (ಈ ವರದಿಗಾರ), ಅಡ್ವೊಕೇಟ್ ಕಲಂದರ್ ಕೊಯ್ಲ, ಇಸ್ಮಾಯಿಲ್ ಕರ್ವೇಲು ಎದ್ದು ಅವರತ್ತ ಜಿಗಿದೆವು.

ಅವರೀರ್ವರೂ ಅಲ್ಲಿಂದ ಓಟ ಕಿತ್ತರು. ನಾವು ಅವರನ್ನು ಹಿಂಬಾಲಿಸಿದೆವು. ಒಬ್ಬ ಭಜರಂಗಿ ಅದ್ವೇಗೊ ಹೋಟೆಲ್ ಪುಟಗೋಸಿ ಪ್ಲೂಟ್ ಲಾಯರ್ ಜಗದೀಶ್ ಶೇಣವ ಮತ್ತಾತನ ಪಟಾಲಂ ಠಾಣೆ ತಲುಪಿತ್ತು, ಈ ಹಿಂದಿನಂತೆ ಹೆಟ್ಟಿ, ಕೇಸು ಹಾಕಿಸಿ ಭಜರಂಗಿ ಪುಂಡ ಚೇತನ್‌ನನ್ನು ಬಿಡಿಸಿಕೊಂಡು ಹೋಗಿ ಕಲ್ಲಡ್ಕ ರಿಪಬ್ಲಿಕ್‌ನ ಡಾನ್‌ನ ಶಹಬಾಸ್‌ಗಿರಿ ಗಿಟ್ಟಿಸಿ ತನ್ನ ರಾಜಕೀಯ ಬೇಳೆ ಬೇಯಿಸುವ ಶೇಣವನ ಪ್ಲಾನು ತಲೆಕೆಳಗಾಯಿತು. ಆತ ಅವಮಾನದಿಂದ ಕುದ್ದು ಹೋಗಿದ್ದ, ಆತನ ಮುಖ ಕೊಳೆತ ಕುಂಬಳಕಾಯಿಯಂತಾಗಿತ್ತು, ಆತ ತನ್ನ ಮತ್ತಷ್ಟು ಕಪಿಗಳನ್ನು ತಂದು ಠಾಣೆಯ ಸುತ್ತ ಜಮಾಯಿಸುವಂತೆ ಮಾಡಿದ. ಕೆಲವೇ ಹೊತ್ತಿನಲ್ಲಿ ಜಿಲ್ಲೆಯ ಎಲ್ಲಾ ಉನ್ನತ ಅಧಿಕಾರಿಗಳು ಜಮಾಯಿಸತೊಡಗಿದಾಗ ಪರಮ ಪುಕ್ಕಲ ಶೇಣವ ಮತ್ತು ಆತನ ಪೋಲಿ ಶಿಷ್ಯರು ಅಲ್ಲಿಂದ ಪೇರಿ ಕಿತ್ತಿತು.

ಬಹುಶಃ ಮಂಗಳೂರಿನ ಪೊಲೀಸರು ಪ್ರಗತಿಪರರ ದೂರಿಗೆ ಇಷ್ಟು ಬೇಗ ಸ್ಪಂದಿಸಿದ್ದು ನನ್ನ ನೆನಪಿನಲ್ಲಿ ಇದು ಮೊದಲ ಬಾರಿ. ಮಂಗಳೂರಿನ ಕಮೀಷನರ್ ಹಿತೇಂದ್ರ ಯಾವತ್ತೂ ಚೆಡ್ಡಿಗಳ ತಾಳಕ್ಕೆ ತಕ್ಕಂತೆ ಕುಣಿದಿಲ್ಲ. ಬಹುಶಃ ನಮ್ಮ ಕೇಸಿನಲ್ಲಿ ಗೃಹ ಇಲಾಖೆಯಿಂದ ಉನ್ನತ ಅಧಿಕಾರಿಗಳ ಮೇಲೆ ಬಿದ್ದ ಒತ್ತಡ ಮಂಗಳೂರಿನ ಕೆಲವಷ್ಟು ಚೆಡ್ಡಿ ಪೊಲೀಸರನ್ನು ನಡುಗಿಸಿತ್ತು. ಬಡಪಾಯಿ ಬ್ಯಾರಿಗಳಿಗೆ, ಕಾಲೇಜು ಹುಡುಗರಿಗೆ, ಪಾಪದ ಹಿಂದೂ ಹುಡುಗಿಯರಿಗೆ ಹೊಡೆದು ಬಡಿದು ದಕ್ಕಿಸಿ ಕೊಳ್ಳುತ್ತಿದ್ದ ಮಂಗಳೂರಿನ ಚೆಡ್ಡಿಗಳಿಗೆ ಇದು ಎರಡನೇ ಪಾಠ. (ಹೋಂ ಸ್ಟೇ ದಾಳಿಕೋರರಿಗೆ ಆಗಿದ್ದು ಮೊದಲ ಪಾಠ)




ಚೇತನ್‌ಕುಮಾರ್ ಶೆಟ್ಟಿ ಕಟ್ಟರ್ ಭಜರಂಗಿಯೇನೋ ಸರಿ. ಆದರೆ ಆತ ಅದೆಷ್ಟು ಪೆದ್ದನೆಂದರೆ ಆತನನ್ನು ಅಲ್ಪಬುದ್ಧಿಯ ಚೆಡ್ಡಿಗಳು ಹೊಂಡಕ್ಕೆ ನೂಕುವುದನ್ನೂ ಅರ್ಥ ಮಾಡಿಕೊಳ್ಳಲಾರದಷ್ಟು. ಇದೀಗ ಸಗಣಿ ತುಂಬಿಸಿ ಹೊಟ್ಟೆ ಹೊರೆಯುವ ಗೋರಕ್ಷಾ ದಳ್‌ನ ಪ್ರಮುಖ ಪ್ರದೀಪ್ ಪಂಪ್‌ವೆಲ್ ಮತ್ತು ಇನ್ನೋರ್ವ ಭಜರಂಗಿ ತಿಲಕನೂ ಕಂಬಿಯೊಳಗೆ ಇದ್ದಾರೆ. ಚೇತನ್ ಇನ್ನೇನು 15 ದಿನಗಳಲ್ಲಿ ವಿದೇಶಕ್ಕೆ ತೆರಳಬೇಕಿತ್ತು. ತನ್ನ ತಲೆಕೆಟ್ಟ ಮಾನಸಿಕ ರೋಗಿ ಬಾಸ್‌ಗಳ ಆಣತಿಯಂತೆ ಮಾಡಲು ಹೋಗಿ ಸ್ವತಃ ತನ್ನ ಕೈಯಾರೆ ತನ್ನ ಭವಿಷ್ಯಕ್ಕೆ ತಾನೆ ಚಪ್ಪಡಿ ಕಲ್ಲೆತ್ತಿ ಹಾಕಿದ್ದಾನೆ. ಸಾರ್ವಜನಿಕರು ಆತನನ್ನು ಹಿಡಿದು ತದುಕಿದಾಗಲೋ, ಪೊಲೀಸ್ ಕೈಗೆ ಹಸ್ತಾಂತರಿಸಲ್ಪಟ್ಟಾಗಲೋ, ಲಾಕಪ್‌ನೊಳಗೆ ತಳ್ಳಲ್ಪಟ್ಟಾಗಲೋ ಚೇತನ್‌ಗೆ ಪಶ್ಚಾತ್ತಾಪವಾಗಲೇ ಇಲ್ಲ. ಈ ಘಂಡು ಧರ್ಮ ರಕ್ಷಕರಿಗೆ ತಮ್ಮ ಭವಿಷ್ಯಕ್ಕಿಂತಲೂ ಹೆಚ್ಚಿನ ಒಲವು ಪೊಳ್ಳು ಸಿದ್ಧಾಂತದೆಡೆಗಿದ್ದರೆ ಯಾರೇನು ಮಾಡಲು ಸಾಧ್ಯ. ಮಾಡಿದ್ದನ್ನು ಅನುಭವಿಸಲೇಬೇಕು.

● ಇಸ್ಮತ್ ಪಜೀರ್

ಮಂಗಳೂರಿನ ಸಗಣಿ ಬಾಕರು

ಸಮಾಜದ ಪ್ರತಿಷ್ಠಿತರ ಮುಖಕ್ಕೆ ಮಸಿ ಬಳಿಯುವುದು ೀರ್ಘ ದಶಕದಲ್ಲಿ ಪ್ರಚಾರಪ್ರಿಯ ಪುಂಡುಪೋಕರಿಗಳಿಗೆ, ನಬೆಳಗಾಗುವುದರೊಳಗೆ ಹೀರೋ ಆಗ ಹೊರಟವರಿಗೆ ಗಲಿರುವ ಹೊಸ ಮಾನಸಿಕ ರೋಗ. ಇರಾಕಿನ ಪತ್ರಕರ್ತ ಶಾಚಿ ಜಾರ್ಜ್ ಬುಷ್‌ಗೆ ಚಪ್ಪಲಿ ಎಸೆಯುವ ಮೂಲಕ ಮನಿತ ಇರಾಕಿ ಜನತೆಯ ನೋವನ್ನು, ದುಗುಡವನ್ನು ುತ್ತು ಆಕ್ರೋಶವನ್ನು ಹೊರಗೆಡಹಿದ್ದ. ಆ ಬಳಿಕ ಚಾರಪ್ರಿಯ ಪುಂಡರಿಗೆಲ್ಲಾ ಅದೇ ಮಾನಸಿಕ ಕಾಯಿಲೆ ಾರಂಭವಾಯಿತು. ಭಾರತದಲ್ಲಿ ನರಹಂತಕನ ಭಿಮಾನಿಗಳು ಅರವಿಂದ್ರ ಕೇಜ್ರಿವಾಲ್‌ರಿಗೆ ೋದಹೋದಲ್ಲಿ ಮುಖಕ್ಕೆ ಮಸಿ ಬಳಿಯುತ್ತಾ ಪ್ರತಿನಿತ್ಯ ತ್ರಿಕೆಯಲ್ಲಿ ಸುದ್ದಿಯಾಗುತ್ತಿರುವಾಗ ಮಂಗಳೂರಿನ ಭಜರಂಗಿ ುಂಡನಿಗೂ ದಿನಬೆಳಗಾಗುವುದರೊಳಗೆ ಸಂಘ ಪರಿವಾರದ ಣ್ಮಣಿಯಾಗುವ ಆಸೆ ಹುಟ್ಟಿತಂತೆ. ಅದನ್ನು ಕಾರ್ಯರೂಪಕ್ಕೆ ುವ ಸಲುವಾಗಿ ಸಗಣಿ ಗುಂಪಿನ ಮುಖಂಡರ ಆಣತಿಯ ೇರೆಗೆ ತಲೆ ತುಂಬಾ ಸಗಣಿ ತುಂಬಿಸಿಕೊಂಡ ಪರಿಣಾಮ ಗಣಿಯ ಹುಳು ಮೆದುಳನ್ನೆಲ್ಲಾ ಕೆರೆದು, ಮೆದುಳಿನ ಯಕ್ಕೊಳಗಾದ ಚೇತನ್‌ಕುಮಾರ್ ಶೆಟ್ಟಿ ಎಂಬ 23ರ ರೆಯದ ನವ ಭಜರಂಗಿ ಕೋಮು ಸೌಹಾರ್ದ ವೇದಿಕೆಯ ಲ್ಲಾಧ್ಯಕ್ಷ ಸುರೇಶ್ ಭಟ್‌ರ ಮುಖಕ್ಕೆ ಸಗಣಿ ಬಳಿದು ರಾರಿಯಾಗುವಾಗ ಮಂಗಳೂರಿನ ಆಕ್ರೋಶಿತ ್ರಜ್ಞಾವಂತರಿಂದ ಧರ್ಮದೇಟು ತಿಂದು ಇದೀಗ ಂಬಿಯೊಳಗೆ ಸೇರಿದ್ದಾನೆ. ಮೋದಿ ಅಲೆ ಎಂಬ ಭ್ರಮೆಯಲ್ಲಿ ೇಲಾಡುತ್ತಿರುವ ಕೇಸರಿಪುಂಡರಿಗೆ ಇನ್ನು ತಮ್ಮದೇ ನೂನು, ತಮ್ಮದೇ ಸರಕಾರ, ತಾವಾಡಿದ್ದೇ ಆಟ ಎಂಬ ್ರಾಂತಿ ಶುರುವಾಗಿಬಿಟ್ಟಿದೆ. ಕಿವಿಯೊಳಕ್ಕೆ ಸುಳಿಗಾಳಿ ೋಕಿದ ಹೋರಿಯಂತೆ ಸಿಕ್ಕ ಸಿಕ್ಕವರ ಮೇಲೆ ೆರಿಹಾಯುತ್ತಿದ್ದ ಸಗಣಿ ಪುಂಡರಿಗೆ ಮತ್ತು ಆತನ ಾಸ್‌ಗಳಿಗೆ ಮೊನ್ನೆ ಮಂಗಳವಾರ ಸಂಜೆ ಮಂಗಳೂರಿನ ಡ್‌ಲ್ಯಾಂಡ್ಸ್ ಹೋಟೆಲ್ ಆವರಣದಲ್ಲಿ ಮರೆಯಲಾಗದ



ಆವರಣದಿಂದ ಓಡಿ ತಪ್ಪಿಸಿಕೊಂಡ. ಚೇತನ್‌ಕುಮಾರ್ ಶೆಟ್ಟಿ ಹೋಟೆಲ್ ಹೊರಾಂಗಣದಲ್ಲಿದ್ದ ಗ್ರಾಹಕರ ಕೈಗೆ ಸಿಕ್ಕಿ ಬಿದ್ದ. ನಾವಿನ್ನೇನು ಆತನ ಬಳಿ ತಲುಪಬೇಕೆಂದರೆ ಹೋಟೆಲ್ ಗ್ರಾಹಕರ ಕೈಯಿಂದ ಹಣ್ಣುಗಾಯಿ, ನೀರುಗಾಯಿ ಹೊಡೆಸಿಕೊಂಡಿದ್ದ ನಾವು ಅವರ ಕೈಯಿಂದ ಬಿಡಿಸಿಕೊಂಡು ಚೇತನ್ ಕುಮಾರ್‌ನನ್ನು ಅತ್ತ ಕೊಂಡೊಯ್ಯುತ್ತಿರಬೇಕಾದರೆ ಸುರೇಶ್ ಭಟ್ ಸಗಣಿಯುಕ್ತ ಮುಖದೊಂದಿಗೆ ಮುಂದೆ ಬಂದರು. ಅಷ್ಟರಲ್ಲಾಗಲೇ ಇದನ್ನು ಕಂಡ ಪ್ರಜ್ಞಾವಂತ ನಾಗರಿಕರ ಆಕ್ರೋಶ ಇಮ್ಮಡಿಯಾಯಿತು. ಅಲ್ಲಿದ್ದ ಪ್ರತಿಯೋರ್ವನೂ "ನಿನ್ನ ಅಜ್ಜನ ವಯಸ್ಸಿನವರ ಮೇಲೆ ಸಗಣಿ ಬಳಿದಿಯಲ್ಲೋ, ನಿನ್ನ ಹಿಂದೂ ಧರ್ಮ ಕಲಿಸಿದ ಸಂಸ್ಕಾರ ಇದೇನಾ?..." ಎಂದು ಪ್ರಶ್ನಿಸುತ್ತಿದ್ದರು. ಇದಾಗಿ ಕೆಲವೇ ನಿಮಿಷಗಳೊಳಗೆ ಪೊಲೀಸ್ ಪಡೆ ಅಲ್ಲಿ ಜಮಾವಣೆಯಾಗಿ ಆತನನ್ನು ಎತ್ತಿಕೊಂಡು ಬಂದರು ಠಾಣೆಗೆ ಕೊಂಡೊಯ್ದರು.

ನಾವು ಠಾಣೆಗೆ ತಲುಪುವ ಮುನ್ನವೇ ಚೆಡ್ಡಿಗಳ

ನಳಿನ್‌ನ ರಂಗೀಲಾ ರಗಳೆ!!

05 ⏮

ಆದರೆ ಅದಾಗಲೇ ನಳಿನ್‌ನ "ಸರಸ-ಸಲ್ಲಾಪ"ದ ಫೋನ್ ಕಾಲ್ ದಾಖಲೆ ಚಮತ್ಕಾರದಿಂದ ಪೀಪಿ ಪಡೆದುಕೊಂಡಾಗಿತ್ತು. ಎಂಪಿಯಂಥ ವಿಐಪಿಗೆ ಹುಡುಗಿ ಮಾಡಿರುವ ಫೋನ್ ಕಾಲ್ ಲಿಸ್ಟ್ ಏರ್‌ಟೆಲ್ ಕಂಪನಿಯಿಂದ ಆತ ಪಡೆದಿದ್ದೇ ಸಾಹಸ! ಅದಕ್ಕಾತ ಸರ್ಕಾರದ ಗುಪ್ತಚರ ಇಲಾಖೆಯ ಅಧಿಕಾರಿಗಳನ್ನೇ ತುಂಬ ನಾಜೂಕಾಗಿ ಬಳಸಿಕೊಂಡಿದ್ದ. ಆದರೆ ಟಿಕೆಟ್ ಬಟವಾಡೆ ಹತ್ತಿರವಾದಂತೆ ಡಾನ್ ಪೀಪಿ ಬಗ್ಗೆ ಅಂಥ ಆಸಕ್ತಿ ವಹಿಸಲಿಲ್ಲ. ಒಂದು ಕೋಟಿ ರೂಪಾಯಿ ಕಾಣಿಕೆ ಕೊಡುವ ಡೀಲ್ ಮಾಡಿದ್ದ ಬಂಟ್ವಾಳದ ರಾಜೇಶ್ ನಾಯಕ್ ಉಳಿಪ್ಪಾಡಿ ಎಂಬ ಗುತ್ತಿನ ಸರದಾರನ ಪರ ಡಾನ್ ಟಿಕೆಟ್ ಲಾಬಿ ಮಾಡಿದರು. ಕಲ್ಲಡ್ಕ ಭಟ್ಟನಿಗೂ ನಳಿನ್‌ಗೆ ಟಿಕೆಟ್ ತಪ್ಪಿಸುವ ಒಳ ಇರಾದೆಯಿತ್ತು. ಕಳೆದ ಅಸೆಂಬ್ಲಿ ಇಲೆಕ್ಷನ್ ಹೊತ್ತಲ್ಲಿ ಉಡುಪಿಯ ಹೆಂಡತಿ ಹಂತಕ ರಘುಪತಿ ಭಟ್ಟ ರಷ್ಯನ್ ಹುಡುಗಿಯೊಂದಿಗೆ ಬೆತ್ತಲಾಗಿ ಜನಿವಾರ ಎಳೆಸಿಕೊಳ್ಳುವ "ಆಟ"ದಲ್ಲಿ ನಿರತನಾದ ಸಿಡಿ ಹೊರಬಂದಿರಲಿಲ್ಲವಾ? ಆ ರಾಸಲೀಲಾ ಸಿಡಿ ರಘುಪತಿ ಭಟ್ಟನಿಗೆ ಬಿಜೆಪಿ ಟಿಕೆಟ್ ತಪ್ಪಿಸಿತ್ತು. ಇದು ಪೀಪಿ ಮತ್ತು ಕಲ್ಲಡ್ಕ ಡಾನ್‌ಗಳಿಗೆ "ಆಪರೇಷನ್ ನಳಿನ್" ನಡೆಸಲು ಸ್ಫೂರ್ತಿಯಾಗಿತ್ತು.

ಆದರೆ ಸಕಾಲದಲ್ಲಿ ಸಿಡಿ ಮತ್ತು ನಳಿನ್‌ನ ಸರಸ-ಸಲ್ಲಾಪ ಬಹಿರಂಗ ಮಾಡಲು ವಿರೋಧಿ ಪಡೆಗೆ ಸಾಧ್ಯವಾಗಲಿಲ್ಲ. ಹೀಗಾಗಿ ನಳಿನ್‌ಗೇ ಅನಿವಾರ್ಯವಾಗಿ ಟಿಕೆಟ್ ಚೆಡ್ಡಿ ಹೈಕಮಾಂಡ್ ಕೊಡಬೇಕಾಗಿ ಬಂತು. ನಳಿನ್ ಪ್ರಚಾರಕ್ಕೆ ಬಿದ್ದಾಗ ಸಿಡಿಯೂ ಅಖಾಡಕ್ಕೆ ಬಂತು! ಅದನ್ನು ಕಾಂಗ್ರೆಸ್ ಕಿಂಗ್‌ಗಳು ಬಳಸಿಕೊಳ್ಳುವ ಉಸಾಬರಿಗೆ ಹೋಗಲಿಲ್ಲ. ಆದರೆ ಪಕ್ಷೇತರ ಅಭ್ಯರ್ಥಿ ಜೈನ್ 'ಈ ಸಿಡಿಯ ತನಿಖೆ ಆಗಬೇಕು. ಎಂಪಿಯಂಥ ದೊಡ್ಡ ಮನುಷ್ಯನ ಫೋನ್ ಕಾಲ್ ಲಿಸ್ಟ್ ಏರ್‌ಟೆಲ್ ಕಂಪನಿ ಯಾರಿಗೆ ಕೊಟ್ಟಿತು ಎಂಬುದು ಬಹಿರಂಗವಾಗಬೇಕು' ಎಂದು ಚುನಾವಣಾ ಆಯೋಗಕ್ಕೆ ದೂರು ಕೊಟ್ಟರು. ಆಗ ನಳಿನ್‌ನ ಅನೈತಿಕ ಅದಾಂತರ ಲೀಲೆಯ ಗುಸುಗುಸುಗೆ ಅಧಿಕೃತ ಸಿಂಧುತ್ವ ಸಿಕ್ಕಿಬಿಟ್ಟಿತು.

ಸಂಘ ಪರಿವಾರ ಬೆಚ್ಚಿಬಿತ್ತು, ಪರಿವಾರದ ದೊರೆಗೆ ತನ್ನ ಕಾಲಿನ ಮೇಲೆ ತಾನೇ ಕಲ್ಲು ಹಾಕಿಕೊಂಡಂಥ ಯಾತನೆ! ತನ್ನ ಕ್ಯಾಂಡಿಡೇಟ್ ನಳಿನ್‌ಗೆ ಈ ಸಿಡಿ ಹಗರಣದಿಂದ ಡ್ಯಾಮೇಜಾಗುತ್ತದೆಂದು ಆತಂಕ ಆರಂಭವಾಯ್ತು. ಸದ್ರಿ ಸಿಡಿ ಸುದ್ದಿ ಮಾಧ್ಯಮಗಳಲ್ಲಿ ಪ್ರಸಾರವಾಗದಂತೆ ತಡೆಯುವಂತೆ ಚುನಾವಣಾ ಅಧಿಕಾರಿಗೆ ಚೆಡ್ಡಿ ಪಡೆ ದುಂಬಾಲು ಬಿದ್ದಿತು. ಪ್ರಯೋಜನ ಆಗಲಿಲ್ಲ. ನಳಿನ್‌ನ ಪಂಚರಂಗಿ ಪುರಾಣ ದಶದಿಕ್ಕಿಗೆ ಅಪ್ಪಳಿಸಿಬಿಟ್ಟಿತು. ಆಗ ಶುರುವಾಯ್ತು ಫೇಸ್‌ಬುಕ್ ಪರಾಕ್ರಮ! ನಳಿನ್ ತಾನು ಸಂಭಾವಿತನೆಂದು ತೋರಿಸಿಕೊಳ್ಳಲು ಅಗ್ನಿಸಾಕ್ಷಿಯಾಗಿ ಕೈಹಿಡಿದ ಮಡದಿ ಮತ್ತು ಅಡ್ಯಾರಿನ ಪ್ರೋನಾಯಣದ ಗೆಳತಿಯನ್ನು ಫೇಸ್‌ಬುಕ್‌ಗೆ ಇಳಿಸಿದ.

ಆಕೆ ತನಗೆ ಮತ್ತು ಸಂಸದ ನಳಿನ್‌ಗೆ "ಅಂಥದ್ದೇನೂ" ಸಂಬಂಧ ಇಲ್ಲ. ಆತ ನಮ್ಮ ಮನೆಗೆ ಫೋನಾಯಿಸಿ ಎಲ್ಲರೊಂದಿಗೂ ಮಾತಾಡ್ತಿದ್ದರು... ನನ್ನೊಂದಿಗೂ ಸಹಜವಾಗಿ ಮಾತಾಡಿದ್ದಾರೆಂದು-"ಟ್ವೀಟ್" ಮಾಡಿದಳು; ಇದಕ್ಕೆ ಸಮಾನಾಂತರವಾಗಿ ಚೆಡ್ಡಿ ಪತ್ರಿಕೆ 'ಹೊಸ ದಿಗಂತ'ದ ಎಡ್‌ಮಿನಿಸ್ಟ್ರೇಟಿವ್ ಅಧಿಕಾರಿಯಾಗಿರುವ ಸಂಸದ ನಳಿನ್ ಮಡದಿ-ತನ್ನ ಗಂಡ ಎಂಥವನೆಂದು ತನಗೆ ಗೊತ್ತು. ಇದೇಲ ರಾಜಕೀಯ ಕಿತಾಪತಿ. ಕಳೆದ 13 ವರ್ಷದಿಂದ ನಳಿನ್ ಜೊತೆ ದಾಂಪತ್ಯ ನಡೆಸುತ್ತಿರುವ ತಾನು ನಳಿನ್ ಒಳ್ಳೆಯವನೆಂದು ಬಲ್ಲೆ. ಇದಕ್ಕೂ ಮೊದಲೂ ನಳಿನ್ ಮತ್ತು ತನ್ನ ಸಂಬಂಧ ಕೆಡಿಸುವಂಥ ಎಸ್‌ಎಂಎಸ್‌ಗಳೂ ತನಗೆ ಬಂದಿದೆ ಎಂದಾಕೆ ಫೇಸ್‌ಬುಕ್‌ನಲ್ಲಿ ಗೋಗರೆದರು.


ಏನೇ ಇರಲಿ; ಬೆಂಕಿ ಇಲ್ಲದೆ ಹೊಗೆ ಬರುತ್ತದಾ? ನಳಿನ್ "ಎಂಥವ"ನೆಂಬುದು ರಾಮನ ಪಾರ್ಟಿಯವರಿಗಷ್ಟೇ ಅಲ್ಲ, ಜನರಿಗೂ ಗೊತ್ತಾಗಬೇಕಾಗಿದೆ. ಆತನ ಮಡದಿಗೂ ಗಂಡ ಸಾಕ್ಷಾತ್ ಶ್ರೀರಾಮಚಂದ್ರನೇ ಎಂಬುದು "ಸಿಕ್ಷಿತ" ಆಗಬೇಡವ್ವಾ? ಈ ಫೋನ್ ಪ್ರೇಮಾಯಣದ ಅಗ್ನಿಪರೀಕ್ಷೆ ಜರೂರಾಗಿ ನಡೆಯಬೇಕಾಗಿದೆ. ನಿಷ್ಪಕ್ಷಪಾತ-ನಿಷ್ಠೂರ ತನಿಖೆಗೆ ಫೋನ್ ಕಾಲ್ ಸಿಡಿ ಒಳಪಡಿಸಲು ಚುನಾವಣಾ ಆಯೋಗ ಮುಂದಾಗಬೇಕಾಗಿದೆ. ಎಂಪಿಯ ಫೋನ್ ಕಾಲ್ ರಹಸ್ಯ ಜುಜುಬಿ ಮೂರನೇ ವ್ಯಕ್ತಿಯ ಕೈಗೆ ಹೇಗೆ ಬಂತು? ಇದರಲ್ಲಿ ಸಂಘ ಪರಿವಾರದ ಡಾನ್-ಡಾಕೂಗಳ ಆಟ ಏನು?

ಇದು ಅಸಲೀ ತನಿಖಾ ಅವಶ್ಯಕತೆ. ಅಲ್ವಾ?!

● ನಹುಷ

ಪ್ರಜ್ಞಾವಂತ ಹಿಂದೂಗಳೇ ಧಿಕ್ಕಾರ ಹೇಳಬೇಕಿದೆ

ಈ ಯುವಕನ ಹೆಸರು ಚೇತನ್ ಕುಮಾರ್ ಶೆಟ್ಟಿ. ಈತ ಕರ್ನಾಟಕ ಕೋಮು ಸೌಹಾರ್ದ ವೇದಿಕೆಯ ಂಗಳೂರು ಜಿಲ್ಲಾಧ್ಯಕ್ಷ ಸುರೇಶ್ ಭಟ್ ಬಾಕ್ರಬೈಲು ಪತ್ರಿಕಾಗೋಷ್ಠಿ ನಡೆಸುತ್ತಿದ್ದ ವೇಳೆ ಅವರ ಮೇಲೆ ಹಲ್ಲೆ ಮಾಡಿ ುಖಕ್ಕೆ ಸಗಣಿ ಎರಚಿದ ವ್ಯಕ್ತಿ. ಈತ ಮಂಗಳೂರಿನ ಬಜರಂಗದಳದ ಾರ್ಯಕರ್ತ. "ನಿನಗೆ ಯಾಕಪ್ಪಾ ಸುರೇಶ್ ಭಟ್ರ ಮೇಲೆ ದ್ವೇಷ?" ಎಂದು ೇಳಿದರೆ "ನನಗೆ ಅವರು ಯಾರು ಅಂತ ಗೊತ್ತಿಲ್ಲ. ಅವರ ಫೋಟೋ ೋರಿಸಿ ಅವರ ಮುಖಕ್ಕೆ ಸಗಣಿ ಹಾಕಿ ಬಾ ಎಂದು ನನ್ನನ್ನು ಕಳುಹಿಸಿದ್ದಾರೆ" ಂದು ಈತ ಹೇಳಿದ್ದಾನೆ. ಈತನ ಜೊತೆ ಇದ್ದ ಇನ್ನೊಬ್ಬ ಗೋರಕ್ಷಾ ದಳದವನು ಓಡಿ ಹೋಗಿದ್ದಾನೆ.




ಈ ಬಜರಂಗಿಗಳು ಸುರೇಶ್ ಭಟ್ರ ಮುಖಕ್ಕೆ ಸಗಣಿ ಎಸೆದು ವಿಕೃತ ಾನಂದ ಪಡುತ್ತಿದ್ದಾರೆ. ಆದರೆ ಚೇತನ್ ಕುಮಾರ್ ಶೆಟ್ಟಿ ಇವರ ಆಟಕ್ಕೆ ಲಿಪಶುವಾಗಿದ್ದಾನೆ. ಕೇವಲ ಹದಿನೈದು ದಿನಗಳಲ್ಲಿ ಉದ್ಯೋಗಕ್ಕಾಗಿ ವಿದೇಶಕ್ಕೆ ೋಗಬೇಕಾದ ಚೇತನ್ ಈಗ ಜೈಲು ಸೇರಿದ್ದಾನೆ.

ಇಂದಿನ ತನಕ ಯಾರೊಬ್ಬರಿಗೂ ಕೇಡು ಬಗೆಯದ, ಎಲ್ಲರಿಗೂ ಒಳ್ಳೆಯದನ್ನೇ ಹಾರೈಸಿದ 75 ವರ್ಷ ಪ್ರಾಯದ ೋಧನ್ನು ಹಿಂದೂ ಸುರೇಶ್ ಭಟ್ಟರಂತಹ ಹಿರಿಯರಿಗೆ ಸಗಣಿ ಎರಚಿದ, ವಿದೇಶಕ್ಕೆ ಹೋಗಿ ಬದುಕು ್ತಿಕೊಳ್ಳುವ ಖುಷಿಯಲ್ಲಿದ್ದ 25ರ ಹರೆಯದ ಹಿಂದೂ ಯುವಕ ಚೇತನ್ ಶೆಟ್ಟಿಯ ಬದುಕನ್ನು ಹಾಳು ಮಾಡಿ ಲಿಗೆ ಹೋಗುವಂತೆ ಮಾಡಿದ ಬಜರಂಗದಳಕ್ಕೆ ಪ್ರಜ್ಞಾವಂತ ಹಿಂದೂಗಳೇ ಮೊದಲು ಧಿಕ್ಕಾರ ಕೂಗಿ ಆಚೆ ಟ್ಟಿಗಬೇಕಿದೆ.

● ಶಶಿಧರ ಹೆಮ್ಮಾಡಿ. ಕುಂದಾಪುರ


ಝುವೇರಿಯವರ ಮನೆಗೆ ಪೊಲೀಸ್ ರಕ್ಷಣೆ


ತೊಗಾಡಿಯಾನ ಉಪದೇಶ ನೀಡುತ್ತಿರುವುದು

ತೊಗಾಡಿಯಾನ 'ಹೇಟ್ ಸ್ಪೀಚ್'

ಈ ನೆಲದ ಸಂವಿಧಾನಕ್ಕೆ ಮಾಡಿದ ಅಪಚಾರ

ಮೋದಿ ಪ್ರಧಾನಿಯಾದಂತೆ ಕನಸು ಬಿದ್ದಿದ್ದೇ ತಡ ನಿದ್ದೆಯಿಂದ ತಡಬಡಾಯಿಸಿ ಎದ್ದ ಪ್ರವೀಣ್ ತೊಗಾಡಿಯಾ ಬಾಯಿಗೆ ಬಂದಂತೆ ಒದರಾಡಲು ಶುರು ಮಾಡಿದ್ದಾನೆ. ಬಾಯ್ತೆರೆದರೆ ಅಲ್ಪಸಂಖ್ಯಾತರ ಮೇಲೆ ವಿಷಕಾರುವುದನ್ನೇ ತನ್ನ ಕಸುಬು ಮಾಡಿಕೊಂಡಿರುವ ವಿಶ್ವ ಹಿಂದೂ ಪರಿಷತ್ತಿನ ಈ ಆಸಾಮಿಯ ಕುಚೇಷ್ಟೆಗಳು ತೀರಾ ನೆಗ್ಲೆಕ್ಟ್ ಮಾಡುವಂತವಲ್ಲ, ಯಾಕೆಂದರೆ ಅವನ ಕಿತಾಪತಿಗಳೆಲ್ಲ ನೆಮ್ಮದಿಯ ಬದುಕಿಗೆ ಬೆಂಕಿ ಇಡುವಂತವೇ. ಜನರನ್ನು ಪ್ರಚೋದಿಸಿ, ದೊಂಬಿ ಎಬ್ಬಿಸಿ ಮರೆಯಲ್ಲಿ ಕುಳಿತು ಬಿಸಿ ಕಾಯಿಸಿಕೊಳ್ಳುವ ತೊಗಾಡಿಯಾ ಈ ಸಲ ನೇರವಾಗಿ ಮುಸ್ಲಿಮರ ಹಕ್ಕುಗಳ ಮೇಲೆಯೇ ಸವಾರಿ ಹೊರಟಿದ್ದಾನೆ. ಮುಸ್ಲಿಮರು ಇಂತಿಂಥ ಕಡೆ ಮಾತ್ರ ಆಸ್ತಿ ಖರೀದಿ ಮಾಡಬೇಕು; ಇಂತಿಂತಲ್ಲಿ ಮನೆ ಮಾಡುವ ಅರ್ಹತೆ ಅವರಿಗಿಲ್ಲ ಅಂತ ಪಕ್ಕಾ ಸರ್ವಾಧಿಕಾರಿಯಂತೆ ಫರ್ಮಾನು ಹೊರಡಿಸಿರುವ ತೊಗಾಡಿಯಾ, ಅಪ್ಪಿತಪ್ಪಿ ಆತನ 'ಸಂಘ ಸಹಪಾಠಿ' ಮೋದಿ ಪ್ರಧಾನಿಯಾದರೆ ದೇಶ ಅದೆಂತಹ ಕೋಮು ವಿಕೃತಿಗೆ ತುತ್ತಾಗಲಿದೆ ಎಂಬುದನ್ನು ಸೂಕ್ಷ್ಮವಾಗಿ ಬಿಡಿಸಿಟ್ಟಿದ್ದಾನೆ. ಅಲಿ ಅಸ್ಗರ್ ಝುವೇರಿ ಎಂಬ ಮುಸ್ಲಿಂ ವ್ಯಕ್ತಿ ಭವನಗರದ ಹಿಂದೂ ಪ್ರಾಬಲ್ಯವಿರುವ ಕೃಷ್ಣನಗರ್‌ನಲ್ಲಿ ಒಂದು ಬಂಗಲೆ ಖರೀದಿಸಿದ್ದೇ ತೊಗಾಡಿಯಾ ಬಾಯಿಂದ ಇಂತಹ ಕೋಮು ಕಮೆಂಟ್ ಬರಲು ಮೂಲ ಕಾರಣ. ಅಂದಹಾಗೆ, ಈ ಭವನಗರ್ ಇರೋದು 'ಇಲ್ಲಿಯ ಮುಸ್ಲಿಮರೂ ತನ್ನನ್ನು ಒಪ್ಪಿ ಮತ ಹಾಕಿದ್ದರಿಂದಲೇ ನಾನು ಹ್ಯಾಟ್ರಿಕ್ ಮುಖ್ಯಮಂತ್ರಿಯಾದೆ' ಅಂತ ಹೇಳಿಕೊಳ್ಳುವ ಮೋದಿಯ ಗುಜರಾತ್‌ನಲ್ಲೆ! ಮೋದಿ ನಾಡಲ್ಲಿ ಮುಸ್ಲಿಮರು ಅದೆಂತಹ ಅಭದ್ರತೆಯಲ್ಲಿ ಬದುಕುತ್ತಿದ್ದಾರೆನ್ನುವುದಕ್ಕೆ ಇದಕ್ಕಿಂತ ನಿದರ್ಶನ ಬೇಕೆ.

ಗುಜರಾತ್ ರಾಜ್ಯದ ಐದನೇ ಅತಿದೊಡ್ಡ ಶಹರು ಎನಿಸಿಕೊಂಡಿರುವ ಭವನಗರದ ಕೃಷ್ಣನಗರ್ ಬಡಾವಣೆಯಲ್ಲಿ ಹಿಂದೂಗಳೆ ಹೆಚ್ಚಿನ ಸಂಖ್ಯೆಯಲ್ಲಿರೋದು. ಇಡೀ ಬಡಾವಣೆಯಲ್ಲಿ ಮೂರು ಮನೆಗಳು ಮಾತ್ರ ಮುಸ್ಲಿಂ ಸಮುದಾಯಕ್ಕೆ ಸೇರಿದ್ದವು. ಈಗ್ಗೆ ಮೂರು ತಿಂಗಳ ಹಿಂದೆ ನಾಲ್ಕನೇ ಕುಟುಂಬವಾಗಿ ಬೊಹ್ರಾ ಮುಸ್ಲಿಂ ಪಂಗಡದ ಅಸ್ಗರ್ ಝುವೇರಿ ಎಂಟ್ರಿ ಕೊಟ್ಟದ್ದು ಅಲ್ಲಿನ ಕೋಮುವಾದಿಗಳಿಗೆ ರುಚಿಸಲಿಲ್ಲ, ಅದೇ ಈ ರಾದ್ಧಾಂತಕ್ಕೆ ಕಾರಣ. ಸ್ಥಳೀಯ ಕಾಂಗ್ರೆಸ್ ಮುಖಂಡ ಮತ್ತು ಭವನಗರ್ ಜಿಲ್ಲಾ ಭೂ ಅಭಿವೃದ್ಧಿ ಬ್ಯಾಂಕ್‌ನ ಅಧ್ಯಕ್ಷ ಕಿಶೋರ್ ಸಿನ್ಹ ಘೋಯೆಲ್ ಎಂಬಾತ ಈ ಬಡಾವಣೆಯಲ್ಲಿದ್ದ ತನ್ನ ಬಂಗಲೆಯೊಂದನ್ನು ಮಾರಾಟಕ್ಕಿಟ್ಟಿದ್ದ. ಅದಕ್ಕಾಗಲೆ 'ಅಪಶಕುನದ ಮನೆ' ಎಂಬ ಲೇಬಲ್ ಅಂಟಿಸಿಬಿಟ್ಟಿದ್ದರಿಂದ ಯಾರೂ ಅದನ್ನು ಕೊಳ್ಳಲು ಮುಂದೆ ಬರಲಿಲ್ಲ, ಅತಿ ಕಡಿಮೆ ಬೆಲೆಗೆ ಅದನ್ನು ಮಾರಾಟ ಮಾಡ್ತೀನಿ ಅಂತ ಜಾಹಿರಾತು ಕೊಟ್ಟರೂ ಆ ಕಾಲೊನಿಯ ಯಾರೊಬ್ಬರೂ ಅದನ್ನು ಖರೀದಿ ಮಾಡಲಿಲ್ಲ. ಅದೇ ಸಮಯಕ್ಕೆ ಹಲೂರಿಯಾ ಚೌಕ್‌ನಲ್ಲಿರುವ ಝುವೇರಿಗೆ ಈ ಆಫರ್ ತಲುಪಿತ್ತು. 657 ಚದರ ಮೀಟರ್ ಉದ್ದಗಲಕ್ಕೆ ಚಾಚಿಕೊಂಡಿದ್ದ ಬಂಗಲೆ ಝುವೇರಿಗೆ ಇಷ್ಟವಾದದ್ದೆ ತಡ ಆತ ಖರೀದಿಸಲು ಮನಸ್ಸು ಮಾಡಿದ. ತನ್ನ ಬಂಗಲೆಯನ್ನು ಝುವೇರಿಗೆ ಮಾರಾಟ ಮಾಡುತ್ತಿರುವುದಾಗಿ ಸಿನ್ಹ ಪತ್ರಿಕೆಗಳಲ್ಲಿ ಪ್ರಕಟಣೆಯನ್ನು ಹೊರಡಿಸಿದಾಗಲು ಯಾರೂ ಅಪಸ್ವರ ಎತ್ತಲಿಲ್ಲ, ಹಾಗಾಗಿ 2014ರ ಜನವರಿ 10 ರಂದು ಬಂಗಲೆಯನ್ನು ಝುವೇರಿ ಹೆಸರಿಗೆ ರಿಜಿಸ್ಟರ್ ಮಾಡಿಕೊಟ್ಟಿದ್ದ

ಅಸಲಿ ಅಧ್ಯಾಯ ಶುರುವಾದದ್ದೇ ಅಲ್ಲಿಂದ. ಮುಸ್ಲಿಂ ಕುಟುಂಬ ಬಂಗಲೆ ಖರೀದಿಸಿದೆ ಎನ್ನುವುದು ತಿಳಿಯುತ್ತಿದ್ದಂತೆ ಕೆಲ ಕೋಮು ಘಾತುಕರು ಝುವೇರಿಯ ಬಳಿ ಬಂದು 'ಹಿಂದೂಗಳೆ ವಾಸಿಸುತ್ತಿರುವ ಬಡಾವಣೆಗೆ ನೀವು ಮುಸ್ಲಿಮರು ಬಂದರೆ ನೀವು ತಿನ್ನುವ ಆಹಾರದಿಂದ ನಮಗೆಲ್ಲ ಮೈಲಿಗೆಯಾಗುತ್ತದೆ, ಸುತ್ತಲಿರುವ ಧಾರ್ಮಿಕ ಮಂದಿರಗಳೂ ಮಲಿನವಾಗಿಬಿಡುತ್ತವೆ. ಬಂಗಲೆ ಆಸೆಯನ್ನು ಕೈ ಬಿಡು' ಎಂದು ಆತನಿಗೆ ಧಮಕಿ ಹಾಕಿದರು. ಆದರೆ ಅಷ್ಟರಲ್ಲಾಗಲೆ ಖರೀದಿಯ ವ್ಯವಹಾರವೆಲ್ಲ ಮುಗಿದುಹೋಗಿತ್ತು, ಹಾಗಾಗಿ ತನ್ನ ಕುಟುಂಬ ಬಂಗಲೆಗೆ ಶಿಫ್ಟ್ ಆಗುವುದು ಶತಃಸಿದ್ಧ ಅಂತ ಝುವೇರಿಯೂ ಪ್ರತ್ಯುತ್ತರ ನೀಡಿದ್ದ, ಇದು ಕೋಮು ಘಾತುಕರ ಮೈ ಉರಿಸಿತ್ತು, ಝುವೇರಿ ಕುಟುಂಬ ತಾನು ಖರೀದಿಸಿದ ಬಂಗಲೆಯಲ್ಲಿ ವಾಸ್ತವ್ಯ ಹೂಡುವುದನ್ನು ತಡೆಯುವುದಕ್ಕೋಸ್ಕರ ಆತನ ಅಂಗಡಿ, ಮನೆ ಮುಂದೆ ದಾಂಧಲೆ ನಡೆಸಿದ್ದಲ್ಲದೆ ಆತ ನೂತನವಾಗಿ ಖರೀದಿಸಿದ್ದ ಬಂಗಲೆಗೆ 'ಹಿಂದೂ ಆರೋಗ್ಯಧಾಮ' ಎಂಬ ಬೋರ್ಡು ನೇತುಹಾಕಿ ಅತಿಕ್ರಮಣ ಪ್ರವೇಶ ಮಾಡಿರುತ್ತಾರೆ. ಪ್ರತಿದಿನ ಸಂಜೆ ನೂರಾರು ಸಂಖ್ಯೆಯಲ್ಲಿ ಆ ಬಂಗಲೆಯ ಮುಂದೆ ಜಮಾಯಿಸಿ 'ರಾಮ್ ದರ್ಬಾರ್' ಹೆಸರಿನಲ್ಲಿ ಹನುಮಾನ್ ಚಾಲೀಸ್ ಮತ್ತಿತರೆ ಭಜನೆ ಹಾಡುತ್ತಾ ಝುವೇರಿ ಕುಟುಂಬ ಬಂಗಲೆಗೆ ಬರದಂತೆ ಬೆದರಿಕೆಯ ವಾತಾವರಣ ಸೃಷ್ಟಿಸುತ್ತಿದ್ದಾರೆ.

ಅಂತಹದ್ದೊಂದು 'ರಾಮ್ ದರ್ಬಾರ್'ಗೆ ಬಂದಿದ್ದ ತೊಗಾಡಿಯಾ ಕನಿಷ್ಠ ಪ್ರಜ್ಞೆಯೂ ಇಲ್ಲದಂತೆ ಮುಸ್ಲಿಮರ ಮೇಲೆ ಕಿಡಿಕಾರಿಕೊಂಡಿದ್ದಾನೆ. ಅಲ್ಲದೆ ಮುಸ್ಲಿಮ್ ಸ್ವತ್ತುಗಳನ್ನು ಹೇಗೆ ಕಬ್ಜಾ ಮಾಡಬೇಕೆಂಬ ಕ್ರಿಮಿನಲ್ ಪಾಠವನ್ನೂ 'ದರ್ಬಾರ್' ಭಕ್ತರಿಗೆ ಬೋಧಿಸಿದ್ದಾನೆ. ಪ್ರದೇಶದಲ್ಲಿ ಗಲಭೆ ಭುಗಿಲೇಳುವಂತೆ ಮಾಡಿ 'ಡಿಸ್ಟರ್ಬ್ಡ್ ಏರಿಯಾ ಆಕ್ಟ್' ಜಾರಿಯಾಗುವಂತೆ ನೋಡಿಕೊಂಡು ಮುಸ್ಲಿಮರನ್ನು ಅಲ್ಲಿಂದ ಓಡಿಸುವುದು ತೊಗಾಡಿಯಾನ ಮಾಸ್ಟರ್ ಪ್ಲಾನ್. ಹಲವಾರು ಪ್ರದೇಶಗಳಲ್ಲಿ ಇದೇ ಉಪಾಯ ಹೂಡಿ ತಾನು ಹಲವು ವರ್ಷಗಳಿಂದ ಮುಸ್ಲಿಂ ಸ್ವತ್ತುಗಳನ್ನು ವಶಪಡಿಸಿಕೊಳ್ಳುತ್ತಲೇ ಬಂದಿರುವುದಾಗಿ ತೊಗಾಡಿಯಾ ಓಪನ್ನಾಗಿ ಹೇಳಿಕೊಂಡಿದ್ದಾನೆ. ಚಿಡ್ಡಿ ಬುದ್ಧಿಯ ಆತನ ಮನಸ್ಸಲ್ಲಿ ಕೋಮುವಾದ ಅದೆಷ್ಟು ಕೆಟ್ಟದಾಗಿ ಮಡುಗಟ್ಟಿದೆ ಹಾಗೂ ಅವನೆಂತಹ ಅಪಾಯಕಾರಿ ಧೂಮಕೇತು ಎಂಬುದಕ್ಕೆ ಅವನ ಮಾತುಗಳೆ ಸಾಕ್ಷಿ. ಅಂದು ವೇದಿಕೆ ಮೇಲೆ ಮಾಡಿದ ಆತನ ಭಾಷಣದ ಯಥಾವತ್ ತರ್ಜುಮೆ ಇಲ್ಲಿದೆ...

'ಭಾರತದ ಬಹುತೇಕ ಹಳ್ಳಿಗಳು ಮತ್ತು ಪಟ್ಟಣಗಳಲ್ಲಿ ಆಗುತ್ತಿರುವುದು ಇದೇ, ಮುಸ್ಲಿಮರು ಇಂಥಾ ಕೆಲಸವನ್ನು ಬಹಳ ದಿನಗಳಿಂದ ಮಾಡಿಕೊಂಡು ಬರುತ್ತಿದ್ದಾರೆ,

ಮೊದಲು ಹೊಸ ಬಡಾವಣೆಯಲ್ಲಿ ಒಂದು ಬಂಗಲೆಯನ್ನು ಅವರು ಹೆಚ್ಚು ಬೆಲೆಗೆ ಖರೀದಿ ಮಾಡಿಕೊಳ್ತಾರೆ, ಆಮೇಲೆ ಅಕ್ಕಪಕ್ಕದ ಹಿಂದೂಗಳ ಮನೆಗಳನ್ನು ಅರ್ಧಕ್ಕರ್ಧದ ಬೆಲೆಗೆ ಖರೀದಿಸಿಬಿಡುತ್ತಾರೆ. ಇದು ಅವರ ಕಾರ್ಯತಂತ್ರದ ಒಂದು ಭಾಗ.

ಇದನ್ನ ಹೇಗೆ ತಡೀಬಹುದು? ಇದನ್ನ ತಡೆಯೋದಕ್ಕೆ ಎರಡು ದಾರಿಯಿವೆ.

ಮೊದಲನೆಯದು, ಅಹಮದಾಬಾದ್ ಮತ್ತು ಇತರೆಡೆ ಜಾರಿಯಲ್ಲಿರೋ ಡಿಸ್ಟರ್ಬ್ಡ್ ಏರಿಯಾ ಆಕ್ಟ್ ಅನ್ನು ಸರ್ಕಾರ ಇಲ್ಲಿಯೂ ಜಾರಿಗೊಳಿಸುವಂತೆ ಮಾಡೋದು. ಕಾಂಗ್ರೆಸ್ ಸರ್ಕಾರದ ಅಧಿಕಾರದಲ್ಲಿದ್ದಾಗ ಇದಕ್ಕೋಸ್ಕರ ಚಳವಳಿ ಮಾಡಿದ್ವಿ, ಬಿಜೆಪಿ ಸರ್ಕಾರ ಬರುತ್ತಿದ್ದಂತೆಯೇ ಜಾರಿಗೆ ಬಂತು. ಈ ಕಾನೂನು ಜಾರಿಗೆ ಬಂತು ಅಂದ್ರೆ ಹಿಂದೂಗಳ ಪ್ರಾಬಲ್ಯವಿರೋ ಏರಿಯಾದಲ್ಲಿ ಮುಸ್ಲಿಮರು ಆಸ್ತಿ ಖರೀದಿಸೋ ಹಾಗೇ ಇಲ್ಲ, ಪವರ್ ಆಫ್ ಅಟಾರ್ನಿ ಮೂಲಕ ಕೂಡಾ ಖರೀದಿಸಲು ಆಗದು. ಇದು ಜಾರಿಗೆ ಬರಬೇಕು ಅಂದ್ರೆ ಸರ್ಕಾರದ ಮೇಲೆ ಒತ್ತಡ ಹಾಕ ನಾವೇ ಮಾಡಿಸ್ಬೇಕು.

ಎರಡನೇ ದಾರಿ ಅಂದ್ರೆ, ಲಾಯರ್‌ರನ್ನು ಹಿಡಿಯೋದು, ಬಲಪೂರ್ವಕವಾಗಿ ಅತಿಕ್ರಮಣ ಮಾಡಿ ಆ ಬಿಲ್ಡಿಂಗ್ ಅನ್ನು ವಶಕ್ಕೆ ಪಡೆಯೋದು ಮತ್ತೆ ಬಜರಂಗದಳದ ಬೋರ್ಡನ್ನು ಅದಕ್ಕೆ ನೇತು ಹಾಕೋದು. ಆಮೇಲೆ ಕೋರ್ಟ್‌ನಲ್ಲಿ ಹೋರಾಡೋದು (ಜನರಿಂದ ಚಪ್ಪಾಳೆ). ಯಾರದೋ ಆಸ್ತಿಯನ್ನು ಕಾನೂನು ಬಾಹಿರವಾಗಿ ಅತಿಕ್ರಮಣ ಮಾಡಿದ್ದಕ್ಕೆ ಯಾರನ್ನೂ ನೇಣಿಗೇನು ಹಾಕೋಲ್ಲ,

ಒಂದು ವೇಳೆ ಕೇಸ್ ದಾಖಲಾದ್ರೆ, ಹೋರಾಡೋಣ. ರಾಜೀವ್ ಗಾಂಧಿ ಹಂತಕರನ್ನೇ ನೇಣಿಗೆ ಹಾಕಲಿಕ್ಕೆ ಆಗ್ಲಿಲ್ಲ ಅಂದ್ಮೇಲೆ ನಮ್ಮನ್ನ ನೇಣಿಗೆ ಹಾಕ್ತಾರಾ? (ಮತ್ತೊಮ್ಮೆ ಚಪ್ಪಾಳೆ)

ಅಲ್ಲಿ ಬಜರಂಗದಳದ ಕಚೇರಿ ಆರಂಭಿಸಿ. ಅವರು ಸ್ವಾಧೀನಪಡಿಸಿಕೊಳ್ಳಲು ಬಂದಾಗ ಅವರನ್ನ ನೋಡಿಕೊಳ್ಳೋಣ. (ಚಪ್ಪಾಳೆ)

ಇದು ನನ್ನ ನೇರ, ಕಾರ್ಯಾಚರಣೆಯ ಮಾತು.

ಸರ್ಕಾರವೂ ಕಾನೂನನ್ನ ಬದಲಾಯಿಸುವಂತೆ ನಾವು ಪ್ರಯತ್ನಿಸಬೇಕು. ಅದಕ್ಕೋಸ್ಕರ ನಾವೆಲ್ಲ ಒಟ್ಟಿಗೆ ಸೇರಿ ಲಿಖಿತ ರೂಪದಲ್ಲಿ ಬರೆದು ಪತ್ರಿಕಾಗೋಷ್ಠಿಯಲ್ಲಿ ನೇರವಾಗಿ ಸರ್ಕಾರಕ್ಕೆ ಬೇಡಿಕೆ ಸಲ್ಲಿಸಬೇಕು. ಸರ್ಕಾರ ಆ ಕಾನೂನು ಜಾರಿಗೆ ತಂದು ಹಿಂದೂ ಪ್ರಾಬಲ್ಯವಿರುವ ವಸತಿ ಪ್ರದೇಶಗಳಲ್ಲಿ ಮುಸ್ಲಿಮರು ಆಸ್ತಿ ಖರೀದಿಸದಂತೆ ಮಾಡಬೇಕು. ಇಂತಹದ್ದೊಂದು ಕಾನೂನು ಈಗಾಗಲೆ ಬರೋಡಾ ಮತ್ತು ಅಹಮದಾಬಾದ್‌ಗಳಲ್ಲಿ ಜಾರಿಯಲ್ಲಿದೆ. ಅಲ್ಲಿ ಅದು ಜಾರಿಗೆ ಬರಲು ನಾನೇ ಹೋರಾಟ ನಡೆಸಿದ್ದೆ. ಗುಜರಾತ್‌ನಲ್ಲಿ ಅದು ಕಾನೂನಾಗಿ ಬರುವಲ್ಲಿ ನಾನೇ ಪ್ರಮುಖ ಪಾತ್ರಧಾರಿ. ಅಂದ್ರೆ, 1990 ಅಥವಾ ಆಸುಪಾಸಿನಲ್ಲಿ ನಾನು ಗುಜರಾತ್‌ನಲ್ಲಿದ್ದಾಗ ಆಗಿದ್ದು.

ಆ ಕಾನೂನು ಭವನಗರದಲ್ಲೂ ಜಾರಿಯಾಗ್ಬೇಕು. ಇದಕ್ಕೋಸ್ಕರ ಒಂದು ಲಿಖಿತ ನಿವೇದನೆಯೊಂದನ್ನು ತಯಾರಿಸಿ ಸರ್ಕಾರಕ್ಕೆ ನಾವೆಲ್ಲ ಸಲ್ಲಿಸಬೇಕಿದೆ.

ಹೇಗೂ ಎಲೆಕ್ಷನ್‌ಗಳು ನಡೀತಿದಾವೆ. ಯಾವತ್ತೂ ಮೂಗನ್ನು ಬಿಗಿಯಾಗಿ ಹಿಡಿದ್ರೇನೆ ಬಾಯಿ ತೆರೆಯೋದು. ನಮ್ಮ ಮಗನಿಗೆ ಔಷಧಿ ಹಾಕ್ಬೇಕು ಅಂದ್ರೆ ಅವನ ಮೂಗನ್ನು ಮುಚ್ಚಿ ಹಿಡಿಲೇಬೇಕು. ನಮ್ಮ ಮಕ್ಕಳಿಗೆ ನಾವಿದನ್ನು ಮಾಡ್ತೀವಿ ಅಂದ್ಮೇಲೆ ಸರ್ಕಾರದ ಮೇಲೂ ಪ್ರಯೋಗಿಸ್ಲಿಕ್ಕೆ ನಮಗ್ಯಾವ ಮುಜುಗರ ಆಗಬೇಕಿಲ್ಲ, ಇಂಥಾ ವಿಷಯಗಳಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್‌ಗಳ ನಡುವೆ ವ್ಯತ್ಯಾಸವೇನೂ ಇಲ್ಲ,

ಹಿಂದೂಗಳ ರಕ್ಷಣೆ ಆಗ್ಬೇಕು ಅಂದ್ರೆ ಬಿಜೆಪಿ ಮತ್ತು ಕಾಂಗ್ರೆಸ್‌ಗಳ ಮೂಗು ಬಿಗಿ ಹಿಡಿಯಲೇಬೇಕು. ಇಲ್ಲಿ ಹಿಂದೂಗಳೆ ರಕ್ಷಣೆ ಮುಖ್ಯವೇ ಹೊರತು, ಪೊಲಿಟಿಕಲ್ ಪಾರ್ಟಿ ಯಾವ್ದೂ ಅನ್ನೋದಲ್ಲ,

ಬಿಜೆಪಿಯಲ್ಲಿ ಇರೋರು ಇದನ್ನು ಮಾಡೋದ್ರಲ್ಲಿ ಯಾವ್ದೇ ಮುಜುಗರ ಇಲ್ಲ, ಮತ್ತು ಕಾಂಗ್ರೆಸ್‌ನಲ್ಲಿರೋರು ಈ ವಿಚಾರದಲ್ಲಿ ರಾಜಕೀಯ ಮಾಡಬಾರ್ದು. ಬಿಜೆಪಿ ಉತ್ತಮವ್ರೋ, ಕಾಂಗ್ರೆಸ್ ಉತ್ತಮವ್ರೋ ಅನ್ನೋದು ನಮಗೆ ಬೇಕಾಗಿಲ್ಲ,

ಬನ್ನಿ ಎಲ್ಲರೂ ಒಟ್ಟಾಗಿ ಸೇರಿ ಒತ್ತಡ ತಂದು ಈ ಕಾನೂನು ಜಾರಿಯಾಗುವಂತೆ ಮಾಡೋಣ. ನಾಳೆ ಅಥವಾ ನಾಡಿದ್ದು ವಕೀಲರನ್ನು ಭೇಟಿ ಮಾಡಿ, ಬೇಗ ಮುರೀರಿ ಮತ್ತು ಬಜರಂಗದಳದ ಒಂದು ಬೋರ್ಡ್ ನೇತುಹಾಕಿ.

ಇಂತದನ್ನು ನಾನು ಇದಕ್ಕೂ ಮೊದ್ಲು ಹಲವಾರು ಬಾರಿ ಮಾಡಿದೀನಿ. ಬಜರಂಗ ದಳದ ಬೋರ್ಡ್ ಹಾಕುವ ಮೂಲಕ ಹಲವಾರು ಬಿಲ್ಡಿಂಗ್‌ಗಳ ಮೇಲೆ ನಾನು ಸ್ವಾಧೀನ ಹೊಂದಿದ್ದೇನೆ. ಆ ಮುಸ್ಲಿಂ ಅವನ ಹಣ ಮತ್ತು ಬಿಲ್ಡಿಂಗ್ ಎರಡನ್ನೂ ಕಳೆದ್ಕೊಂಡ (ಚಪ್ಪಾಳೆ). ಕೋರ್ಟ್‌ನಲ್ಲಿ ಕೇಸ್ ಈಗಲೂ ನಡೀತಾನೆ ಇದೆ.

ಭಾಯಿ-ಬೆಹನ್, ಆದ್ರೆ ನಾನಿಷ್ಟೊತ್ತು ಹೇಳಿದ್ದನ್ನೆಲ್ಲ ಸಾರ್ವಜನಿಕವಾಗಿ ಹೇಳ್ಕೊಳ್ಕೊಕ್ ಹೋಗ್ಬೇಡಿ, ಆಯ್ತಾ? (ನಗು)

ಆ ಮನೆ ಮೇಲೆ ಘೇರಾವ್ ಮಾಡಿ, ಘೇರಾವ್ ಮಾಡೋವಾಗ 500-1,000 ಜನ ಇರ್ಬೇಕು. ನೋಡಿ; ಮುಸ್ಲಿಮರು ಕಾಶ್ಮೀರದಲ್ಲಿ ಕಾನೂನನ್ನು ಕೈಗೆ ತಗೊಂಡು ಆರ್ಮಿಯನ್ನೇ ಹೆದರ್ಸಿದಾರೆ. ಹಾಗಾಗಿ, ನಾವು ಹೆಚ್ಚಿನ ಸಂಖ್ಯೆಯಲ್ಲಿರೋ ಕಡೆ ಕಾನೂನನ್ನು ಕೈಗೆ ತೆಗೆದುಕೊಳ್ಳೊ ಧೈರ್ಯ ಮಾಡಿ ಅವರನ್ನ ಹೆದರ್ಸಬೇಕು (ಚಪ್ಪಾಳೆ).

ಆತನ (ಝುವೇರಿಯನ್ನು ಕುರಿತು) ಅಂಗಡಿಗೆ ಘೇರಾವ್ ಮಾಡಿ ಅವನನ್ನು ಬೆದರಿಸ್ಬೇಕು. ನಾವು ಓಡಿಹೋಗ್ಬಾರ್ದು ಬದಲಾಗಿ ಅವನ ಅಂಗಡಿಯನ್ನು ಬಂದ್ ಮಾಡ್ಬೇಕು. ಇದೊಂಥರಾ ಆಕ್ರಮಣಕಾರಿ ಯುದ್ಧನೀತಿ.

ನೀವು ಅವನ ಅಂಗಡಿ ಮೇಲೆ ಘೇರಾವ್ ಮಾಡಲು ಹೋಗಿ ಆಮೇಲೆ ಅಲ್ಲಿಗೆ ಬಜರಂಗದಳದ್ದೊ ವಿಶ್ವ ಹಿಂದೂ ಪರಿಷದ್‌ದೋ ಬೋರ್ಡ್ ನೇತುಹಾಕ್ಬಿಡಿ.

ಅರ್ಥ ಆಯ್ತಾ?

ಆಮೇಲೆ ಪತ್ರಿಕಾಗೋಷ್ಠಿ ಕರೆದು 48 ಗಂಟೆಗಳಲ್ಲಿ ಬಂಗಲೆಯನ್ನು ವಾಪಾಸ್ ಮಾಡ್ಲಿಲ್ಲ ಅಂದ್ರೆ ನಾವು ಸಾವಿರಾರು ಜನ ಅವನ ಅಂಗಡಿಗೆ ಘೇರಾವ್ ಮಾಡ್ತೀವಿ ಅಂತ ಹೇಳಿ.

ಹೋಗ್ತಾ ಕಲ್ಲುಗಳನ್ನೂ ತೆಗೆದುಕೊಂಡು ಹೋಗಿ. ಟೈರ್‌ಗಳನ್ನ ಸುಡಿ. ಒಟ್ನಲ್ಲಿ ಗಲಭೆಯ ವಾತಾವರಣ ಸೃಷ್ಟಿ ಮಾಡಿ (ನಗು). 'ಇದು ಎಲೆಕ್ಷನ್ ಟೈಮು, ದಯವಿಟ್ಟು ಇದ್ನೆಲ್ಲಾ ಈಗ ಮಾಡ್ಬೇಡಿ' ಅಂತ ಅವರು ನಿಮ್ಮ ಕಾಲಿಗೆ ಬೀಳ್ತಾರೆ.

ಆಗ ಅವರಿಗೆ ಹೇಳಿ: 'ಹಾಗಾದ್ರೆ ನಮ್ಮ ಬಿಲ್ಡಿಂಗ್ ಅನ್ನು ಖಾಲಿ ಮಾಡ್ಸಿ, ಅವನನ್ನ ಓಡ್ಸಿ.'

ಪೊಲೀಸ್ ಕಮೀಷನರ್ ಕೂಡಾ ಭಾಗಿಯಾಗ್ಲೇಬೇಕು. ಅರ್ಥ ಮಾಡ್ಕೊಂಡ್ರಾ? ನಾಳೆ ಅಥವಾ ನಾಡಿದ್ದು ಒಂದು ಪತ್ರಿಕಾಗೋಷ್ಠಿ ನಡ್ಸಿ, ಆ ಬೋಹ್ರಾನ ಅಂಗಡಿಗೆ ಘೇರಾವ್ ಮಾಡ್ತೀವಿ ಅಂತ ಅನೌನ್ಸ್ ಮಾಡಿ. ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ. ಹೆಂಗಸರು ಮುಂದಿರ್ಬೇಕು. ಬೆಹನೋ (ಸೋದರಿಯರೆ) ಕೇಳಿ; ನಾವು ಓಡಿ ಹೋಗಂಗಿಲ್ಲ, ಅವರನ್ನು ಓಡಿಸ್ಬೇಕು. ಅದೇ ನಮ್ಮ ಗುರಿ, ಅವರ ಅಂಗಡಿಗಳಿಗೆ ಹೋಗಿ ಅವರನ್ನ ಅಲ್ಲಿಂದ ಓಡ್ಸಿ ಅಂತ.

ಅವರು ಹೊರಗಡೆ ಬಂದಾಗ ಅವರ ಮೇಲೆ ಉಗಿಯುವ ಕಾರ್ಯಕ್ರಮವೂ ಇರಲಿ. ಅವರು ಹೊರಗೆ ಬರ್ಲೇಬೇಕು, ಅಲ್ವಾ? ವ್ಯಕ್ತಿ ಮೇಲೆ ಉಗಿದಿದ್ದಕ್ಕೆ ಯಾವ ಶಿಕ್ಷೆನೂ ಇಲ್ಲ (ನಗು). ಜನರ ಮೇಲೆ ಟೊಮೆಟೊ ಎಸೆದುದಕ್ಕೂ ಯಾವ ಶಿಕ್ಷೆ ಇಲ್ಲ, ಹತ್ತರಿಂದ ಹದಿನೈದು ಯುವಕರು ಎಚ್ಚರಿಕೆಯಿಂದ ಗಮನಿಸ್ತಾ ಇರ್ಬೇಕು. ಅವರು ಹೊರಗೆ ಬರ್ತಿದ್ದಾಗನೆ ಅವರ ಮೇಲೆ ಟೊಮೆಟೊ ಎಸೀಬೇಕು.

ಇಂಥಾ ಕೆಲ್ಸಾನ ನಾನು ಹಲವಾರು ವರ್ಷಗಳಿಂದ ಮಾಡ್ಕೊಂಡ್ ಬಂದಿದೀನಿ. ಇದನ್ನ ಕೆಲವರು ಒಪ್ಲಿಲ್ಲ ಅಂದ್ರೂನು ಇದೇ ರೀತಿ ಮುಂದುವರೀರಿ ಮತ್ತು ಬೇರೆಬೇರೆ ಗುಂಪುಗಳಾಗಿ ಹೋರಾಡಿ. ಒಂದೊ, ಬಿಲ್ಡಿಂಗ್ ಖಾಲಿಯಾಗ್ಬೇಕು ಅಥವಾ ಸ್ವಾಧೀನ ನಮ್ದಾಗ್ಬೇಕು. ಅವನ ಹಣ ಹೋದ್ರೆ ಹೋಗ್ಲಿ ಬಿಡಿ. ಈ ಸಮಯದಲ್ಲಿ ಆ ಬಿಲ್ಡಿಂಗ್ ಮಾರಾಟ ಮಾಡಿದ ಹಿಂದೂ ಜೊತೆ ಹೋರಾಡೋದ್ರಲ್ಲಿ ಅರ್ಥ ಇಲ್ಲ, ಅವನೊಬ್ಬ ಪಾಪದ ಜೀವಿ, ಮಾರಿದ ಹೋದ.


ಇವೇ ಕೆಲವು ಮಾತುಗಳನ್ನ ನಾನು ಹೇಳ್ಬೇಕಿತ್ತು. ನಾವು ಅತಿಕ್ರಮಿಸಿಕೊಂಡಿರೊ ಅಷ್ಟೂ ದಿನ ಅವರು ಕೋರ್ಟ್‌ನಲ್ಲಿ ಹೋರಾಡ್ಕೊಳ್ಳಿ ಬಿಡಿ. ಮತ್ತೆ ಅಕ್ಕಪಕ್ಕದವರು ಇಲ್ಲಿ ಕಳೆದ ಆರು ತಿಂಗಳಿಂದಲೇ ಬಜರಂಗದಳದ ಆಫೀಸ್ ನಡೀತಿತ್ತು ಅಂತ್ಲೇ ಹೇಳಿಕೆ ಕೊಡ್ಬೇಕು. ಅರ್ಥ ಆಯ್ತಾ ಹಾಗಿದ್ರೆ, ಬಗೆಹರೀತು?.........

ಅಲ್ಲಿಗೆ ತೊಗಾಡಿಯಾ ಮಾತು ಮುಗಿದಿತ್ತಾದರು ಆ... ಹೊತ್ತಿಸಿದ ಕಿಡಿ ಜ್ವಾಲೆಯಾಗಿ ಕೆನ್ನಾಲಿಗೆ ಚಾಚಲು ಅವಕಾಶವೊಂದನ್ನು ಕಾದು ಕುಳಿತಿದೆ. ಮತ್ತೊಂದು ಧರ್ಮದ ಧರ್ಮೀಯರ ಮೇಲೆ ದಾಳಿ ಮಾಡುವುದೇ ಹಿಂದೂ... ರಕ್ಷಣೆ ಹೇಗಾದೀತೆಂಬ ಪ್ರಶ್ನೆಗೆ ಬಹುಶಃ ತೊಗಾಡಿಯಾ... ಬಳಿಯೂ ಉತ್ತರವಿದ್ದಂತಿಲ್ಲ, ಯಾಕೆಂದರೆ ಆವರಿಗೆ ಪ್ರಶ್ನೆಗಳೆಂದರೇನೆ ಅಲರ್ಜಿ!

ಈ ನೆಲಕ್ಕೆ ತನ್ನದೇ ಆದ ಸಂವಿಧಾನ, ಕಾನೂನುಗಳಿ... ಅವುಗಳನ್ನು ಧಿಕ್ಕರಿಸುವುದು ದೇಶದ್ರೋಹದ ಕೆಲ... ವಾಗುತ್ತದೆ. ಜಾತ್ಯತೀತ, ಧರ್ಮಾತೀತ ನೆಲೆಗಟ್ಟಿ... ಇಂಡಿಯಾದಲ್ಲಿ ಮುಸ್ಲಿಮರನ್ನು ಮುಖ್ಯವಾಹಿನಿಯಿಂ... ಪ್ರತ್ಯೇಕಿಸಿ ದ್ವೇಷಕಾರುವ ತೊಗಾಡಿಯಾ ಭಾಷಣವು ಇದಕ್ಕೇನು ಹೊರತಲ್ಲ, ಈ ದೇಶದ ಸಂವಿಧಾನಕ್ಕೆ ಎಸಗಿ... ಅಪಚಾರ ಅದು. ಆದರೂ ಆತ ಸೇಫ್! ಇದ... ಇಂಡಿಯಾದಲ್ಲಿ ಮಾತ್ರ ಸಾಧ್ಯ...


● ಗಿರೀಶ್ ತಾಳಿಕಟ್ಟೆ

ಕೌನ್ಸಿಲರ್ ಲಲಿತಾ ಕದ್ದದ್ದು ತುಂಡು ಬಟ್ಟೆ, ಬಿಜೆಪಿ ಮಾನ ಮೂರಾಬಟ್ಟೆ


ನಗರ ಬಿಜೆಪಿ ಕೌನ್ಸಿಲರ್ ಲಲಿತಾ

ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬರುವುದಿಲ್ಲ ಹಾಗಂತ ಆನೆ ಕದ್ದು ಅರಗಿಸಿಕೊಂಡವರ ಮಧ್ಯೆ ಅಡಿಕೆಯನ್ನಾದರೂ ಕದಿಯಬಾರದೆಂದರೆ ಹೇಗೆ? ಚೂಡಿದಾರ್ ಟಾಪನ್ನೋ, ಕರವಸ್ತ್ರವನ್ನೋ ಕದ್ದ ಮಾತ್ರಕ್ಕೆ ಎನ್ನಿಸಿಕೊಳ್ಳುವುದಾದರೆ ನೂರಾರು ಎಕರೆ ಸರ್ಕಾರಿ ಮಿಯನ್ನು ದೋಚಿದ ರಾಜ್ಯ ಬಿಜೆಪಿ ನಾಯಕ ಮತ್ತು ಜಿ ಉಪಮುಖ್ಯಮಂತ್ರಿ ಆರ್. ಅಶೋಕ್‌ರನ್ನು ೀಡೆಕೋರ ಎನ್ನಲೇಬೇಕಲ್ಲವೇ? ತನ್ನ ರಾಜಕೀಯ ್‌ಫಾದರ್ ಮತ್ತು ಬಿಜೆಪಿ ರಾಷ್ಟ್ರನಾಯಕ ಂತ್‌ಕುಮಾರ್ ಹುಡ್ಕೋ ಹಗರಣದ ಮೂಲಕ ೀಚಿದ್ದು ಡಕಾಯಿತಿಯಲ್ಲವೆ? ಯಡಿಯೂರಪ್ಪ ಸರ್ಕಾರದ ೀರಿಗೆ ಕನ್ನ ಹಾಕಿ ಜೈಲು ಪಾಲಾಗಿದ್ದರ ಮುಂದೆ ಚೂಡಿದಾರ್ ಕದ್ದದ್ದು ಯಾವ ಮಹಾ?

ಇತ್ಯಾದಿ ಪ್ರಶ್ನಾವಳಿಗಳನ್ನು ತನ್ನದೊಂದು ಸಣ್ಣ ಕೈ ಯ ಮೂಲಕ ಎತ್ತ ಹೊರಟವಳು ಗಿರಿನಗರದ ಪಿ ಕೌನ್ಸಿಲರ್ ಹೆಚ್.ಎಸ್. ಲಲಿತಾ. ಬಿಬಿಎಂಪಿಯ ಲರ್ ಆಗಿದ್ದುಕೊಂಡೂ ಗಾಂಧಿನಗರದ ಬಟ್ಟೆ ಡಿಯೊಂದರಲ್ಲಿ ಚೂಡಿದಾರ್ ಕದ್ದು ಸಿಕ್ಕಿ ಬೀಳುವಂಥ ದ್ರ್ಯವಾಗಲಿ ದುರ್ಗತಿಯಾಗಲಿ ಆಕೆಗಿರಲಿಲ್ಲ. ಬಿಟ್ಟಿ ತನಗೊಂದು ತನ್ನ ನಾಯಿಗೊಂದು ಎಂಬ ದುರಾಶೆಗೆ ್ದ ಪರಪ್ಪನ ಅಗ್ರಹಾರ ಜೈಲು ಪಾಲಾಗಿದ್ದಾಳೆ ಗಿರಿನಗರದ ಲರ್ ಲಲಿತಾ.



ಗಂಡ ವಿಜಯ್ ಕುಮಾರ್ ಜೊತೆ ಲಲಿತಾ


ಹೆಚ್ಚೂ ಕಮ್ಮಿ ನಾಲ್ಕು ವರ್ಷಗಳ ಕಾಲ ಗಿರಿನಗರದ ಲರ್ ಆಗಿ ಮೆರೆದ ಹೆಚ್.ಎಸ್. ಲಲಿತಾ ಹುಟ್ಟಾ ಮಂತೆಯುಲ್ಲದೇ ಹೋದರೂ ಕದಿಯುವಂಥ ರಿದ್ರ್ಯವಿರಲಿಲ್ಲ. ಎಸ್.ಆರ್. ಕಾಲೋನಿಯಲ್ಲಿ ಪತಿ ಯ್‌ಕುಮಾರ್‌ಗೆ ಸ್ವಂತ ಮನೆಯಿದೆ. ಗಂಡ ಯ್‌ಕುಮಾರ್ ವೃತ್ತಿಯಲ್ಲಿ ಸೆಂಟ್ರಲ್ ಪಿಡಬ್ಲ್ಯೂಡಿಯ ಕ್ಟ್ರಿಕಲ್ ಕಂಟ್ರಾಕ್ಟರ್. ಅಂಥಾ ಸಂಪಾದನೆಯೇನಿಲ್ಲ. ಬಿವಿಸಲ್ಲಿ ಎಲ್ಲಾ ನಿರುದ್ಯೋಗಿ ಮಹಿಳೆಯರಂತೆ ೀಲ್‌ಸೇಲ್ ಲೆಕ್ಕದಲ್ಲಿ ಸೀರೆಗಳನ್ನು ತಂದು ಅದನ್ನು ು ಸಾಲಕ್ಕೊಡು ಮಾರುತ್ತಿದ್ದ ಲಲಿತಾ ಎಸ್.ಆರ್. ಲೋನಿಯ ಬಡಬ್ರಾಹ್ಮಣ ಕುಟುಂಬದವಳೆ.


ಬ್ರಾಹ್ಮಣಳಾಗಿ ಹುಟ್ಟಿದ್ದೇ ಆಕೆಯ ಪಾಲಿಗೆ ೃಷ್ಟವಾಯಿತು. 2010ರ ಪಾಲಿಕೆ ಚುನಾವಣೆ ಹೊತ್ತಿಗೆ ನಗರ ವಾರ್ಡು ಹೊಸದಾಗಿ ರಚನೆಯಾಗಿತ್ತು. ಮುಖಪಟ ಪಕ್ಕದ ಶ್ರೀನಗರ ವಾರ್ಡಿಗೆ ಕೌನ್ಸಿಲರ್ ್ದ ಲಲಿತಾ ಶ್ರೀನಿವಾಸ್ ಗೌಡರೇ ಗಿರಿನಗರಕ್ಕೂ ಲರ್. ಅದೇನಾಯಿತೋ ಬಸವನಗುಡಿ ಶಾಸಕ ದ್ರಶೇಖರ್‌ಗೂ ಲಲಿತಾ ಶ್ರೀನಿವಾಸ್‌ಗೌಡರಿಗೂ ನ್ನೆಯ ವಿಷಯದಲ್ಲಿ ವೈಮನಸ್ಯ ಶುರುವಾಯಿತು. ಮಾಗಿ 2010ರ ಪಾಲಿಕೆ ಚುನಾವಣೆಯಲ್ಲಿ ಗಿರಿನಗರ ರ್ಡಿಗೆ ಲಲಿತಾಗೆ ಟಿಕೆಟ್ ತಪ್ಪಿಸುವ ಮೂಲಕ ಬಸವನಗುಡಿ ಕಾಂಗ್ರೆಸ್ ಪಾಳೆಯದಲ್ಲಿ ಮಾಜಿ ಮೇಯರ್ ಚಂದ್ರಶೇಖರ್ ಕೈಮೇಲಾಯಿತಾದರೂ ಪರಿಣಾಮ ಕಾಂಗ್ರೆಸ್ಸಿಗೇ ನಷ್ಟ ಸಂಭವಿಸಿತ್ತು.

ಬಲಾಢ್ಯ ಎದುರಾಳಿಯೇ ಇಲ್ಲದ ಗಿರಿನಗರ ವಾರ್ಡಿಗೆ ಬಿಜೆಪಿಯಿಂದ ಟಿಕೆಟ್ ಗಿಟ್ಟಿಸಿದವಳು ಹೆಚ್.ಎಸ್. ಲಲಿತಾ. ಆತನಕ ದಿನ ಬೆಳಗ್ಗೆಯಾದರೆ ರಾಷ್ಟ್ರನಾಯಕ ಅನಂತ್‌ಕುಮಾರ್ ಮನೆಯಲ್ಲಿ ಕಾಣಿಸಿಕೊಳ್ಳುತ್ತಿದ್ದ ಲಲಿತಾಳ ಪಾಲಿಗೆ ಗುರುವಿನಂತಿದ್ದದ್ದು ಹಾಲೀ ಮೇಯರ್ ಕಟ್ಟೆ ಸತ್ಯ. ಬಿಜೆಪಿಯ ತ್ಯಾಗರಾಜನಗರ ಮಂಡಳಕ್ಕೆ ಈಕೆಯೇ ಮಹಿಳಾ ಮೋರ್ಚಾ ಅಧ್ಯಕ್ಷೆ. ಗಂಡನಿಗೆ ಸ್ವತಃ ಮನೆಯಿತ್ತಾದರೂ ಮಾಡಿಕೊಂಡ ಸಾಲಕ್ಕೆ ಇದ್ದ ಮನೆಯನ್ನೇ ಭೋಗ್ಯಕ್ಕೆ ಹಾಕಿ ವಿದ್ಯಾಪೀಠ ಸರ್ಕಲ್ಲಿನಲ್ಲಿ ಸಂಗಾತಿ ವೆಂಕಟೇಶ್ ಮನೆ ಪಕ್ಕದ ಬಾಡಿಗೆ ಮನೆಯೊಂದರಲ್ಲಿ ತಂಗಿದ್ದ ಲಲಿತಾ ಕೆಲಕಾಲ ಅಶೋಕ್ ಪಟಾಲಮ್ಮಿನಲ್ಲೂ ಕಾಣಿಸಿಕೊಂಡಿದ್ದಳು.

ಬಹುಶಃ ಅಶೋಕ್ ಆಸರೆ ಸಿಕ್ಕಿದ್ದರೆ ಲಲಿತಾ ಇವತ್ತು ಚೂಡೀದಾರ್ ಕದಿಯುವ ಪ್ರಮೇಯವೇ ಬರುತ್ತಿರಲಿಲ್ಲ. ಮಹಾರಸಿಕ, ಸಕಲ ಸ್ತ್ರೀಕುಲ ಪರಿಪಾಲಕ ಬಿರುದಾಂಕಿತ ಆರ್. ಅಶೋಕ್ ಆಸ್ಥಾನದಲ್ಲಿ ಬಿಜೆಪಿಯ ಇಂಥ ಅನೇಕ ಮಹತ್ವಾಕಾಂಕ್ಷಿ ಹೆಂಗಸರ ಹಿಂಡೇ ಇತ್ತಾದ್ದರಿಂದ ಅಷ್ಟೇನೂ


ಅನಂತ್‌ಕುಮಾರ್


ಶಾಸಕ ರವಿಸುಬ್ರಮಣ್ಯ


ಕಟ್ಟೆ ಸತ್ಯ

ಪ್ರತಿಭಾಶಾಲಿಯಾಗಿರದ ಲಲಿತಾಗೆ ಅಶೋಕ್ ವಿಶೇಷ ಆಸಕ್ತಿ ತೋರಲಿಲ್ಲ. ಆದರೇನಂತೆ 2010 ಪಾಲಿಕೆ ಚುನಾವಣೆಯಲ್ಲಿ ಬಸವನಗುಡಿಯ ಯಾರಾದರೂ ಬ್ರಾಹ್ಮಣ ಮಹಿಳೆಗೆ ಗಿರಿನಗರದ ಬಿಜೆಪಿ ಟಿಕೆಟ್ ನೀಡಲೇಬೇಕಿತ್ತು. ಕಾಂಗ್ರೆಸ್ಸಿನಿಂದ ತೇಜಸ್ವಿನಿಯ ಬಲಗೈ ಭಟ್ಟಂಗಿಯಾಗಿದ್ದ ಕಾತ್ಯಾಯಿನಿ ಎಂಬಾಕೆಗೆ ಟಿಕೆಟ್ ನೀಡಬೇಕಿತ್ತು. ಆದರೆ ಮಾಜಿ ಶಾಸಕ ಚಂದ್ರಶೇಖರ್ ಕೋಕಿಲಾ ಮೂರ್ತಿ ಎಂಬಾಕೆಯ ಪರ ನಿಂತುಬಿಟ್ಟರು. ಲಲಿತಾ ಶ್ರೀನಿವಾಸಗೌಡ ಮತ್ತು ಕಾತ್ಯಾಯಿನಿಗೆ ಟಿಕೆಟ್ ತಪ್ಪಿದ್ದರಿಂದಾಗಿ ಕೋಕಿಲಾ ಮೂರ್ತಿಯನ್ನು ಎದುರಿಸುವುದು ಲಲಿತಾಗೆ ಕಷ್ಟವಾಗಲಿಲ್ಲ.

ಜೆಡಿಎಸ್‌ನಿಂದ ಶಾಂತಲಾ ಎಂಬ ಅಷ್ಟೇನೂ ಪ್ರಭಾವಿಯಲ್ಲದ ಮಹಿಳೆ ಕಣಕ್ಕಿಳಿದದ್ದು ಬಿಜೆಪಿಯ ಲಲಿತಾ ಪಾಲಿಗೆ ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಂತಾಗಿತ್ತು. ಆರೆಸ್ಸೆಸ್ ಕಾರ್ಯಕರ್ತರು, ಬಿಜೆಪಿ ಬ್ರಾಹ್ಮಣರೆಲ್ಲ ಜಾತಿ ಮೇಲಿನ ಅಭಿಮಾನಕ್ಕೆ ಬಿದ್ದು ಯಾರೆಂದು ಗೊತ್ತೇ ಇಲ್ಲದ ಲಲಿತಾ ಪರ ಪ್ರಚಾರಕ್ಕಿಳಿದರು. ಒಂದೆಡೆ ಶಾಸಕ ರವಿ ಸುಬ್ರಹ್ಮಣ್ಯರ ಶ್ರೀರಕ್ಷೆ ಮತ್ತೊಂದೆಡೆ ನಾಯಕ ಕಟ್ಟೆ ಸತ್ಯರ ಆಶೀರ್ವಾದದ ಫಲವಾಗಿ ಯಾವುದೇ ಶ್ರಮ, ಆರ್ಥಿಕ ಸಂಕಷ್ಟ, ಓಡಾಟಗಳಿಲ್ಲದೆಯೇ ಲಲಿತಾ ಗೆದ್ದು ಬಿಟ್ಟಳು. ಎದುರಾಳಿ ಕಾಂಗ್ರೆಸ್ ಅಭ್ಯರ್ಥಿ ಕೋಕಿಲಾ ಮೂರ್ತಿಗಿಂತಲೂ ಮೂರು ಸಾವಿರದಷ್ಟು ಅಧಿಕ ಮತ ಗಳಿಸಿದ್ದ ಲಲಿತಾ ಎದುರು ನಿಂತಿದ್ದ ಜೆಡಿಎಸ್‌ನ ಶಾಂತಲಾಗೆ ಠೇವಣಿ ಹುಟ್ಟಲಿಲ್ಲ.

ಹೀಗೆ ಲಲಿತಾಳನ್ನು ಏಕಾಏಕಿ ಗಿರಿನಗರಕ್ಕೆ ಬಿಜೆಪಿಯ ಕೌನ್ಸಿಲರ್ ಆಗಿಸಿದ್ದರ ಹಿಂದೆ ಕಾಣದ ಕೈಯೆಂದರೆ ಅದು ಶಾಸಕ ರವಿ ಸುಬ್ರಹ್ಮಣ್ಯರ ಖಾಸಾ ಅಣ್ಣ ಚಂದ್ರಶೇಖರ್!

ಮೈಸೂರು ಕಡೆಯ ಯಾವುದೋ ಹಳ್ಳಿಯೊಂದರಿಂದ ಬೆಂಗಳೂರಿಗೆ ವಲಸೆ ಬಂದಿದ್ದ ಲಲಿತಾ, 2001ರ ಚುನಾವಣೆಯಲ್ಲಿ ಬಸವನಗುಡಿಗೆ ಬಿಜೆಪಿ ಅಭ್ಯರ್ಥಿಯಾಗಿದ್ದ ವಕೀಲರ ನಾಯಕ ಸುಬ್ಬಾರೆಡ್ಡಿಯವರ ಪರ ಪ್ರಚಾರಕ್ಕೆ ನಿಂತು ಕರಪತ್ರ ಹಂಚಿಕೊಂಡಿದ್ದಳು. ಗಿರಿನಗರ ಎಂಬ ಹೊಸ ವಾರ್ಡಿನ ರಚನೆಯಾದಾಗ ಅದನ್ನು ಜನರಲ್ ವಾರ್ಡ್ ಮಾಡುವ ಬಯಕೆ ಅಶೋಕ್‌ಗಿತ್ತಾದರೂ ಹೊಸಕೆರೆಹಳ್ಳಿಯಲ್ಲಿ ಘಟಾನುಘಟಿಗಳಿದ್ದಿದ್ದರಿಂದಾಗಿ ಗಿರಿನಗರವೇ ಮಹಿಳಾ ಮೀಸಲಾಗಿತ್ತು.

ಗಿರಿನಗರಕ್ಕೆ ಬಿಜೆಪಿಯ ಮಹಿಳಾ ನಾಯಕಿಯರ ದೊಡ್ಡ ಹಿಂಡೇ ಅಣಿಯಾಗಿತ್ತು. ಈ ಪೈಕಿ ಕತ್ರಿಗುಪ್ಪೆಯ ಮಾರಮ್ಮನ ದೇವಸ್ಥಾನದ ಪೂಜಾರರ ಸೊಸೆ ಶ್ಯಾಮಲಾ ಸುಸಂಸ್ಕೃತೆ ಮತ್ತು ಸಂಭಾವಿತೆ. ಗಂಡ ಪಕ್ಷದ ಪ್ರಾಮಾಣಿಕ ಕಾರ್ಯಕರ್ತನಾಗಿದ್ದ. ಮಾಜಿ ಕೌನ್ಸಿಲರ್ ವೆಂಕಟೇಶ್‌ಮೂರ್ತಿ ಅನುಯಾಯಿ ವೆಂಕಿ ಎಂಬ ಮತ್ತೊಬ್ಬ ಬಿಜೆಪಿ ಕಾರ್ಯಕರ್ತನ ಪತ್ನಿಯೂ ಪಕ್ಷ ಸಂಘಟನೆಗಾಗಿ ಸಾಕಷ್ಟು ಹೆಣಗಾಡಿದ್ದಳು. ಸಂಸದ ಅನಂತ್‌ಕುಮಾರ್‌ರ ಅದಮ್ಯ ಚೇತನ ಸಂಸ್ಥೆಗಾಗಿ ಜೀವ ತೇದಿದ್ದ ನಾಗರತ್ನ ಎಂಬ ಹಿರಿಯ ಬಿಜೆಪಿ ನಾಯಕಿಯನ್ನೇ ಕೌನ್ಸಿಲರ್ ಮಾಡುತ್ತೇನೆಂದು ಖುದ್ದು ಅನಂತ್‌ಕುಮಾರ್ ಘೋಷಿಸಿದ್ದರು. ಇದಲ್ಲದೆ ಹೊಸಕೆರೆಹಳ್ಳಿಯ ಪಟೇಲರಾದ ಚಿನ್ನಪ್ಪನವರ ಸೊಸೆಯ ಪರವಾಗಿ ಇಡೀ ವಾರ್ಡಿನ ಸಂಭಾವಿತರೆಲ್ಲ ದನಿಯೆತ್ತಿದ್ದರು. ಶಶಿರೇಖಾರ ಪತಿ ಪಟೇಲ್ ಮಂಜುನಾಥ್ ಮೂಲತಃ ಬಿಜೆಪಿಯವರಲ್ಲದೇ ಹೋದರೂ ಸ್ಥಳೀಯ ಜನಪ್ರಿಯ ಮುಖಂಡರಾಗಿದ್ದರು. ಅವರನ್ನು ಕಾಂಗ್ರೆಸ್ಸಿನಿಂದ ಬಿಜೆಪಿಗೆ ಕರೆತರುವ ಆಲೋಚನೆಯೂ ಅಶೋಕ್‌ಗಿತ್ತು.

ಇಂಥ ಸಂಭಾವಿತ- ಸುಸಂಸ್ಕೃತ ಮಹಿಳಾ ನಾಯಕಿಯರನ್ನೆಲ್ಲ ಯಾಮಾರಿಸಿ ಗೊತ್ತುಪರಿಚಯ ಪ್ರಭಾವ ವರ್ಚಸ್ಸು ಏನೊಂದೂ ಇಲ್ಲದ ಲಲಿತಾಳನ್ನು ಕೊನೇಗಳಿಗೆಯಲ್ಲಿ ಬಿಜೆಪಿ ಟಿಕೆಟ್ ಕೊಟ್ಟು ಕಣಕ್ಕಿಳಿಸಿದ್ದು ಶಾಸಕ ರವಿಸುಬ್ರಹ್ಮಣ್ಯರ ಅಣ್ಣ ಚಂದ್ರಶೇಖರ್!

ಚಂದ್ರಶೇಖರ್ ಮತ್ತು ಲಲಿತಾರ ಮಧ್ಯೆ ಅದೇನು ಅನುಬಂಧವಿತ್ತೋ ಗೊತ್ತಿಲ್ಲ. ಅಥವಾ ಹಿಂದೆಮುಂದೆ ಹೇಳುವವರು ಕೇಳುವವರು ಯಾರೂ ಇಲ್ಲದ ಸ್ವಂತ ಬುದ್ಧಿ, ಸ್ವಂತ ಶಕ್ತಿ ಸ್ವಾಭಿಮಾನ, ಆತ್ಮಾಭಿಮಾನ ಏನೊಂದೂ ಇಲ್ಲದ ರಬ್ಬರ್‌ಸ್ಟ್ಯಾಂಪ್ ಕೌನ್ಸಿಲರ್ ಓರ್ವಳನ್ನು ಗಿರಿನಗರಕ್ಕೆ ತರುವ ಆಲೋಚನೆ ಶಾಸಕರ ಅಣ್ಣ ಚಂದ್ರಶೇಖರ್ ತಲೆ ಹೊಕ್ಕಿದ್ದಕ್ಕೆ ಇನ್ನೂ ಒಂದು ಕಾರಣವಿತ್ತು. ಅದು ಕೃಷ್ಣಭಟ್ಟನ ವಿಶ್ವಭಾರತಿ ಹೌಸಿಂಗ್ ಸೊಸೈಟಿಯ ರಿಯಲ್ ಎಸ್ಟೇಟ್ ದಂಧೆ!



ಗಾಂಧಿನಗರದ ಸುಖಸಾಗರ್ ಮಾಲ್

ಗಿರಿನಗರ ಸುತ್ತಮುತ್ತಲಲ್ಲಿ ಕೃಷ್ಣಭಟ್ಟನ ವಿಶ್ವಭಾರತಿ ಹೌಸಿಂಗ್ ಸೊಸೈಟಿಯ ಖಾಲಿ ಜಾಗ ಹಂಚಿಕೆಯಾಗದೆ ಹಾಗೇ ಉಳಿದಿತ್ತಲ್ಲ. ಉಳಿದ ನಿವೇಶನಗಳನ್ನು ಫಲಾನುಭವಿಗಳಿಂದ ವಂಚಿಸಲೆಂದೇ ಮಂಜ ಎಂಬ ಭಟ್ಟನ ಚೇಲಾ ರೌಡಿ ಪಡೆ ಕಟ್ಟಿಕೊಂಡು ಅಖಾಡಕ್ಕಿಳಿದಿದ್ದ. ಆತನ ಬೆನ್ನಿಗಿದ್ದದ್ದು ಗಿರಿನಗರದ ನಟೋರಿಯಸ್ ಸಹೋದರರಾದ ಮಾಧು ಮತ್ತು ಸುಬ್ರಹ್ಮಣ್ಯ!

ಗಿರಿನಗರ 3ನೇ ಹಂತದಲ್ಲಿ ಕುಖ್ಯಾತ ನಂಜುಂಡೇಶ್ವರ ಪ್ರಾವಿಜನ್ ಸ್ಟೋರ್‌ನ ಮಾಲಿಕರಾದ ಮಾಧು ಮತ್ತು ಸುಬ್ರಹ್ಮಣ್ಯ ಲೋಕಲ್ ಬಿಜೆಪಿ ಕಾರ್ಯಕರ್ತರೂ ಹೌದು ಸ್ಥಳೀಯ ಬ್ರಾಹ್ಮಣ ಮುಖಂಡರೂ ಕೂಡ. ಯಾವುದೋ ಕಾಲಕ್ಕೆ ದಿನಸಿ ಅಂಗಡಿ ತೆರೆದು ಕಾಲಕ್ರಮೇಣ ಇಡೀ ಬಡಾವಣೆಯ ಮನೆಗೆಲ್ಲ ಅಕ್ಕಿ ಬೇಳೆ ಸರಬರಾಜು ಮಾಡಿಯೇ ದುಡ್ಡು ಮಾಡಿದ ಖದೀಮ ಬ್ರದರ್ಸ್‌ಗೆ ಯಾರ್‍ಯಾರ ಮನೆ ಎಲ್ಲಿದೆ? ಎಷ್ಟು ಓಟಿದೆ? ಯಾವ ಜಾತಿ? ಏನು ದೌರ್ಬಲ್ಯ ಎಲ್ಲವೂ ಗೊತ್ತು. ಪ್ರತಿ ಚುನಾವಣೆಯಲ್ಲಿ ಯಾರ್‍ಯಾರ ಮನೆಗೆ ಹೇಗೆಲ್ಲ ದುಡ್ಡು ಕಳಿಸಬೇಕೆಂಬುದೂ ಕರತಲಾಮಲಕ. ಹೀಗಾಗಿ ಸಂಸದ ಅನಂತ್‌ಕುಮಾರ್‌ಗೂ ಈ ಸಹೋದರರನ್ನು ಕಂಡರೆ ಭಯ, ಶಾಸಕ ರವಿಸುಬ್ರಹ್ಮಣ್ಯರೂ ಈ ಸಹೋದರರಿಗೆ ಮಣೆ ಹಾಕುತ್ತಾರೆ.

ಬಿಜೆಪಿಯಲ್ಲಿ ತಮಗಿರುವ ಹಿಡಿತ ಮತ್ತು ನಾಯಕತ್ವ ಬಳಸಿಕೊಂಡೇ ಮಾಧು ಮತ್ತು ಸುಬ್ರಹ್ಮಣ್ಯ ರಬ್ಬರ್‌ಸ್ಟ್ಯಾಂಪ್ ಕೌನ್ಸಿಲರ್ ಓರ್ವಳನ್ನು ಗಿರಿನಗರಕ್ಕೆ ತರುವ ಮಾಸ್ಟರ್‌ಪ್ಲಾನ್ ಹೊಸೆದರು. ವಿಶ್ವಭಾರತಿ ಹೌಸಿಂಗ್ ಸೊಸೈಟಿಯ ಖಾಲಿ ಸೈಟು ದೋಚಲು ತಮಗೆ ರಬ್ಬರ್‌ಸ್ಟ್ಯಾಂಪ್ ಕೌನ್ಸಿಲರ್ ಇದ್ದರಷ್ಟೇ ಅನುಕೂಲ ಎಂಬ ಲೆಕ್ಕಾಚಾರ ಸರಿಯಾಗೇ ಇತ್ತು. ಖದೀಮ ಸಹೋದರರ ಪಾಪದ ದುಡ್ಡು ಮತ್ತು ರಿಯಲ್ ಎಸ್ಟೇಟ್ ಕಾರಸ್ಥಾನದ ಫಲವಾಗಿ ಹಿಂದೆಮುಂದಿಲ್ಲದ್ದ ಲಲಿತಾ ಗೆದ್ದೂ ಬಿಟ್ಟಳು.

ಇನ್ನು ಗೆದ್ದ ಮೇಲೆ ಕೇಳಬೇಕೆ? ಲಲಿತಾ ಏನಿದ್ದರೂ ಸೂತ್ರದ ಗೊಂಬೆಯಷ್ಟೆ. ಅಸಲೀ ಕೌನ್ಸಿಲರ್‌ಗಳಂತೆ ಮೆರೆದದ್ದು ನಂಜುಂಡೇಶ್ವರ ಪ್ರಾವಿಜನ್ ಸ್ಟೋರ್‌ನ ಜೋಡಿ ಧಣಿಗಳಾದ ಮಾಧು ಮತ್ತು ಸುಬ್ರಹ್ಮಣ್ಯ. ಜೊತೆಗೆ ಬಿಜೆಪಿ ನಾಯಕ ಚಂದ್ರಶೇಖರ್ ಮತ್ತು ಕಟ್ಟೆ ಸತ್ಯ ಕೂಡ ಲಲಿತಾಳ ಕೌನ್ಸಿಲರ್‌ಗಿರಿಯಲ್ಲಿ ಪಾಲು ಪಡೆದರು. ಯಾವುದೇ ಅರ್ಹತೆ, ಯೋಗ್ಯತೆ, ಶ್ರಮವಿಲ್ಲದೆ ಕೌನ್ಸಿಲರ್ ಗಾದಿಗೇರಿದ ಲಲಿತಾ ತನ್ನ ಕೌನ್ಸಿಲರ್ ಅಧಿಕಾರವಾಗಲಿ ಅದರ ಉತ್ಪತ್ತಿಯಾಗಲಿ ಕೈಯಿಂದ ಮುಟ್ಟುವುದೂ ಸಾಧ್ಯವಿಲ್ಲ ಎಂದಮೇಲೆ ಚೂಡಿದಾರ್ ಕದಿಯದೆ ಇನ್ನೇನು ಮಾಡುತ್ತಾಳೆ.

ಬಿಜೆಪಿಯಲ್ಲಿ ಮಹಿಳಾ ಗುಲಾಮಗಿರಿಗೆ ಲಲಿತಾ ಒಂದು ನಿದರ್ಶನವಷ್ಟೆ. ಗೆಲ್ಲಿಸಿದ ಜನ ಈಗ ನಂಜುಂಡೇಶ್ವರ ಸ್ಟೋರ್ಸ್ ಖದೀಮರಿಗಾಗಿ ಹುಡುಕಾಡುತ್ತಿದ್ದಾರಂತೆ. 'ನಿಮ್ಮ ಮಾತು ಕೇಳಿ ಗೆಲ್ಲಿಸಿದ್ದೀವಲ್ಲ; ಒಳ್ಳೆ ಕಳ್ಳಿಯನ್ನು ತಂದು ಕೌನ್ಸಿಲರ್ ಮಾಡಿದ್ರಲ್ರೀ?' ಎಂದು ಹಿಡಿಶಾಪ ಹಾಕುತ್ತಿದ್ದಾರಂತೆ.

● ದಾ. ಸೋಮನಾಥ್

ಬಡವ ಕದ್ದರೆ ಕಳ್ಳ; ಅದೇ ನಟಿ ರೇಖಾ ಕದ್ದಳೆಂದರೆ ಅದು ಕ್ಲೆಪ್ಟೋಮೇನಿಯಾ?

ಸಿಕ್ಕಿಬಿದ್ದ ನಂತರ ಮನೋವ್ಯಾಧಿಯಿತ್ತು, ಅದು ಕ್ಲೆಪ್ಟೋಮೇನಿಯಾ. ಆ ಕಾರಣಕ್ಕೇ ಲಲಿತಾ ಕಳ್ಳತನದ ಮಾನಸಿಕ ಸ್ಥಿತಿಯಲ್ಲಿದ್ದರು ಎಂದೆಲ್ಲಾ ಹೊಸ ಕತೆಯೊಂದನ್ನು ಹೆಣೆಯುತ್ತಿದ್ದಾರೆ ನಿಜ. ಕಳ್ಳತನ ಮಾಡುವ ಪ್ರತಿಯೊಬ್ಬ ಕಳ್ಳರಿಗೂ ಇದೇ ವಾದವನ್ನು ಅಳವಡಿಸುತ್ತಾ ಹೋದರೆ ನಾಳೆ ಪ್ರತಿಯೊಬ್ಬ ಕಳ್ಳನನ್ನೂ ಮನೋವ್ಯಾಧಿಯ ನೆಪದಲ್ಲಿ ಕ್ಷಮಿಸುತ್ತಾ ಹೋದರೆ ಏನಾದೀತು?

ಕೌನ್ಸಿಲರ್ ಲಲಿತಾಳಿಗೆ ದಾರಿದ್ರ್ಯವಿಲ್ಲದಿರಬಹುದು. ಹಿಂದೊಮ್ಮೆ ಹಿಂದಿ ನಟಿ ರೇಖಾ ಇಂಗ್ಲೆಂಡಿಗೆ ಹೋದಾಗ ಅಲ್ಲಿನ ಯಾವುದೋ ಆಭರಣ ಮಳಿಗೆಗೆ ಹೋಗಿ ಕಂಠೀಹಾರವೊಂದನ್ನು ಕದ್ದು ಸಿಕ್ಕಿಬಿದ್ದರಂತೆ. ಹಾಗೆ ಸಿಕ್ಕಿಬಿದ್ದ ನಂತರ ನಟಿ ರೇಖಾ ಕೂಡ ಈ ಥರದ ಮನೋವ್ಯಾಧಿ ಅಂದರೆ ಕ್ಲೆಪ್ಟೋಮೇನಿಯಾ ಎಂಬ ಹಣೆಪಟ್ಟಿ ಕಟ್ಟಿ ಆಕೆಯ ಮಾನ ಗೌರವ ಉಳಿಸಲಾಯ್ತು.

ಇದರರ್ಥ ಬಡವ ಕದ್ದರೆ ಕಳ್ಳ. ಶ್ರೀಮಂತರು, ಅಧಿಕಾರಸ್ಥರು ಕದ್ದರೆ ಅದು ಮನೋವ್ಯಾಧಿ! ಇದು ಯಾವ ನ್ಯಾಯ?


ಹಿಂದಿ ನಟಿ ರೇಖಾ





ಇದೊಂದು ಕಗ್ಗೊಲೆ

ಶೃಂಗೇರಿ-ಕಾರ್ಕಳ ಹೆದ್ದಾರಿಯಲ್ಲಿ ಕೆರೆಕಟ್ಟೆ ಸಮೀಪದ ತನಿಕೋಡು ಎಂಬ ನಿರ್ಜನ ಪ್ರದೇಶದಲ್ಲಿ ಇದೇ 19ರ ಶನಿವಾರ ಬೆಳಗ್ಗಿನ ಜಾವ ನಕ್ಸಲ್ ನಿಗ್ರಹ ಪಡೆಯವರು ಕಬೀರ್ ಎಂಬ ಯುವಕನನ್ನು ಗುಂಡಿಕ್ಕಿ ಕೊಂದರು. ಕಬೀರ್ 21ರ ಹರೆಯದ, ಸುರತ್ಕಲ್ ಕೃಷ್ಣಾಪುರದ ಮುಸ್ಲಿಂ ಯುವಕ. ಆ ರಾತ್ರಿ ಹೊತ್ತಲ್ಲದ ಹೊತ್ತಿನಲ್ಲಿ ಅವನು ತನ್ನ ಇಬ್ಬರು ಸಹಚರರೊಡನೆ ತೀರ್ಥಹಳ್ಳಿಯ ದಲ್ಲಾಳಿಯೊಬ್ಬರಿಂದ ಕ್ರಯಕ್ಕೆ ಕೊಂಡ 20 ಜಾನುವಾರುಗಳನ್ನು ಒಂದು ಬೊಳೆರೊ ಪಿಕಪ್ ವಾಹನದಲ್ಲಿ ಮಂಗಳೂರಿನ ಕಸಾಯಿಖಾನೆಗೆ ಸಾಗಿಸುತ್ತಿದ್ದ. ವಾಹನದ ಎದುರು ಸೀಟಿನಲ್ಲಿ ಡ್ರೈವರ್ ಪ್ರಮೋದ್ ಮತ್ತು ರಫೀಕ್ ಎಂಬ ತರುಣ ಕೂತಿದ್ದರು; ಹಿಂದೆ ಜಾನುವಾರುಗಳ ಒಟ್ಟಿಗೆ ಕಬೀರ್ ಮತ್ತು ಶೇಖಬ್ಬ ಎಂಬ ಇನ್ನೋರ್ವ ತರುಣರಿದ್ದರು. ಆ ರಾತ್ರಿ 3.30ರ ಹೊತ್ತಿಗೆ ಅವರ ಬೊಳೆರೋ ತನಿಕೋಡು ಚೆಕ್‌ಪೋಸ್ಟ್ ತಲುಪಿತು. ಡ್ರೈವರ್ ಪಕ್ಕದಲ್ಲಿ ಕೂತಿದ್ದ ರಫೀಕ್ ಚೆಕ್‌ಪೋಸ್ಟ್ ಸಿಬ್ಬಂದಿಗೆ ದಾಖಲೆಗಳನ್ನು ತೋರಿಸಲು ಕೆಳಗಿಳಿದರು. ಚೆಕ್‌ಪೋಸ್ಟಿನಲ್ಲಿ ಆ ವೇಳೆಗೆ ಡ್ಯೂಟಿ ಮೇಲಿದ್ದ ನಕ್ಸಲ್ ನಿಗ್ರಹ ಪಡೆಯವರು ಬೊಳೆರೋ ಹಿಂದೆ ಹೋಗಿ, ಅಲ್ಲಿ ಕೂತಿದ್ದ ಕಬೀರ್ ಮತ್ತು ಶೇಖಬ್ಬರನ್ನು ಕೆಳಗೆ ಇಳಿಯಲು ಹೇಳಿದರು. ಪೊಲೀಸರನ್ನು ನೋಡಿದಾಕ್ಷಣ ಅವರಿಬ್ಬರೂ ಅಲ್ಲಿಂದ ಓಡಿದರು. ಇಬ್ಬರ ಬಳಿಯೂ ಬಂದೂಕು ಬಿಡಿ, ಒಂದು ದೊಣ್ಣೆಯೂ ಇರಲಿಲ್ಲ; ಆದರೂ ನಕ್ಸಲ್ ನಿಗ್ರಹ ಪಡೆಯವರು ಗುಂಡು ಹಾರಿಸಿದರು. ಗುಂಡು ತಗುಲಿ ಕಬೀರ ಸ್ಥಳದಲ್ಲೇ ಪ್ರಾಣ ನೀಗಿದ. ಶೇಖಬ್ಬರನ್ನು ಪೊಲೀಸರು ಬಂಧಿಸಿದರು. ಚೆಕ್‌ಪೋಸ್ಟ್‌ನ ಸಿಬ್ಬಂದಿಗೆ ದಾಖಲಾತಿ ತೋರಿಸಲು ಕೆಳಗೆ ಇಳಿದಿದ್ದ ರಫೀಕ್ ಮತ್ತು ಡ್ರೈವರ್ ಗುಂಡಿನ ಶಬ್ದ ಕೇಳಿದ್ದೇ ಅಲ್ಲಿಂದ ಓಟ ಕಿತ್ತರು. ನಂತರ ಅವರು ಒಂದು ಲಾರಿ ಹತ್ತಿ ಮಂಗಳೂರು ತಲುಪಿದರು.

ರಾಜ್ಯ ಪೊಲೀಸು ಇಲಾಖೆ ಕಬೀರನ ಕೊಲೆಯನ್ನು ಎನ್‌ಕೌಂಟರ್ ಎಂದು ಬಣ್ಣಿಸಿದೆ; ಪೊಲೀಸರ ಕಾನೂನುಬಾಹಿರ ಕ್ರಮವನ್ನು ಅದು ಸಮರ್ಥಿಸಿಕೊಳ್ಳುವ ಪರಿ ಅದು. ಮೊನ್ನೆ ನಡೆದ ಈ ಎನ್‌ಕೌಂಟರ್ ಎಂಬ ಪೊಲೀಸರ ನಿಷ್ಕಾರಣ ದಾಳಿಗೆ ಕಬೀರನ ಶವ ಮಣ್ಣಾಗುವುದರ ಮೊದಲೇ ಅದನ್ನು ಸಮರ್ಥಿಸುವುದಷ್ಟೇ ಅಲ್ಲ ವಿಜೃಂಭಿಸುವುದು ಸಹ ಕಂಡುಬಂದಿದೆ. ನಕ್ಸಲ್ ನಿಗ್ರಹ ಪಡೆಯವರಿಂದ ಕಬೀರ ಹತನಾದ ಸುದ್ದಿ ಶನಿವಾರ ಬೆಳಗ್ಗೆ 8 ಗಂಟೆಯ ಸುಮಾರಿಗೆ ಸುರತ್ಕಲ್‌ನ ಅವನ ಮನೆ ಮತ್ತು ಆಸುಪಾಸಿನವರಿಗೆ ತಲುಪಿತು. ಮೃತನ ಕುಟುಂಬದವರು ಮತ್ತು ಆಪ್ತರೆಲ್ಲ ಸೇರಿ ಏಳೆಂಟು ವಾಹನಗಳಲ್ಲಿ ಶೃಂಗೇರಿಗೆ ಧಾವಿಸಿದರು. ಕಬೀರನ ಶವವನ್ನು ಶೃಂಗೇರಿಯ ಸರಕಾರಿ ಆಸ್ಪತ್ರೆಯಲ್ಲಿ ಇರಿಸಲಾಗಿತ್ತು, ಮೃತನ ಬಂಧುಮಿತ್ರರು ಆಸ್ಪತ್ರೆ ತಲುಪಿದಾಗ, ಅಲ್ಲಿ ಪೊಲೀಸರ ಸಮ್ಮುಖದಲ್ಲಿಯೇ ಶೃಂಗೇರಿಯ ಸುಮಾರು 30-40 ಭಜರಂಗಿಗಳು ಅವರ ಮೇಲೆ ಹಲ್ಲೆ ನಡೆಸಿದರು; ಅವರ ವಾಹನಗಳನ್ನು ಕಲ್ಲಿನಿಂದ ಜಜ್ಜಿ ಜಖಂಗೊಳಿಸಿದರು. ಕೆಲವರ ಮೇಲೆ ಮಾರ್ಗಮಧ್ಯದಲ್ಲಿಯೇ ದಾಳಿ ನಡೆಯಿತು. ಕೃಷ್ಣಾಪುರದಿಂದ ಆ ದಿನ ಶೃಂಗೇರಿಗೆ ಹೋಗಿದ್ದ ಕಬೀರನ ಹತ್ತಿರದ ಸಂಬಂಧಿಕರೊಬ್ಬರು ಅಲ್ಲಿನ ಪರಿಸ್ಥಿತಿಯನ್ನು ಹೀಗೆ ವರ್ಣಿಸಿದರು: "ಅವತ್ತು ಆಸ್ಪತ್ರೆ ಆಸ್ಪತ್ರೆಯ ಹಾಗೆ ಇರಲೇ ಇಲ್ಲ. ಪೇಶೆಂಟುಗಳು, ಡಾಕ್ಟರರು, ನರ್ಸುಗಳು ಎಲ್ಲರೂ ವಾರ್ಡುಗಳ ಹೊರಬಂದು ನೋಡುತ್ತಿದ್ದರು. ಭಜರಂಗಿಗಳು ಸಿಕ್ಕಸಿಕ್ಕವರಿಗೆ ಹೊಡೆಯುತ್ತಿದ್ದರು. ಸುರತ್ಕಲ್‌ನಿಂದ ಪ್ರೆಹಿಕಲ್ ಮಾಡಿಕೊಂಡು ಬಂದಿದ್ದ ಹಲವರಿಗೆ ಶೃಂಗೇರಿಯ ರಸ್ತೆಗಳು ಗೊತ್ತೂ ಇರಲಿಲ್ಲ, ಆದರೆ ಯಾರನ್ನು ಕೇಳುವುದಕ್ಕೂ ಹೆದರಿಕೆಯಾಗುತ್ತಿತ್ತು, ನಮ್ಮಲ್ಲಿ ಯಾರ ಹತ್ತಿರವೂ ನೀರು ಇರಲಿಲ್ಲ, ಆದರೆ ಅಂಗಡಿಗೆ ಹೋಗಿ ನೀರಿನ ಬಾಟಲಿ ಕೇಳುವುದಕ್ಕೂ ಭಯವಾಗುತ್ತಿತ್ತು."

ಹೆದರಿದವರನ್ನು ಇನ್ನಷ್ಟು ಮತ್ತಷ್ಟು ಹೆದರಿಸುವುದು, ಅಸಹಾಯಕರನ್ನು ಹೊಡೆದು ಕೊಲ್ಲುವುದು, ನಂತರ ಅವರೇ ಆಕ್ರಮಣಕಾರಿಗಳು ಎಂದು ಬೊಬ್ಬೆ ಹೊಡೆಯುವುದು, ಒಂದು ಇಡೀ ಸಮುದಾಯವನ್ನೇ ಮತಾಂಧರು, ದೇಶದ್ರೋಹಿಗಳು ಮತ್ತು ಭಯೋತ್ಪಾದಕರು ಎಂಬಂತೆ ಚಿತ್ರಿಸುವುದು- ಇದು ಕಳೆದ ಎರಡು ದಶಕಗಳಿಂದ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಮಾಮೂಲಾಗಿ ನಡೆದುಕೊಂಡು ಬಂದಿರುವ ವಿದ್ಯಮಾನ. ಇತ್ತೀಚೆಗೆ ಈ ಕ್ರೌರ್ಯ ಮತ್ತು ಸಮೂಹಸನ್ನಿ ರಾಜ್ಯದ ಇತರ ಜಿಲ್ಲೆಗಳಲ್ಲೂ ಹರಡುತ್ತಿದೆ. ಕಬೀರನ ಕೊಲೆ ಮತ್ತು ಆನಂತರ ನಡೆದ ಘಟನೆಗಳನ್ನು ಈ ಹಿನ್ನೆಲೆಯಲ್ಲಿ ನಾವು ನೋಡ ಬೇಕಾಗಿದೆ. ಕಬೀರನ ಸಾವಿನನಂತರ, ರಾಜ್ಯ ಸರಕಾರ ಅವನ ಕುಟುಂಬಕ್ಕೆ 5 ಲಕ್ಷ ರೂ. ಪರಿಹಾರ ಘೋಷಿಸಿದೆ. ಆದರೆ ಬಿಜೆಪಿ ನಾಯಕ ಹಾಗೂ ಕಾರ್ಕಳದ ಶಾಸಕ ಸುನಿಲ್‌ಕುಮಾರ್ ಆ ಬಗ್ಗೆ ಪತ್ರಿಕಾಗೋಷ್ಠಿ ನಡೆಸಿ, ಸರಕಾರದ ಆ ನಿರ್ಧಾರವನ್ನು ಖಂಡಿಸಿದ್ದಾರೆ. ಸುರತ್ಕಲ್‌ನ ಒಬ್ಬ ಹಿಂಜಾವೇ ದೊಣ್ಣೆನಾಯಕ ಕಬೀರನನ್ನು ಕೊಂದ ನಕ್ಸಲ್ ನಿಗ್ರಹ ಪಡೆಯ ಸಿಬ್ಬಂದಿಗೆ ಶಿಕ್ಷೆ ಆದರೆ, ಅವರಿಗೆ 50 ಲಕ್ಷ ರೂಪಾಯಿಗಳ ಸಹಾಯಧನ ಸಂಗ್ರಹಿಸಿಕೊಡುವುದಾಗಿ ಘೋಷಿಸಿದ್ದಾನೆ. ಸುರತ್ಕಲ್ ಕೃಷ್ಣಾಪುರದ ಕಬೀರನ ಮನೆಯಲ್ಲಿ ಅವನ ಸಮೀಪದ ಸಂಬಂಧಿಕರೊಬ್ಬರು ಇದೇ ವಿಷಯ ಮಾತಾಡುತ್ತ "ಈ ಹೊತ್ತಿನಲ್ಲೂ ಇವರು ಹೀಗೆಲ್ಲ ಹೇಳುತ್ತಾರಲ್ಲ! ಇವರು ಮನುಷ್ಯರಾ?" ಎಂದು ಕೇಳಿದರು. ಅವರ ಮಾತಿನಲ್ಲಿ ಸಿಟ್ಟಿರಲಿಲ್ಲ; ಬದಲು ವಿಷಾದವಿತ್ತು. ಶೃಂಗೇರಿಯ ಎನ್‌ಕೌಂಟರಿನಲ್ಲಿ ಕಬೀರನ ಬಂಧುಬಳಗದವರು ತಮ್ಮ ಆಪ್ತನೊಬ್ಬನನ್ನು ಕಳೆದುಕೊಂಡರು. ಆದರೆ ಸಾವಿನ ಮನೆಯವರ ಬಗ್ಗೆ ಸಹ ಸಹಾನುಭೂತಿ ತೋರದೆ ತಮ್ಮ ದ್ವೇಷದ ರಾಜಕೀಯ ಮುಂದುವರಿಸಿರುವ ಬಿಜೆಪಿಗಳು ಮಾತ್ರ ತಮ್ಮ ಮನುಷ್ಯತ್ವವನ್ನೇ ಕಳೆದುಕೊಂಡಿದ್ದಾರೆ.

ಸುರತ್ಕಲ್‌ನಲ್ಲಿ ಕಬೀರನ ಶವ ಮಣ್ಣಾಗುವಾಗ ಸ್ಥಳದಲ್ಲಿ ಹತ್ತು ಸಾವಿರ ಜನ ಸೇರಿದ್ದರಂತೆ. ಬಹುಶಃ ಅವರಲ್ಲಿ ಯಾರಿಗೂ ಕಬೀರನನ್ನು ಬಲಿ ತೆಗೆದುಕೊಂಡ ಈ ಪೊಲೀಸು ಕಾರ್ಯಾಚರಣೆಯ ತನಿಖೆ ನಡೆಯುತ್ತದೆ ಮತ್ತು ಮೃತನಿಗೆ ನ್ಯಾಯ ದೊರೆಯುತ್ತದೆ ಎಂಬ ನಂಬಿಕೆ ಇದ್ದಿರಲಾರದು. ಆದರೂ ಅವರೆಲ್ಲ ಮೃತನ ಆತ್ಮಕ್ಕೆ ಶಾಂತಿ ಕೋರಲು ಅಲ್ಲಿ ನೆರೆದಿದ್ದರು. ನ್ಯಾಯದ ಮಾತು ಒತ್ತಟ್ಟಿಗಿರಲಿ, ಈ ವ್ಯವಸ್ಥೆಯ ನ್ಯಾಯದಲ್ಲಿ ಈಗ ಮುಸ್ಲಿಮರಿಗೆ ಮಾತ್ರವಲ್ಲ, ಯಾರಿಗೂ ನಂಬಿಕೆ ಉಳಿದಿಲ್ಲ, ಆದರೆ ಕಬೀರನ ಸಾವು ನ್ಯಾಯಾನ್ಯಾಯದ ಪ್ರಶ್ನೆಯ ಜೊತೆಗೆ ಕಾನೂನಿನ ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಕನಿಷ್ಠ ಅದಕ್ಕಾದರೂ ಸರಕಾರ ಉತ್ತರ ನೀಡಬೇಕಾಗಿದೆ. ಜಾನುವಾರು ಸಾಗಾಟದ ವಾಹನದಲ್ಲಿ ಕಬೀರನ ಮೇಲೆ ನಕ್ಸಲ್ ನಿಗ್ರಹ ಪಡೆ ಗುಂಡು ಹಾರಿಸಿದ ಘಟನೆ ಕುರಿತು ವಿವರಣೆ ನೀಡುತ್ತ



ಕಬೀರ್ ಕೊಲೆಯನ್ನು ಕರ್ನಾಟಕ ಕೋಮು ಸೌಹಾರ್ದ ವೇದಿಕೆ ಪ್ರತಿಭಟಿಸುತ್ತಿರುವುದು


ಕಬೀರ್ ಯಾಕೆ ಕೊಲೆಯಾದ?

ಸುರತ್ಕಲ್ ಯುವಕ ಕಬೀರ್‌ನನ್ನು ಎಎನ್‌ಎಫ್ ಪೇದೆ ನವೀನ್ ನಾಯಕ್ ಕೊಂದದ್ದೇಕೆ? ಪೊಲೀಸರ ಪ್ರಕಾರ ಅವತ್ತು ಚೆಕ್‌ಪೋಸ್ಟಿನಲ್ಲಿ ನಕ್ಸಲ್ ನಿಗ್ರಹ ದಳದ ಇಬ್ಬರು ಪೇದೆಗಳು ಇದ್ದರು. "ಅವರು ಕಬೀರ್ ನಕ್ಸಲ್ ಎಂದು ಭಾವಿಸಿ ಅವನನ್ನು ತಡೆದರು. ಆಗ ಆತ ಓಡಿಹೋಗಲು ಪ್ರಯತ್ನಿಸಿದ್ದರಿಂದ ಅವನ ಮೇಲೆ ಗುಂಡು ಹಾರಿಸಿದ್ದರ ಪರಿಣಾಮ ಆತ ಸಾವನ್ನಪ್ಪಿದ" ಎಂಬುದು ಪೊಲೀಸರ ಸಮಜಾಯಿಷಿ.

ಆದರೆ ಇದರಲ್ಲಿ ಎಷ್ಟು ಸತ್ಯಾಂಶವಿದೆ?

ಮೊದಲನೆಯದಾಗಿ ಕಬೀರ್ ನಕ್ಸಲ್ ಎಂದು ಭಾವಿಸಲು ಯಾವುದೇ ಕಾರಣವಿರಲಿಲ್ಲ, ಯಾಕೆಂದರೆ ಆತನ ಬಳಿ ಯಾವುದೇ ಶಸ್ತ್ರಾಸ್ತ್ರಗಳಿರಲಿಲ್ಲ; ಆತ ನಕ್ಸಲರು ಧರಿಸುವ ಯೂನಿಫಾರ್ಮ್ ಅನ್ನೂ ತೊಟ್ಟಿರಲಿಲ್ಲ, ಬದಲಾಗಿ ಆತ ಮುಸಲ್ಮಾನ ಎಂದೂ, ಆತ ಜಾನುವಾರುಗಳನ್ನು ಸಾಗಿಸುತ್ತಿದ್ದ ಎಂಬುದೂ ಮೇಲುನೋಟಕ್ಕೆ ಗೋಚರಿಸುತ್ತಿತ್ತು. ಈ ಎರಡು ಕಾರಣಗಳಿಗೇ ಆತನ ಮೇಲೆ ಪೇದೆ ನವೀನ್ ನಾಯಕ್ ಗುಂಡುಹಾರಿಸಿದ್ದು ಘೋರ ಅಪರಾಧವೇ ಸರಿ.

ಇನ್ನು ಕಬೀರ್ ಓಡಿಹೋಗಲು ಯತ್ನಿಸಿದ್ದರಿಂದ ಪೇದೆ ನಾಯಕ್ ಆತನ ಮೇಲೆ ಗುಂಡು ಹಾರಿಸಿದ ಎಂಬ ಸಬೂಬು ಕೂಡ ಅಷ್ಟೇ ಸುಳ್ಳಿನದ್ದು. ಯಾಕೆಂದರೆ ಗುಂಡು ತಾಕಿರುವುದು ಕಬೀರನ ಎದೆಯನ್ನು. ಹಾಗೊಮ್ಮೆ ಆತ ಓಡಿಹೋಗುತ್ತಿದ್ದರೆ ಗುಂಡು ಆತನ ಬೆನ್ನಿಗೆ ಬೀಳಬೇಕಿತ್ತು ಇದನ್ನು ಗಮನಕ್ಕೆ ತೆಗೆದುಕೊಂಡರೆ ಕಬೀರನನ್ನು ಬೇಕಂತಲೇ ಕೊಂದಿರುವುದು ಸ್ಪಷ್ಟವಾಗುತ್ತದೆ.




ಈ ಎರಡೂ ತರ್ಕಗಳು ಸರಿಯಲ್ಲ ಎಂದೇ ಇಟ್ಟುಕೊಳ್ಳೋಣ. ರಾಷ್ಟ್ರೀಯ ಮಾನವ ಹಕ್ಕು ಆಯೋಗದ ನಿಯಮಾವಳಿಗಳ ಪ್ರಕಾರ ಪೊಲೀಸರು ತಮ್ಮ ಜೀವಕ್ಕೆ ಅಪಾಯವಿದೆ ಎಂಬ ಸಂದರ್ಭದಲ್ಲಿ ಮಾತ್ರ ಗುಂಡು ಹಾರಿಸಬಹುದು. ಮಾತ್ರವಲ್ಲ, ಅವರು ಹಾಗೆ ಗುಂಡು ಹಾರಿಸಿದರೂ ಅದನ್ನು ಮೊಣಕಾಲಿನ ಕೆಳಗೆ ಹಾರಿಸುವ ಮೂಲಕ ತಮ್ಮ ಪ್ರತಿರೋಧವನ್ನು ನಿಗ್ರಹಿಸಲು ಯತ್ನಿಸಬೇಕು. ಆದರೆ ಶೃಂಗೇರಿಯಲ್ಲಿ ನಡೆದಿರುವುದೇನು?

ಕಬೀರ್‌ನಿಂದ ನಕ್ಸಲ್ ನಿಗ್ರಹ ದಳದ ಪೇದೆಗಳಿಗೆ ಯಾವುದೇ ರೀತಿಯಿಂದಲೂ ಪ್ರಾಣಾಪಾಯವಿರಲಿಲ್ಲ. ಆದರೂ ಆತನ ಮೇಲೆ ನಾಯಕ್ ಗುಂಡು ಹಾರಿಸಿದ. ಅಷ್ಟೇ ಅಲ್ಲ, ಅಕಸ್ಮಾತ್ ಆತ ಓಡಿಹೋಗುತ್ತಿದ್ದರೆ ಆತನ ಕಾಲಿಗೆ ಗುಂಡು ಹಾರಿಸುವ ಮೂಲಕ ಆತ ತಪ್ಪಿಸಿಕೊಳ್ಳದಿರುವಂತೆ ನೋಡಿಕೊಳ್ಳುವ ಬದಲು ಆತನ ಎದೆಗೇ ಗುಂಡಿಟ್ಟು ಆತನನ್ನು ಪೇದೆ ನಾಯಕ್ ಕೊಲೆ ಮಾಡಿದ್ದಾನೆ.

ಇನ್ನು ಕೋಮುವಾದಿ ಚೆಡ್ಡಿಗಳು ಕಬೀರ್ ಜಾನುವಾರುಗಳನ್ನು ಸಾಗಿಸುತ್ತಿದ್ದರಿಂದ ಆತನನ್ನು ಕೊಂದದ್ದು ಸರಿ ಎಂದು ಅಸಹ್ಯವಾಗಿ ಬೊಬ್ಬೆ ಹೊಡೆಯುತ್ತಿದ್ದಾರೆ. ಆದರೆ ಈಗ ಜಾರಿಯಲ್ಲಿರುವ ಕಾನೂನಿನಪ್ರಕಾರ ಜಾನುವಾರುಗಳನ್ನು ಸಾಗಿಸುವುದು ಅಪರಾಧವಲ್ಲ, ಜೊತೆಗೆ ಗೊಡ್ಡಾಗಿರುವ ದನಗಳನ್ನು ಸೂಕ್ತವಾದ ದಾಖಲೆಗಳನ್ನು ಪಡೆದು ಕಸಾಯಿಖಾನೆಗಳಿಗೆ ಮಾರುವುದೂ ಈಗ ಅಪರಾಧವಲ್ಲ, ಹಾಗೊಮ್ಮೆ ಕಬೀರ್ ಸೂಕ್ತ ದಾಖಲೆಗಳನ್ನು ಪಡೆಯದೇ ಜಾನುವಾರುಗಳನ್ನು ಸಾಗಿಸುತ್ತಿದ್ದರೆ ಆತನ ವಿರುದ್ಧ ಕಾನೂನಿನಪ್ರಕಾರ ಕ್ರಮ ಕೈಗೊಳ್ಳಬಹುದಾಗಿತ್ತೆ ಹೊರತು ಅವನ ಪ್ರಾಣವನ್ನೇ ತೆಗೆದುಕೊಳ್ಳುವ ಹಕ್ಕು ಯಾರಿಗೂ ಇಲ್ಲ. ಎಎನ್‌ಎಫ್ ಪೇದೆ ನವೀನ್ ನಾಯಕನಿಗಂತೂ ಯಾರೂ ಆ ಹಕ್ಕನ್ನು ಕೊಟ್ಟಿಲ್ಲ.

ಈ ನವೀನ್ ನಾಯಕ್ ಯಾರು, ಎಲ್ಲಿಯವನು, ಅವನ ಹಿಂದೆ ಯಾರ್‍ಯಾರಿದ್ದಾರೆ, ಅವನ ಸೈದ್ಧಾಂತಿಕ ನಿಲುವುಗಳು ಎಂತಹವು ಎಂಬುದನ್ನೆಲ್ಲ ಈಗ ವಿಚಾರಣೆ ಮಾಡಬೇಕಿದೆ. ಹಾಗೊಮ್ಮೆ ಆತ ಕೋಮುವಾದಿ ಚೆಡ್ಡಿಯಾಗಿದ್ದು, ಪೊಲೀಸ್ ಸಮವಸ್ತ್ರ ಧರಿಸಿದ್ದರಿಂದ ಬೇಕಂತಲೇ ಈ ಕೊಲೆ ಮಾಡಿದ ಎಂಬುದು ಸಾಬೀತಾದರೆ ಆತನಿಗೆ ಜೀವಾವಧಿ ಶಿಕ್ಷೆ ಆಗುವಂತೆ ಸರ್ಕಾರ ನೋಡಿಕೊಳ್ಳಬೇಕಿದೆ. ಅಂತಹ ಒತ್ತಡವನ್ನು ನಾಡಿನ ಜನ ಸರ್ಕಾರ ಮೇಲೆ ಹಾಕಬೇಕಿದೆ.

ಹಾಗೆ ಮಾಡಿದರಾದರೂ ಅಮಾಯಕ ಯುವಕ ಕಬೀರನ ಆತ್ಮಕ್ಕೆ ಶಾಂತಿ ಸಿಗಬಹುದೇನೋ..



ಸೂಕ್ತ ಕ್ರಮ, ಆದರೆ ಸಾಕಾಗುವುದಿಲ್ಲ

ಅಮಾಯಕ ಕಬೀರ್ ಎಂಬ ಯುವಕನ ಕಗ್ಗೊಲೆಯ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಗೃಹ ಮಂತ್ರಿ ಕೆ.ಜೆ.ಜಾರ್ಜ್ ತೀವ್ರ ಟೀಕೆಗೆ ಗುರಿಯಾಗಿದ್ದರು. ಕಾಂಗ್ರೆಸ್ ಆಡಳಿತವಿದ್ದರೂ ಇಲ್ಲಿ ಅಹಿಂದ ಜನರಿಗೆ ರಕ್ಷಣೆ, ನ್ಯಾಯ ಸಿಗುತ್ತಿಲ್ಲ ಎಂಬ ಕೋಪ ರಾಜ್ಯಾದ್ಯಂತ ಸ್ಫೋಟಗೊಳ್ಳುವ ಅಂಚಿನಲ್ಲಿತ್ತು.

ಇದನ್ನು ಅರಿತ ಸರ್ಕಾರ ಈಗ ಕಬೀರ್‌ನನ್ನು ಕೊಂದ ಎಎನ್‌ಎಫ್ ಪೇದೆ ನವೀನ್ ನಾಯಕ್ ಎಂಬಾತನ ವಿರುದ್ಧ ಐಪಿಸಿ 302 ಅಡಿ ದೂರನ್ನು ದಾಖಲಿಸಿದೆ. ಅಷ್ಟೇ ಅಲ್ಲ, ಕಬೀರನ ಶವವನ್ನು ಪಡೆಯಲು ಶೃಂಗೇರಿಗೆ ಬಂದಿದ್ದ ಆತನ ಸಂಬಂಧಿಕರ ಮೇಲೆ ದಾಳಿ ಮಾಡಿ ಅವರ ವಾಹನಗಳನ್ನು ಜಖಂ ಮಾಡಿದ್ದ ಸಂಘ ಪರಿವಾರದ ನಾಲ್ವರು ಹಿಂದೂ ಉಗ್ರರ ವಿರುದ್ಧವೂ ಐಪಿಸಿ 307 ಅಡಿ ದೂರನ್ನು ದಾಖಲಿಸಿದೆ.

ಆದರೆ ಇಷ್ಟು ಮಾತ್ರ ಸಾಕಾಗುವುದಿಲ್ಲ ಎಂಬುದನ್ನು ಸಿದ್ದರಾಮಯ್ಯನವರ ಸರ್ಕಾರ ಅರ್ಥಮಾಡಿಕೊಳ್ಳಬೇಕು. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ನಿಯಮಾವಳಿಯ ಪ್ರಕಾರ ಎನ್‌ಕೌಂಟರ್ ಕೊಲೆ ಮಾಡಿದ ಪೊಲೀಸ್ ಅಧಿಕಾರಿಯ ವಿರುದ್ಧ ಐಪಿಸಿ 302 - ಅಂದರೆ ಕೊಲೆ ಆರೋಪ - ದೂರನ್ನು ದಾಖಲಿಸಿರುವುದು ಸರಿಯಾದದ್ದು. ಆದರೆ ಅದೇ ಆಯೋಗ ಹೇಳುವುದೇನೆಂದರೆ ಎನ್‌ಕೌಂಟರ್ ಮಾಡಿದ ಅಧಿಕಾರಿಯನ್ನು ತಕ್ಷಣವೇ ಅಮಾನತ್ತಿನಲ್ಲಿಡಬೇಕು ಮತ್ತು ಆತ ಬೇಕಂತಲೇ ಕೊಲೆ ಮಾಡಿದ್ದರೆ ಕಾನೂನಿನಪ್ರಕಾರ ಆತನಿಗೆ ಸೂಕ್ತ ಶಿಕ್ಷೆಯಾಗಬೇಕು. ಅದನ್ನೂ ಸಿದ್ದರಾಮಯ್ಯನವರ ಸರ್ಕಾರ ಈಗ ಜರೂರಾಗಿ ಮಾಡಬೇಕಿದೆ.

ಇನ್ನು ಭಜರಂಗದಳದ ನಾಲ್ವರು ಹಿಂದೂ ಕೋಮುವಾದಿಗಳ ವಿರುದ್ಧ ಐಪಿಸಿ 307 - ಅಂದರೆ ಕೊಲೆ ಮಾಡಲು ಯತ್ನ - ದೂರನ್ನು ದಾಖಲಿಸಿಕೊಂಡಿರುವ ಪೊಲೀಸರು ನ್ಯಾಯಾಲಯದ ಮುಂದೆ ಎಲ್ಲಾ ಪುರಾವೆ ಮತ್ತು ಸಾಕ್ಷಿಗಳನ್ನು ಸಲ್ಲಿಸಿ ಅವರೆಲ್ಲರಿಗೂ ಸೂಕ್ತ ಶಿಕ್ಷೆಯಾಗುವಂತೆ ನೋಡಿಕೊಳ್ಳಬೇಕಿದೆ. ಹಾಗಾದಾಗ ಮಾತ್ರ ಹಿಂದೂ ಕೋಮುವಾದಿಗಳ ಅಟ್ಟಹಾಸಕ್ಕೆ ತಡೆ ಒಡ್ಡಿದಂತಾಗಿ ಇನ್ನು ಮುಂದೆ ಇಂತಹ ಕೃತ್ಯಗಳು ನಡೆಯದಂತೆ ನೋಡಿಕೊಳ್ಳುವ ಕೆಲಸವಾಗುತ್ತದೆ.

...ಗಳೂರು ಜಿಲ್ಲಾ ಪೊಲೀಸು ವರಿಷ್ಠಾಧಿಕಾರಿ ಆರ್. ...ನ್ "ಕಬೀರ ಓರ್ವ ನಕ್ಸಲ್ ಎಂಬ ಸಂದೇಹದ ...ೆ ಗುಂಡು ಹಾರಿಸಲಾಗಿದೆ" ಎಂದು ಹೇಳಿದ್ದಾರೆ. ...ಯುವರಾದರೋ "ಜಾನುವಾರು ಕಳ್ಳ, ಸಾಗಾಣಿಕೆಗಾರ ...ಮಾಂಸ ಭಕ್ಷಕನಾಗಿರುವುದರ ಜೊತೆಗೆ ಮುಸ್ಲಿಮನೂ ...ಥ ಒಬ್ಬ ತರುಣನನ್ನು ಪೊಲೀಸರು ಸಾಯಿಸಿದ್ದಾರೆ; ...ುದೇ ಆಯಿತು" ಎಂದು ಆನಂದಿಸುತ್ತಿದ್ದಾರೆ. ಹಾಗಾಗಿ ...ಹ ಎನ್‌ಕೌಂಟರ್ ಯಾಕಾಯಿತು? ಆತ ಜಾನುವಾರು ...ಸುತ್ತಿದ್ದ ಮುಸ್ಲಿಮ ಎಂದೆ? ಅಥವಾ ಶಂಕಿತ ...ನೆಂದೆ?

...ಚಿಕ್ಕಮಗಳೂರು ಜಿಲ್ಲಾ ಪೊಲೀಸು ವರಿಷ್ಠಾಧಿಕಾರಿ ...ತ ಹಾಗೆ ನಕ್ಸಲ್ ನಿಗ್ರಹ ಪಡೆಯವರು ಕಬೀರನನ್ನು ...ಎಂದು ತಪ್ಪಾಗಿ ಭಾವಿಸಿ ಗುಂಡು ಹಾರಿಸಿರಬಹುದು. ...ೆ ಕಬೀರ್‌ನ ಬಳಿ ಯಾವ ಹತ್ಯಾರವೂ ಇರಲಿಲ್ಲ, ...ು ಸಮವಸ್ತ್ರವನ್ನೂ ತೊಟ್ಟಿರಲಿಲ್ಲ. ನಕ್ಸಲರು ಯಾರೂ ...ನ್ನು ನಕ್ಸಲ್ ಎಂದು ಕರೆದುಕೊಳ್ಳುವುದೂ ಇಲ್ಲ. ...ಟಕಕ್ಕೆ ಸೋಕಾಲ್ಡ್ ನಕ್ಸಲ್‌ಗಳ ನಕಲಿ ಎನ್‌ಕೌಂಟರ್‌ಗಳ ...ು ದೀರ್ಘ ಚರಿತ್ರೆ ಇದೆ. 2003 ನವೆಂಬರ್ ...ದು ಕಾರ್ಕಳದ ಈದು ಗ್ರಾಮದಲ್ಲಿ ನಡೆದ ಹಾಜಿಮಾ-...ತಿಯವರ ಎನ್‌ಕೌಂಟರ್‌ನಿಂದ ಹಿಡಿದು ಮೊನ್ನೆ ...ದ ಕಬೀರನ ಎನ್‌ಕೌಂಟರ್‌ವರೆಗೆ ಎಲ್ಲ ...ಕೌಂಟರುಗಳೂ ಕಗ್ಗೊಲೆಗಳು ಎಂದೇ ...ೀಹಿಸಲಾಗಿದೆ. ಮಾನವ ಹಕ್ಕು ಸಂಘಟನೆಗಳು ಈ ...ಎನ್‌ಕೌಂಟರ್‌ಗಳ ಸತ್ಯಾಸತ್ಯತೆಯನ್ನೂ ಪ್ರಶ್ನಿಸಿವೆ. ...ಈ ಎನ್‌ಕೌಂಟರುಗಳನ್ನು ನ್ಯಾಯಾಲಯದ ಎದುರು ...ರ್ಥಿಸಿಕೊಳ್ಳಲು ಪೊಲೀಸರ ಬಳಿ ಸೂಕ್ತ ಸಾಕ್ಷ್ಯಾಧಾರಗಳು ...ಇಲ್ಲ. ಈ ಎನ್‌ಕೌಂಟರ್‌ಗಳ ನಂತರ ಅವುಗಳಲ್ಲಿ ...ತರಾದ ಶಂಕಿತ ನಕ್ಸಲರ ವಿರುದ್ಧ ಪೊಲೀಸು ಇಲಾಖೆ ...ದ ಹೆಚ್ಚಿನ ದಾವೆಗಳು ಬಿದ್ದುಹೋಗಿವೆ. ಹಾಜಿಮಾ, ...ರ್ತಿ ಮೊದಲಾದ 'ನಕ್ಸಲ್'ಗಳು ಬಂದೂಕು ...ಹಿಡಿದ್ದರು ಎಂದು ಪೊಲೀಸರು ವಾದಿಸುತ್ತಾರೆ. ಅವರ ...ನಿಜಕ್ಕೂ ಯಾವ ಆಯುಧವೂ ಇಲ್ಲದ ಸಂದರ್ಭಗಳಲ್ಲಿ ...ರ ಶವದ ಬಳಿ ಬಂದೂಕುಗಳು ಇರಿಸಿ ಸಾಕ್ಷಿಯನ್ನು ...ಸುತ್ತಾರೆ. ಆದರೆ ಕಬೀರನ ಕೇಸಿನಲ್ಲಿ ಪೊಲೀಸು ...ಬಿಯ ಬಳಿ ಅಂತಹ 'ಉತ್ಪಾದಿತ' ಸಾಕ್ಷ್ಯಾಧಾರವೂ ...ಹೀಗಿರುತ್ತ ನಕ್ಸಲ್ ನಿಗ್ರಹ ಪಡೆಯವರು ಆ ರಾತ್ರಿ ...ಕೆ ಕಬೀರನನ್ನು ಗುಂಡಿಟ್ಟು ಕೊಂದರು? ಸರಕಾರ ...ಪ್ರಶ್ನೆಗೆ ಉತ್ತರ ಕೊಡಲೇಬೇಕು.

...ಮೊನ್ನೆ ಶೃಂಗೇರಿ ಸಮೀಪ ಪೊಲೀಸು ಎನ್‌ಕೌಂಟರ್ ...ನಾಂತರ ನಡೆದ ಕಬೀರನ ಕಗ್ಗೊಲೆ ಅಚಾನಕವಾಗಿ ...ದ್ದಲ್ಲ. ಅದು ಒಂದು ಆಕಸ್ಮಿಕ ಘಟನೆಯೂ ಅಲ್ಲ. ...ಕೌಂಟರ್ ಎಂಬ ಗೌರವಾನ್ವಿತ ಹೆಸರು ಪಡೆದ ನರಹತ್ಯೆ ...ರಿ ಅಥವಾ ಕರ್ನಾಟಕಕ್ಕೆ ಸೀಮಿತವಾಗಿರುವಂತಹದ್ದೂ ... ಭಾರತದ ಪ್ರಭುತ್ವ ಲಾಗಾಯ್ತಿನಿಂದಲೂ ...ಾಯಕರನ್ನು ನಡೆಸುಕೊಳ್ಳುತ್ತಿರುವುದೇ ಹಾಗೆ. ತನ್ನ ...ೀಡಲ್ಲಿ ಈ ಪ್ರಭುತ್ವ ನಿಜಕ್ಕೂ ಸೆಕ್ಯುಲರ್! ಅದು ...ಾದ ಕೊಲೆಗಳಿಗೆ ಜಾತಿಮತ ಭೇದವೇ ಇಲ್ಲ. ದೇಶದ ...ರ ಗಡಿಯಲ್ಲಿರುವ ಕಾಶ್ಮೀರ, ಈಶಾನ್ಯ ಭಾರತದ ...ಪುರ, ಅಸ್ಸಾಂ ಮುಂತಾದ 'ಅಂಚಿನ' ರಾಜ್ಯಗಳು ...ು ಮಧ್ಯಭಾರತದ ಅದಿರು ಶ್ರೀಮಂತ ಜಾರ್ಖಂಡ್, ...ಸ್‌ಗಡ, ಒರಿಸ್ಸಾ, ಮಹಾರಾಷ್ಟ್ರ ಮೊದಲಾದ ರಾಜ್ಯಗಳಲ್ಲಿ ...ಪಡೆಗಳು ಪ್ರಜೆಗಳನ್ನು ಎನ್‌ಕೌಂಟರ್ ಮಾಡುತ್ತಲೇ ... ಕಾಶ್ಮೀರ ಮತ್ತು ಈಶಾನ್ಯ ಭಾರತದಲ್ಲಿ ಅಂತರಿಕ ...ಪಾಸ್ತು, ಸಿಗ್ನಲಿಂಗ ನೆಪದಲ್ಲಿ ಭಾರತದ ಸೈನ್ಯ, ...ರ ಮೇಲೆ ಅತ್ಯಾಚಾರ, ಎನ್‌ಕೌಂಟರ್ ಕೊಲೆ, ...ರ ಬಂಧನ ಮತ್ತು ನಾಪತ್ತೆ ಮುಂತಾದ್ದನ್ನು ಸತತವಾಗಿ

ನಡೆಸಿಕೊಂಡು ಬಂದಿದೆ. ಸೈನ್ಯದ ಈ ಪಾಪಕೃತ್ಯಗಳನ್ನು ಪ್ರಜೆಗಳು ನ್ಯಾಯಾಲಯದ ಮುಂದೆ ಪ್ರಶ್ನಿಸುವಂತೆಯೂ ಇಲ್ಲ. ಸಶಸ್ತ್ರ ಸೈನಿಕರ ವಿಶೇಷ ಅಧಿಕಾರ ಕಾಯ್ದೆ **(AFSPA)** ಎಂಬ ಕಾನೂನಿನ ಮುಖಾಂತರ ಸರಕಾರ ಸೈನ್ಯವನ್ನು ನ್ಯಾಯಾಲಯದ ವ್ಯಾಪ್ತಿಯಿಂದ ಹೊರಗೆ ಇಟ್ಟಿದೆ. ಭಾರತದಲ್ಲಿ ನಿರಂಕುಶ ದಬ್ಬಾಳಿಕೆಗೂ ಕಾನೂನಿನ ಮುದ್ರೆ ಇದೆ!

ಪ್ರಭುತ್ವದ ಕರಾಳತೆಯ ಇನ್ನೊಂದು ಮುಖ ಮಧ್ಯಭಾರತದ ಮಹಾರಾಷ್ಟ್ರ, ಜಾರ್ಖಂಡ್, ಛತ್ತೀಸ್‌ಗಡ, ಒರಿಸ್ಸಾ ಮತ್ತು ಆಂಧ್ರಗಳಲ್ಲಿ ಹರಡಿಕೊಂಡಿರುವ 'ದಂಡಕಾರಣ್ಯ'ದಲ್ಲಿ ಈಗ ಅನಾವರಣಗೊಳ್ಳುತ್ತಿದೆ. ಭಾರತದ ಆದಿವಾಸಿಗಳಲ್ಲಿ ಹೆಚ್ಚಿನವರು ವಾಸಿಸುತ್ತಿರುವುದು ಈ ಪ್ರದೇಶದಲ್ಲಿಯೇ. ಭಾರತದ ಖನಿಜ ಸಂಪತ್ತಿನ ಬಹುಭಾಗ ಹುದುಗಿರುವುದೂ ಇಲ್ಲಿಯೇ. ಪ್ರಭುತ್ವ ಈಗ ಈ ಸಂಪತ್ತನ್ನೆಲ್ಲ ಟಾಟಾ, ಬಿರ್ಲಾ, ಜಿಂದಾಲ್, ಮಿತ್ತಲ್, ವೇದಾಂತ, ಪೊಸ್ಕೊ ಮೊದಲಾದ ರಾಷ್ಟ್ರೀಯ, ಬಹುರಾಷ್ಟ್ರೀಯ ಬಂಡವಾಳಶಾಹಿಗಳಿಗೆ ಒತ್ತೆ ಇರಿಸಿದೆ. ಪ್ರಭುತ್ವದ ಸಶಸ್ತ್ರ ಪಡೆಗಳು, ಈ ಬಂಡವಾಳಶಾಹಿ ಕಂಪೆನಿಗಳ ಗಣಿಗಾರಿಕೆಗಾಗಿ ದಂಡಕಾರಣ್ಯದ ಆದಿವಾಸಿಗಳನ್ನು ಬಲಾತ್ಕಾರದಲ್ಲಿ ಒಕ್ಕಲೆಬ್ಬಿಸುತ್ತಿದೆ. ಈ ಹಗಲುದರೋಡೆ ಮತ್ತು ದಬ್ಬಾಳಿಕೆಗಳನ್ನು ಪ್ರತಿಭಟಿಸುವ ಆದಿವಾಸಿಗಳನ್ನು ಹೊಡೆದು ಬಡಿದು ಕೊಲ್ಲಲಾಗುತ್ತಿದೆ. ಪ್ರಭುತ್ವದ ಈ 'ಅಭಿವೃದ್ಧಿ ಕಾರ್ಯಕ್ರಮ'ದಲ್ಲಿ ದೇಶದ ಇಡೀ ರಾಜಕೀಯ ವ್ಯವಸ್ಥೆ ಸಹಭಾಗಿಯಾಗಿದೆ. ಇದನ್ನು ಪ್ರತಿಭಟಿಸುವವರಿಗೆ ಈ ವ್ಯವಸ್ಥೆ ಇಟ್ಟ ಹೆಸರು 'ನಕ್ಸಲ್'. ಎನ್‌ಕೌಂಟರ್ ಅಲ್ಲದೆ ಬೇರೆ ಯಾವ ವಿಧಾನದಲ್ಲಿ ಇವರನ್ನು ನಿಗ್ರಹಿಸಲು ಸಾಧ್ಯ?

ಅದೃಷ್ಟವಶಾತ್, ಕರ್ನಾಟಕದ ಬಳ್ಳಾರಿ ಜಿಲ್ಲೆಯಲ್ಲಿ ಗಣಿಗಾರಿಕೆಗಾಗಿ ಒಕ್ಕಲೆಬ್ಬಿಸುವ ಸಮಸ್ಯೆ ಇರಲಿಲ್ಲ. ಬಳ್ಳಾರಿ ರೆಡ್ಡಿಗಳು ಮುಂತಾದ ಬಿಜೆಪಿ 'ದೇಶಭಕ್ತ'ರಿಗೆ ಅದೊಂದು ಪಾಪ ಅಂಟಿಕೊಳ್ಳಲಿಲ್ಲ. ಕರ್ನಾಟಕದಲ್ಲಿ ಗಣಿಗಾರಿಕೆಗಾಗಿ ಬಲಾತ್ಕಾರದ ಒಕ್ಕಲೆಬ್ಬಿಸುವಿಕೆ ನಡೆಯದಿದ್ದರೂ ಇಲ್ಲಿ ಯಾಕೆ 'ನಕ್ಸಲ್ ಸಮಸ್ಯೆ' ಇದೆ? ಸುರತ್ಕಲ್‌ನ ತರುಣ ಕಬೀರನನ್ನು ಶೃಂಗೇರಿಯ ಕಾಡಿನಲ್ಲಿ ನಕ್ಸಲ್ ನಿಗ್ರಹ ಪಡೆಯವರು ಕೊಂದದ್ದೇಕೆ? ಶೃಂಗೇರಿಯ ಆಸುಪಾಸು ಸೇರಿದಂತೆ ಪಶ್ಚಿಮ ಘಟ್ಟದ ಅರಣ್ಯದಲ್ಲಿ 'ನಕ್ಸಲ್ ಸಮಸ್ಯೆ'ಗೆ ಕಾರಣವಾಗಿರುವುದು ಕೇಂದ್ರ ಸರಕಾರದ ರಾಷ್ಟ್ರೀಯ ಉದ್ಯಾನವನ ಯೋಜನೆ. 1997ರಲ್ಲಿ ಕರ್ನಾಟಕ ಸರ್ಕಾರ ಪಶ್ಚಿಮ ಘಟ್ಟದ ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಯೋಜನೆಯ ಪ್ರದೇಶದಲ್ಲಿ ಸುಮಾರು 1300 ಆದಿವಾಸಿ ಮತ್ತು ಇತರೆ ರೈತಾಪಿ ಕುಟುಂಬಗಳಿಗೆ ತಮ್ಮ ಮನೆಮಾರು ತೆರವು ಮಾಡಲು ನೋಟಿಸು ಕೊಟ್ಟಿತು. ಈ ಒಕ್ಕಲೆಬ್ಬಿಸುವಿಕೆಯನ್ನು ಜನಗಳು ಪ್ರಜಾಸತ್ತಾತ್ಮಕ ವಿಧಾನಗಳಲ್ಲೇ ಪ್ರತಿಭಟಿಸಿದರೂ ಸರಕಾರ ಅವರ ಬಗ್ಗೆ ನಿರ್ದಯವಾಗಿ ವರ್ತಿಸಿತು. ಈ ಪ್ರತಿಭಟನೆಯ ನಾಯಕತ್ವ ವಹಿಸಿದ ಆದಿವಾಸಿ ತರುಣರಲ್ಲಿ ಪ್ರತಿಯೊಬ್ಬರ ಮೇಲೂ ಪೊಲೀಸು ಹತ್ತು ಹಲವು ಕ್ರಿಮಿನಲ್ ಕೇಸುಗಳನ್ನು ದಾಖಲಿಸಿಕೊಂಡರು. ಪೊಲೀಸರ ಹಿಂಸೆಯಿಂದ ತಪ್ಪಿಸಿಕೊಳ್ಳಲು ಹಲವರು ಭೂಗತರಾದರು. ಕರ್ನಾಟಕದ ಮಲೆನಾಡು ಮತ್ತು ಕರಾವಳಿ ಜಿಲ್ಲೆಗಳಲ್ಲಿ ಪೊಲೀಸು ಇಲಾಖೆ 'ನಕ್ಸಲ್' ಎಂದು ಗುರುತಿಸಿರುವವರಲ್ಲಿ ಬಹುಶಃ ಎಲ್ಲರೂ ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಯೋಜನೆಯ ವಿರುದ್ಧ ಪ್ರತಿಭಟನೆ ನಡೆಸಿದವರೇ ಆಗಿರುವುದು ಆಕಸ್ಮಿಕವಲ್ಲ. ಶೃಂಗೇರಿಯ ಸಮೀಪ ನಿರ್ಜನ ಅರಣ್ಯದಲ್ಲಿ ನಕ್ಸಲ್ ನಿಗ್ರಹ ಪಡೆಯ ಠಾಣೆ ಇರುವುದಕ್ಕೂ, ಆ ಪಡೆಯವರು ಕಬೀರನನ್ನು ನಕ್ಸಲ್ ಎಂದು ಸಂದೇಹಿಸಿ ಗುಂಡು ಹೊಡೆದು ಕೊಂದದ್ದಕ್ಕೂ ಇರುವ ಕಾರಣ ಇದುಂಟು

ಇದು. ಈ ಹಿನ್ನೆಲೆಯಲ್ಲಿ ಕಬೀರ ನಕ್ಸಲನಾಗಿರಲಿಲ್ಲ ಎಂದು ಸ್ಪಷ್ಟಪಡಿಸಬೇಕಾದ ಅಗತ್ಯವಿಲ್ಲ. ಅವನು ನಕ್ಸಲನೋ ಅಲ್ಲವೋ, ಅವನ ಎನ್‌ಕೌಂಟರ್ ಮಾತ್ರ ಮುಗ್ಧನೊಬ್ಬನ ಕೊಲೆಯಲ್ಲದೇ ಮತ್ತೇನೂ ಅಲ್ಲ.

ಕಬೀರನ ತಂದೆ ಇದಿನಬ್ಬ ಅವರಿಗೆ ಒಟ್ಟು 7 ಮಕ್ಕಳು. ಆ ಪೈಕಿ ಒಬ್ಬ ಮಗಳು ತೀರಿಕೊಂಡಿದ್ದಾಳೆ. ಉಳಿದವರಲ್ಲಿ ಕಬೀರ ಕಡೆಯವ. ಅವನ ಇಬ್ಬರು ಅಕ್ಕಂದಿರಲ್ಲಿ ಒಬ್ಬಳಿಗೆ ಮದುವೆಯಾಗಿದೆ. ಇದಿನಬ್ಬ ಕೂಲಿನಾಲಿ ಮಾಡಿಕೊಂಡಿದ್ದವರು. ಆದರೆ ಈಗ ಅವರು ಅಸ್ವಸ್ಥರಾದಿಂದಾಗಿ ದುಡಿಯುವ ಸ್ಥಿತಿಯಲ್ಲಿ ಇಲ್ಲ. ಅವರ ಪತ್ನಿಯ ಆರೋಗ್ಯ ಕೂಡ ಹದಗೆಟ್ಟಿದೆ. ಕಬೀರ 9ನೇ ಕ್ಲಾಸಿನವರೆಗೆ ಓದಿದ್ದು, ಪೈಂಟಿಂಗ್ ಇತ್ಯಾದಿ ಸಿಕ್ಕಿದ ಕಸುಬು ಮಾಡಿಕೊಂಡಿದ್ದ. ಜಾನುವಾರು ಸಾಗಾಣಿಕೆಯ ದಂಧೆಗೆ ಅವನು ಹೊಸಬ. ಕಬೀರನ ಬಹಳ ಹತ್ತಿರದ ಸಂಬಂಧಿಯೊಬ್ಬರು ಅವನ ಸಾವಿಗೆ ಕೇವಲ ಮೂರು ದಿನಗಳ ಮೊದಲು, "ಬೇರೆ ಏನನ್ನಾದರೂ ಮಾಡು; ಇದೊಂದಕ್ಕೆ ಇಳಿಯಬೇಡ. ನಿನಗೆ ಎಲ್ಲೂ ಕೆಲಸ ಸಿಗದಿದ್ದರೆ ನನ್ನ ಅಂಗಡಿಯಲ್ಲಿ ಕೂತುಕೊ. ನಾನು ನಿನಗೆ ಸಂಬಳ ಕೊಡುತ್ತೇನೆ" ಎಂದಿದ್ದರಂತೆ. ಎಲ್ಲ ಜಾನುವಾರು ಸಾಗಾಣಿಕೆದಾರರಂತೆ ಕಬೀರನಿಗೂ ಆ ದಂಧೆಯ ಅಪಾಯ ಏನು ಎನ್ನುವುದು ಗೊತ್ತಿತ್ತು. ಸುರತ್ಕಲ್ ಕೃಷ್ಣಾಪುರದವನಾದ್ದರಿಂದ ಭಜರಂಗಿಗಳು ತನ್ನಂತಹವರನ್ನು ಟಾರ್ಗೆಟ್ ಮಾಡುವುದೂ ಅವನಿಗೆ ಗೊತ್ತಿತ್ತು. ಕರಾವಳಿ ರೈತರಿಗೆ ತಮ್ಮ ನಿರುಪಯುಕ್ತ ಜಾನುವಾರುಗಳನ್ನು ಮಾರುವುದು ಅನಿವಾರ್ಯ. ಆದರೆ ಅವುಗಳನ್ನು ಖರೀದಿಸಿ, ಕಸಾಯಿಖಾನೆಗೆ ಸಾಗಿಸುವವರಿಗೆ ಮಾತ್ರ ಇದು ಮಾರಣಾಂತಿಕ ಜೂಜಿನಂತಹ ವ್ಯವಹಾರ. ಆದರಲ್ಲಿ ತೊಡಗಿರುವ ಇತರರಂತೆ ಕಬೀರನೂ ಹತಾಶನಾಗಿ ತನ್ನ ಜೀವವನ್ನು ಪಣಕ್ಕೆ ಇಟ್ಟು ಈ ವೃತ್ತಿಯನ್ನು ಹಿಡಿದಿದ್ದ. ತನಿಕೋಡು ಚೆಕ್‌ಪೋಸ್ಟ್‌ನಲ್ಲಿ ನಕ್ಸಲ್ ನಿಗ್ರಹ ಪಡೆಯವರನ್ನು ಕಂಡಕೂಡಲೇ ಅವನು ಓಡಿದ್ದು ತನ್ನ ಜೀವ ಉಳಿಸಿಕೊಳ್ಳಲೆಂದೇ. ಮುಸ್ಲಿಮರ ಮಟ್ಟಿಗೆ ಪೊಲೀಸರ ಮತ್ತು ಭಜರಂಗಿಗಳ ನಡುವೆ ವ್ಯತ್ಯಾಸವಿಲ್ಲ ಎಂಬ ವಾಸ್ತವ ಸುರತ್ಕಲ್‌ನಲ್ಲಿ ಹುಟ್ಟಿ ಬೆಳೆದ ಕಬೀರನಿಗೆ ಗೊತ್ತಿಲ್ಲವೆ?

ಸುರತ್ಕಲ್ ಬಸ್‌ಸ್ಟ್ಯಾಂಡಿನಿಂದ ಕೃಷ್ಣಾಪುರದ ಕಬೀರನ ಮನೆಯ ಕಡೆ ಹೋಗುವ ದಾರಿಯಲ್ಲಿ ಬಸ್‌ಸ್ಟ್ಯಾಂಡಿನ ಸಮೀಪ ಕಣ್ಣಿಗೆ ಕಿಸುರಾಗುವಷ್ಟು ಕುರೂಪಿಯಾಗಿರುವ ಗುಜರಿ ಮಾರುಕಟ್ಟೆಯೊಂದು ಉದ್ದಕ್ಕೂ ಹರಡಿಕೊಂಡಿದೆ. ಬಹುತೇಕ ಎಲ್ಲ ಊರುಗಳ ಹಾಗೆ ಸುರತ್ಕಲ್‌ನಲ್ಲಿಯೂ ಊರಿನ ಗುಜರಿ ನಿರ್ವಹಿಸುವವರು ಮುಸ್ಲಿಮರು. ಹಾಗಾಗಿ ಆ ಗುಜರಿ ಮಾರುಕಟ್ಟೆಗೆ ಪಾಕಿಸ್ತಾನವೆಂಬ ಹೆಸರು ಬಿದ್ದಿದೆ. ಆದರಲ್ಲಿ ವಿಶೇಷವೇನೂ ಇಲ್ಲ. ಕರ್ನಾಟಕದ ಹಲವು ಊರುಗಳಲ್ಲಿ ಇಂತಹ ತಥಾಕಥಿತ ಪಾಕಿಸ್ತಾನಗಳಿವೆ. ಮುಸ್ಲಿಮರ ಉಡುಪುತೊಡಪು, ಅವರಲ್ಲಿ ಕೆಲವರ ಗಡ್ಡ ಮತ್ತು ಟೊಪ್ಪಿ, ಇನ್ನು ಕೆಲವರ ಉರ್ದು ಹೆಚ್ಚಿನ ಮುಸ್ಲಿಮೇತರ ಸದ್ಗೃಹಸ್ಥರಿಗೆ ಈಗೀಗ ಪಾಕಿಸ್ತಾನವನ್ನೇ ನೆನಪಿಸುತ್ತದೆ. ಈ ಸದ್ಗೃಹಸ್ಥರಿಗೆ ಇದಿನಬ್ಬನಂತಹವರ ಮನೆ ವಾರ್ತೆಯ ದುಃಖದುಮ್ಮಾನಗಳು ಕಾಣಿಸುತ್ತವೆಯೇ? ಇದು ನಮ್ಮ ಸಂವೇದನೆಗೆ ಸಂಬಂಧಿಸಿದ ಪ್ರಶ್ನೆ. ನಮ್ಮ ಊರು, ಕೇರಿ, ಭಾಷೆ, ಕೊನೆಗೆ ನಮ್ಮ ಮಿದುಳು ಮತ್ತು ಹೃದಯಗಳನ್ನು ಸಹ ತಿಂದು ಹಾಕುತ್ತಿರುವ ಮುಸ್ಲಿಂ ದ್ವೇಷ ಈಗ ನಮ್ಮನ್ನು ಆಳುವರಿಗೂ ತಗುಲಿಕೊಂಡಿದೆ. ಮೊನ್ನೆ ಶೃಂಗೇರಿಯ ಸಮೀಪ ನಡೆದ ಎನ್‌ಕೌಂಟರ್ ಈ ರೋಗದ ಒಂದು ಹೊರಮೈ ಲಕ್ಷಣ ಮಾತ್ರ.

● ಜಿ. ರಾಜಶೇಖರ್

ಕ್ಷಮಿಸು ಕಬೀರ್



ಕ್ಷಮಿಸು ಕಬೀರ್, ನಮ್ಮವ್ವ
ಚೌಡಿಗೆ ಹರಕೆ ಹೊತ್ತಿದ್ದಾಳೆ

ಸಹೋದರ ಕಬೀರ್
ಅವರ ಕಣ್ಣಿಗೆ
ನೀನು ಕೂಡ ನಕ್ಸಲ್ ಆಗಿ ಕಂಡೆಯಾ?
ಎದೆಗೆ ಬಂದೂಕ ಇಟ್ಟಾಗಲಾದರೂ
ಉಗ್ರನಾಗದೆ ಹೋದೆಯಲ್ಲ
ಅದೊಂದು ಬೇಸರವಿದೆ ನನಗೆ

ಸಹೋದರ ಕಬೀರ್,
ಗೋವೊಂದು ಎದೆ ಹೊಡೆದು ಸತ್ತಿತಂತೆ
ನಿನ್ನ ಎದೆಗೆ ಗುಂಡು ಬಿದ್ದ ಸದ್ದಿಗೆ
ಗೋಮೂತ್ರ ಕುಡಿದು ಧನ್ಯರಾಗುತ್ತಿದ್ದಾರಂತೆ
ಭಟ್ಟಂಗಿಗಳು

ಸಹೋದರ ಕಬೀರ್
ನಮಗೂ ಸತ್ತ ಗೋವು ತಿನ್ನಿಸಿದ್ದಾರೆ
ಹೃದಯಕ್ಕೆ ಅದೆಷ್ಟೋ ಹೊಡೆದಿದ್ದಾರೆ
ನಿನ್ನ ಎದೆಗೇ ಹೊಡೆಯಬಾರದಿತ್ತು ಸಹೋದರ
ನಮ್ಮೆಲ್ಲರ ಉಸಿರು ನಿಂತಂತೆ ದುಃಖವಾಗುತ್ತಿದೆ..


ಸಹೋದರ ಕಬೀರ್
ಎದೆಗೆ ಹೊಡೆದವನು ರಾಮನ ಭಕ್ತನಾದರೂ
ಅಲ್ಲಾಹುವಿನ ಪ್ರಾರ್ಥನೆ ಸುಮ್ಮನೆ ಬಿಡದು
ನಮ್ಮವ್ವ ಚೌಡಿಗೂ ಹರಕೆ ಹೊತ್ತಿದ್ದಾಳೆ
ಕಬೀರನ ಕೊಂದವನ ರಕ್ತ ಕಾರಿಸು ಎಂದು
ಆಕೆಯ ಶಾಪಕ್ಕೆ ತಪ್ಪಿಸಿಕೊಂಡವರಿಲ್ಲ

ಸಹೋದರ ಕಬೀರ್
ಕ್ಷಮಿಸು ಎನ್ನಲೂ ಮನಸ್ಸು ಬರುತ್ತಿಲ್ಲ
ನಾನು ದನ ತಿನ್ನುವ ದಲಿತ ನೀನು ದನ ತಿನ್ನುವ ಸಾಬಿ
ನಾವಿಬ್ಬರೂ ದನ ತಿನ್ನುತ್ತೇವೆ
ಇವರು ಮನುಷ್ಯರನ್ನೇ ತಿನ್ನುತ್ತಾರೆ
ಇವರಿಗೆ ಎಲ್ಲಿಗೆ ಹೊಡೆಯೋಣ??

ಕ್ಷಮಿಸು ಕಬೀರ್. ಮತ್ತೆ ಹುಟ್ಟುವುದಾದರೆ
ಎದೆಗೆ ಗುಂಡಿಟ್ಟ ನೆಲದಲ್ಲಿ ಹುಟ್ಟಬೇಡ.
ನಮ್ಮವ್ವ ಪೂಜಿಸುವ ಚೌಡಿ ಮೇಲಾಣೆ

● ನಾಗರಾಜ್ ಹೆತ್ತೂರು, ಹಾಸನ

ಎ.ಕೃಷ್ಣಪ್ಪ ನಿರ್ಗಮನ



ಹಿಂದುಳಿದ ವರ್ಗಗಳ ನಾಯಕಗಣದ ಬಿಗಿಯಾದ ಕೊಂಡಿಯೊಂದು ಕಳಚಿ ಬಿದ್ದಿದೆ. ಹಿಂದುಳಿದ ಜಾತಿಯಲ್ಲಿ ಹುಟ್ಟಿ ಮುಂದುವರೆದ ಜನಾಂಗದ ನಾಯಕರುಗಳಿಗೆ ಸೆಡ್ಡು ಹೊಡೆದು ಕಪ್ಪು ಶಿಲಾ ಪ್ರತಿಮೆಯಂತಿದ್ದ ಮೂಲತಃ ಹಿರಿಯೂರಿನ ಅಣ್ಣಯ್ಯಪ್ಪ ಕೃಷ್ಣಪ್ಪ ತಮ್ಮದೇ ಸೀ ಕಾಲೇಜಿನ ಆವರಣದಲ್ಲಿ ರಾಜಕೀಯ ಇತಿಹಾಸವಾಗಿ ಬಿಟ್ಟಿದ್ದಾರೆ.

ಇಂದಿನ ಬಹಳಷ್ಟು ಜನರಿಗೆ ಗೊತ್ತಿರಲಿಕ್ಕಿಲ್ಲ ಸಿದ್ದರಾಮಯ್ಯ 'ಅಹಿಂದ'ಕ್ಕೆ ಚಾಲನೆ ನೀಡುವುದಕ್ಕೂ ಮೊದಲು ಹಿಂದುಳಿದ ವರ್ಗಗಳ ಸಂಘಟನೆಗೆ ಕೈಹಾಕಿದ್ದವರು ಎ.ಕೃಷ್ಣಪ್ಪ. ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾಗಿ ಎರಡು ಬಾರಿ ಮಂತ್ರಿಯೂ ಆಗಿದ್ದ ಎ.ಕೃಷ್ಣಪ್ಪನವರಿಗೆ ಪ್ರಮುಖವಾದ ಖಾತೆಗಳಾವುವು ದಕ್ಕಿರಲಿಲ್ಲವಾದರೂ ನಿರಂತರ ಪ್ರಯತ್ನ ಮತ್ತು ಹಠದಿಂದ ಅಂದಿನ ವರ್ತೂರು ವಿಧಾನಸಭಾ ಕ್ಷೇತ್ರವನ್ನು ವಿಶ್ವಭೂಪಟದಲ್ಲಿ ಐ.ಟಿ.ಪಿ.ಎಲ್ ಎಂಬ ಹೆಸರಿನಲ್ಲಿ ಲ್ಯಾಂಡ್ ಮಾರ್ಕ್‌ನ್ನಾಗಿ ಮಾಡಿಬಿಟ್ಟರು. ಇವತ್ತಿನ ಕೆ.ಆರ್.ಪುರಂ ವಿಧಾನಸಭಾ ಕ್ಷೇತ್ರ ಅಂದಿನ ಅವಿಭಜಿತ ವರ್ತೂರು ವಿಧಾನಸಭಾ ಕ್ಷೇತ್ರದೊಳಗಿತ್ತು. ಸರಿಸುಮಾರು 10 ಲಕ್ಷಕ್ಕೂ ಅಧಿಕ ಮತದಾರರು. ಇದರಲ್ಲಿ ಎ.ಕೃಷ್ಣಪ್ಪನವರ ಯಾದವ ಜನಾಂಗದವರ ಸಂಖ್ಯೆ ಕೇವಲ ಎರಡೂವರೆ ಸಾವಿರ ಮಾತ್ರ. ರೆಡ್ಡಿಗಳೇ ಸಂಖ್ಯೆಯಲ್ಲಿ, ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿಯೂ ಬಲಾಢ್ಯರು. ಇಂಥಲ್ಲಿ ಐಟಿಐ ಕಾರ್ಖಾನೆಯ ಕಾರ್ಮಿಕ ಸಂಘಕ್ಕೆ ಸಹಕಾರ್ಯದರ್ಶಿಯಾಗಿದ್ದ ಎ.ಕೃಷ್ಣಪ್ಪ ಎಂಬ ಕಡುಬಡ ಯುವಕ ವರ್ತೂರಿನಂತಹ ಬೃಹತ್ ವಿಧಾನಸಭಾ ಕ್ಷೇತ್ರಕ್ಕೆ ಶಾಸಕರಾದದ್ದು ಪ್ರಜಾಪ್ರಭುತ್ವದ ಸೌಂದರ್ಯಕ್ಕೊಂದು ಸಾಕ್ಷಿಯಂತಿತ್ತು.

ಎ.ಕೃಷ್ಣಪ್ಪ ಶಾಸಕರಾದಾಗ ಅವರು ಇಡುತ್ತಿದ್ದ ಹೆಜ್ಜೆಹೆಜ್ಜೆಗೂ ರೆಡ್ಡಿಗಳು ಮುಳ್ಳುಗಳನ್ನು ಹಾಕುತ್ತಿದ್ದರು. ರಸ್ತೆ ವಿಸ್ತರಣೆ, ಸರ್ಕಾರಿ ಭೂಮಿಗಳ ತೆರವು ಮುಂತಾದ ಸಂದರ್ಭಗಳಲ್ಲಿ ಎ.ಕೃಷ್ಣಪ್ಪನವರ ಮೇಲೆ ಸ್ಥಳೀಯ ಭೂಮಾಲಿಕರು ದೈಹಿಕ ಹಲ್ಲೆ ನಡೆಸಿದ ಉದಾಹರಣೆಗಳೂ ಹತ್ತಾರಿವೆ. ಆದರೂ ಇವೆಲ್ಲ ಅಡೆತಡೆಗಳನ್ನು ನೀಗಿ ಮುಂದುವರೆದ ಎ.ಕೃಷ್ಣಪ್ಪ ರಾಜಕೀಯವಾಗಿ ಪ್ರವೇಶ ಕೊಡಿಸಿದ್ದು, ಬೆಳೆಯಲು ತಮ್ಮ ಇತಿಮಿತಿಯಲ್ಲಿ ಅವಕಾಶ ಮಾಡಿಕೊಟ್ಟಿದ್ದು ಇಂದಿನ ಶಾಸಕರಾದ ಭೈರತಿ ಬಸವರಾಜು, ಎಂ.ಟಿ.ಬಿ ನಾಗರಾಜ್, ವರ್ತೂರು ಪ್ರಕಾಶ್, ವಿಧಾನಪರಿಷತ್ ಸದಸ್ಯರಾದ ಭೈರತಿ ಸುರೇಶ್ ಮುಂತಾದ ಹಿಂದುಳಿದ ಕುರುಬ ಸಮಾಜದವರಿಗೆ. ಮನಸ್ಸು ಮಾಡಿದ್ದರೆ ಎಲ್ಲರಂತೆ 'ರಿಯಲ್ ಎಸ್ಟೇಟ್ ದಂಧೆ ಮಾಡಿ ನೂರಾರು ಎಕರೆ ಭೂಮಿಯ ಒಡೆಯರಾಗಬಹುದಿತ್ತು. ಆದರೆ ಎ.ಕೃಷ್ಣಪ್ಪ ಶಿಕ್ಷಣ ಕ್ಷೇತ್ರಕ್ಕೆ ಕಾಲಿಟ್ಟು ಸೌತ್ ಈಸ್ಟ್ ಏಷಿಯನ್ ಎಂಬ ಶಿಕ್ಷಣ ಸಾಮ್ರಾಜ್ಯವನ್ನೇ ಸ್ಥಾಪಿಸಿದರು. ಇಂದು ಇಲ್ಲಿ ಸಾವಿರಾರು ರಾಜ್ಯ-ಅಂತರರಾಜ್ಯ ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ.

ಎ.ಕೃಷ್ಣಪ್ಪನವರ ಹಠ ಸಾಧನೆಗೆ ಉದಾಹರಣೆಯೆಂದರೆ, ಅದು ಐಟಿಪಿಎಲ್. ಸಿಂಗಪೂರದ ನಿಯೋಗ ಬೆಂಗಳೂರಿಗೆ ಭೇಟಿ ನೀಡಿದಾಗ ಅನಿರ್ಬಂಧಿತ ವಿದ್ಯುತ್, ನೀರು ಮತ್ತು ಸರಿಗೆ ಸಂಪರ್ಕ ವ್ಯವಸ್ಥೆಯನ್ನು ಕಲ್ಪಿಸಿದರೆ ಐಟಿಪಿಎಲ್ ಸ್ಥಾಪಿಸುವುದಾಗಿ ಭರವಸೆ ನೀಡಿತ್ತು. ಎಸ್.ಎಂ.ಕೃಷ್ಣ ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯದು. ಅವರ ಬೆನ್ನಿಗೆ ಬಿದ್ದ ಎ.ಕೃಷ್ಣಪ್ಪ ಇಲ್ಲೊಂದು. ಪ್ರತ್ಯೇಕ ಪವರ್‌ಸ್ಟೇಷನ್, ಅಂದಿನ ಕಾಲಕ್ಕೆ ಕಾವೇರಿ ನೀರು, ಡಬ್ಬಲ್ ರೋಡ್‌ಗಳನ್ನು ದಾಖಲೆಯ ಅವಧಿಯಲ್ಲಿ ಮುಗಿಸಿ ಐಟಿಪಿಎಲ್ ತಮ್ಮ ಕ್ಷೇತ್ರದಲ್ಲಿ ನೆಲೆಯೂರುವಂತೆ ಮಾಡಿದರು. ಇಂದು ಇಲ್ಲಿ ಲಕ್ಷಾಂತರ ಐಟಿ-ಬಿಟಿ ಉದ್ಯೋಗಿಗಳು ಐಷಾರಾಮಿ ಬದುಕನ್ನು ಕಟ್ಟಿಕೊಂಡಿದ್ದಾರೆ. ಒಣಹೊಲದಲ್ಲಿ ಉತ್ತು-ಬಿತ್ತು ಬೆವರು ಸುರಿಸುತ್ತಿದ್ದ ಕೃಷಿಕರ ಭೂಮಿಗೆ ಚಿನ್ನದ ಬೆಲೆ ಬಂದು ಸೈಕಲ್ ತುಳಿಯುತ್ತಿದ್ದವರು ಇಂದು ಇಂಪೋರ್ಟೆಡ್ ಕಾರುಗಳಲ್ಲಿ ಮೆರೆಯುತ್ತಿರೋದು ಎ.ಕೃಷ್ಣಪ್ಪನವರ ದೂರದೃಷ್ಟಿಯ ಫಲವೇ.


ಇಷ್ಟೆಲ್ಲಾ ಮಾಡಿದ ಎ.ಕೃಷ್ಣಪ್ಪ ಮೂಲತಃ ಮುಂಗೋಪಿ. ಕೆಲವರ ಪ್ರಕಾರ ಇವರದು ಖಡಕ್ ಮಾತು: ತಾನು ಹಿಡಿದ ಮೊಲಕ್ಕೆ ಮೂರೇ ಕಾಲು ಎನ್ನುವಂಥ ಮನುಷ್ಯ. ಅದು ನಿರಂತರ ಶೋಷಣೆಗೊಳಗಾಗಿದ್ದರಿಂದ ಹುಟ್ಟಿದ ಸ್ವಾಭಿಮಾನದ ಪರಾಕಾಷ್ಠೆಯೊ, ಅತಿಯಾದ ಆತ್ಮವಿಶ್ವಾಸದ ಭ್ರಮೆಯೊ ನಿಖರವಾಗಿ ಹೇಳಲಾಗದು. ಅತಿಆತ್ಮವಿಶ್ವಾಸದಲ್ಲಿ ತಮ್ಮ ಬೆಂಬಲಿಗರನ್ನೇ ಅಂಡರ್‌ಎಸ್ಟಿಮೇಟ್ ಮಾಡಿದ ತಪ್ಪಿಗೆ ಕಾಂಗ್ರೆಸ್ ಪಕ್ಷದ ಹಿರಿಯ ಉಪಾಧ್ಯಕ್ಷರಾಗಿದ್ದು ವಿಧಾನಸಭಾ ಟಿಕೆಟ್ ವಂಚಿತರಾದರು. 67ನೇ ವಯಸ್ಸು, ಕ್ಷೀಣಿಸುತ್ತಿದ್ದ ಆರೋಗ್ಯವನ್ನೂ ಲೆಕ್ಕಿಸದೇ ಜೆ.ಡಿ.ಎಸ್ ಪಕ್ಷ ಸೇರಿ ವಿಧಾನಸಭೆಗೆ ಸ್ಪರ್ಧಿಸಿ ಅಲ್ಪಮತಗಳ ಅಂತರದಿಂದ ಹಿರಿಯೂರಿನಲ್ಲಿ ಸೋತರು. ಇತ್ತೀಚಿಗಷ್ಟೇ ಮುಗಿದ ಎಂ.ಪಿ ಎಲೆಕ್ಷನ್‌ನಲ್ಲಿ ತುಮಕೂರಿನಿಂದ ಸ್ಪರ್ಧಿಸಿ, ಹಳ್ಳಿ-ಹಳ್ಳಿ ಸುತ್ತಿ ತಮಗಾದ ಪರಾಜಯವನ್ನು ವಿಜಯವನ್ನಾಗಿ ಪರಿವರ್ತಿಸಿಕೊಳ್ಳಲು ದೇಹಕ್ಕೆ ಹೆಚ್ಚು ತ್ರಾಸ ಕೊಟ್ಟರು. ಚುನಾವಣೆ ಮುಗಿದನಂತರ ವಿಶ್ರಾಂತಿಯನ್ನೂ ತೆಗೆದುಕೊಳ್ಳದೇ ಮೊಮ್ಮಗನೊಂದಿಗೆ ಷಟಲ್‌ಕಾಕ್ ಆಡುವ ವೇಳೆ ಕುಸಿದುಬಿದ್ದು ನಿರಂತರ ಹೋರಾಟದ ಹಾದಿಗೆ ಅಂತ್ಯ ಹಾಡಿದ್ದಾರೆ.

● ಬಿ. ನಾರಾಯಣ್

ಇತ್ತೀಚೆಗೆ ಪ್ರಖ್ಯಾತ ಬರಹಗಾರ ಗೇಬ್ರಿಯಲ್ ಮಾರ್ಕ್ವೆಸ್ ನಿಧನರಾದರು. ಮಾರ್ಕ್ವೆಸ್ ಮತ್ತು ಕೊಲಂಬಿಯಾ ದೇಶವನ್ನು ಕುರಿತು ಅವತ್ತು ಲಂಕೇಶರು ಬರೆದಿದ್ದ ಟಿಪ್ಪಣಿ ಇಲ್ಲಿದೆ.

ಮಾರ್ಕ್ವೆಸ್‌ನ ತೊಳಲಾಟ

ಕೊಲಂಬಿಯಾ ದಕ್ಷಿಣ ಅಮೆರಿಕದ ಗುಡ್ಡಗಾಡುಗಳ, ಬಾಳೇಹಣ್ಣು ಬೆಳೆಯುವ, ಸ್ಪಾನಿಷ್ ಮಾತಾಡುವ ದೇಶ. ಭೂಗೋಳದ ಪುಸ್ತಕ ನಮಗೆ ಇಷ್ಟನ್ನು ಮಾತ್ರ ಹೇಳುತ್ತದೆ. ಈ ದೇಶ ನಮ್ಮ ಹತ್ತಿರಕ್ಕೆ ಬಂದದ್ದು, ನಮ್ಮ ದೇಶದಷ್ಟೇ ವಿವರಗಳೊಂದಿಗೆ ನಮ್ಮ ಮನಸ್ಸಿನಲ್ಲಿ ನಿಂತದ್ದು ಮಾರ್ಕ್ವೆಸ್ ಎಂಬ ಲೇಖಕನ ಮೂಲಕ. ನೀವೂ ಈ ಪುಸ್ತಕಗಳನ್ನು ಓದಿರಬಹುದು. ತನ್ನ ದೇಶದ ಬಣ್ಣ, ಮಣ್ಣು, ಸಸ್ಯ



ಮತ್ತು ಜನರನ್ನೆಲ್ಲ ಈತ ತನ್ನ ಪುಸ್ತಕಗಳಲ್ಲಿ ನೀಡಿದ್ದಾನೆ; ನನ್ನ ಅಚ್ಚುಮೆಚ್ಚಿನ ಲೇಖಕರಲ್ಲೊಬ್ಬನಾದ ಈತ ತನ್ನ 'ನೂರು ವರ್ಷದ ಒಬ್ಬಂಟಿತನ' ('ಹಂಡ್ರೆಡ್ ಇಯರ್ಸ್ ಆಫ್ ಸಾಲಿಟ್ಯೂಡ್') ಎಂಬ ಕಾದಂಬರಿಯಲ್ಲಿ ತನ್ನ ಜನರ ದ್ವಂದ್ವ ಮತ್ತು ಆಕ್ರೋಶಗಳನ್ನು, ಕಾಮ ಮತ್ತು ಕನಸುಗಳನ್ನು ವರ್ಣಿಸಿದ. ಈತ ತನ್ನ ಪ್ರೀತಿಯ ಕೊಲಂಬಿಯಾ ಕುರಿತು ದುಗುಡದಿಂದ ಬರೆದ ಒಂದು ಲೇಖನವನ್ನು ಈಚೆಗೆ ಓದಿದೆ.

"ನನ್ನ ಈ ದೇಶ ನಾಶವಾಗದೆ ಉಳಿಯುತ್ತದೆಯೇ?" ಎಂಬ ಪ್ರಶ್ನೆಗೆ ಉತ್ತರ ಈ ಲೇಖನ. ಕೊಲಂಬಿಯಾದಲ್ಲಿನ ಭ್ರಷ್ಟ ರಾಜಕಾರಣಿಗಳು ಮತ್ತು ಅವರೊಂದಿಗೆ ಸಹಕರಿಸುವ ಜನರು ಸರ್ವನಾಶದ ಅಂಚಿಗೆ ಈ ದೇಶವನ್ನು ತಂದಿದ್ದಾರೆ. ಇವರೆಲ್ಲರ ಚಟುವಟಿಕೆಯ ಫಲ ಇಲ್ಲಿಯ ಕೊಕೇನ್ ಕಳ್ಳಸಾಗಾಣಿಕೆ. ಇಡೀ ಜಗತ್ತಿನ ಕರಾಳ ಕೊಕೇನ್ ಜಾಲದ ಕೇಂದ್ರವಾದ ಕೊಲಂಬಿಯಾದಲ್ಲಿ ಈ ಕಳ್ಳರು ಜಮೀನು ಕೊಳ್ಳುತ್ತಾ ಹೋದರು; ಜನರನ್ನು ತಮ್ಮ ಕಡೆಗೆ ಒಲಿಸಿಕೊಳ್ಳುತ್ತಾ ನಡೆದರು. ಸರ್ಕಾರದಲ್ಲಿ ನಂಬಿಕೆ ಕಳೆದುಕೊಂಡ ಜನ ಈ ಕಳ್ಳರನ್ನು ನಂಬತೊಡಗಿದರು, ಅವರ ಸಹಾಯಕ್ಕೆ ಕೈಯೊಡ್ಡತೊಡಗಿದರು. ಸಾಹಿತಿ ಮಾರ್ಕ್ವೆಸ್ ನೋಡುತ್ತಿದ್ದಂತೆಯೇ ಕೊಲಂಬಿಯಾದ ಅರ್ಧಭಾಗ ಕಳ್ಳರ ವಶವಾಯಿತು. ಎಸ್ಕೋಬಾರ್ ಎಂಬ ಪ್ರಚಂಡ ಈ ಕಳ್ಳಸಾಗಾಣಿಕೆ ಜಾಲದ ಮುಖಂಡ. ಈತ ಪ್ರತೀವರ್ಷ ಸಾವಿರಾರು ಜನ ಪೊಲೀಸರು, ಅಧಿಕಾರಿಗಳು, ನ್ಯಾಯಮೂರ್ತಿಗಳು ಮತ್ತು ರಾಜಕಾರಣಿಗಳನ್ನು ಕೊಲ್ಲಿಸತೊಡಗಿದ. ತನಗೆ ವಿರುದ್ಧವಿರುವವರೆಂದು ಅನುಮಾನ ಬಂದೊಡನೆ ಅವರ ತಲೆ ಹೋಗತೊಡಗಿತು. ಆಗ ಕೊಲಂಬಿಯಾ ಸರ್ಕಾರ ಅಮೆರಿಕದೊಡನೆ ಒಂದು ಒಪ್ಪಂದ ಮಾಡಿಕೊಂಡಿತು. ಕೊಲಂಬಿಯಾದಿಂದಾಗಿ ಅಮೆರಿಕದಲ್ಲೂ ಜನ ಕೊಕೇನ್ ಬಳಸಿ ಹಾಳಾಗುತ್ತಿದ್ದುದರಿಂದ ಅಮೆರಿಕದ ಸೈನಿಕರೇ ಈ ಕಳ್ಳಸಾಗಾಣಿಕೆಯವರನ್ನು ಹಿಡಿದು ಅಮೆರಿಕದಲ್ಲೇ ಅವರನ್ನು ವಿಚಾರಣೆಗೆ ಗುರಿಪಡಿಸಿ ಜೈಲಿಗೆ ಹಾಕುವ ಅಧಿಕಾರ ಇರುವಂತೆ ಈ ಒಪ್ಪಂದ. ಇದರಿಂದ ಆದದ್ದೇನೆಂದರೆ, ಕೊಲಂಬಿಯಾದ ಯಾವನೇ ಒಬ್ಬನನ್ನು ಕೊಕೇನ್ ವ್ಯವಹಾರದಲ್ಲಿರುವುದಾಗಿ ಆಪಾದಿಸಿ ಅಮೆರಿಕಕ್ಕೆ ಎಳೆದುಕೊಂಡು ಹೋಗಬಹುದು. ಸುಳ್ಳು ಕಾರಣಗಳನ್ನು ಕೊಟ್ಟು ಅವನನ್ನು ಜೈಲಿಗೆ ಹಾಕಬಹುದು. ಇದರಿಂದ ಕೊಲಂಬಿಯನ್ನರ ಸ್ವಾತಂತ್ರ್ಯಹರಣವಾಗುವುದು ನಿಶ್ಚಿತ.

ಕೊಕೇನ್ ವ್ಯವಹಾರದಿಂದಾಗಿ ದಿವಾಳಿಯೆದ್ದಿರುವ ಕೊಲಂಬಿಯಾ ಈ ಒಪ್ಪಂದದಿಂದಾಗಿ ಸ್ವಾತಂತ್ರ್ಯವನ್ನು ಕಳೆದುಕೊಳ್ಳತೊಡಗಿತು. ಅಮೆರಿಕದ ಕುಟಿಲತೆಯನ್ನು ನೋಡಿ (ಎಡಪಂಥೀಯನೂ ಫಿಡೆಲ್ ಕ್ಯಾಸ್ಟ್ರೋ ಸ್ನೇಹಿತನೂ ಆದ) ಸಾಹಿತಿ ಮಾರ್ಕ್ವೆಸ್ ಕೆಂಡವಾದ. ತನ್ನ ದೇಶ ಪತನಗೊಳ್ಳುತ್ತಿರುವುದನ್ನು ಕಂಡು ತಳಮಳಗೊಂಡ. ಕೊಕೇನ್ ಕಳ್ಳರೊಂದಿಗೆ ಮಾತಾಡಿ ಒಂದು ತೀರ್ಮಾನಕ್ಕೆ ಬರುವುದು ಒಳ್ಳೆಯದೆಂದು ಸೂಚಿಸಿದ. ಆದರೆ ಕಳ್ಳರಿಂದ ಲಾಭ ಪಡೆದ ಅನೇಕ ಗುಂಪುಗಳು ಮಾತುಕತೆ ಆಗದಂತೆ ನೋಡಿಕೊಂಡವು.

ಆಗ ಕಳ್ಳರು ಉಗ್ರ ಶರತ್ತುಗಳನ್ನು ಹಾಕಿ ಶರಣಾಗತೊಡಗಿದರು. ಕೆಲವರು ಶರಣಾದಂತೆ ಮತ್ತೆ ಕೆಲವರು ಇನ್ನಷ್ಟು ತೀವ್ರವಾಗಿ ಹೋರಾಡತೊಡಗಿದರು. ಮಾರ್ಕ್ವೆಸ್ ಇದನ್ನೆಲ್ಲ ನೋಡಿ ತನ್ನ ದೇಶದ ಬಗ್ಗೆ ಆಶೆಯನ್ನೇ ಕಳೆದುಕೊಳ್ಳತೊಡಗಿದ. ಕಳ್ಳರು ಯಾಕೆ ಶರಣಾಗುತ್ತಾರೆ? ಮಾರ್ಕ್ವೆಸ್ ಹೇಳುತ್ತಾನೆ, "ಅಮೆರಿಕದ ಜೈಲಿನಲ್ಲಿ ವಾಸಿಸುವುದಕ್ಕಿಂತ ಕೊಲಂಬಿಯಾದ ಗೋರಿ ಮೇಲು ಅನ್ನಿಸಿರಬೇಕು." ತಮ್ಮ ಜನರೊಂದಿಗೆ ನಗೆ, ಆಟ, ಬಡಿದಾಟ ಇದನ್ನೆಲ್ಲ ಪರದೇಶದ ಗುಲಾಮಗಿರಿಗೆ ಹೋಲಿಸಲಾಗುವುದಿಲ್ಲ.

ಕೊಲಂಬಿಯಾದ ಜನ ಕೊಕೇನ್ ಬಳಸುತ್ತಿರುವುದರಿಂದ ಹೀಗಾಗುತ್ತಿದೆಯೆ? ಇಲ್ಲ, ಬೇರೆಯವರಿಗಿಂತ ಹೆಚ್ಚು ಬಳಸುವುದಿಲ್ಲ, ಆದರೆ ಕೊಲಂಬಿಯಾ ಜನಕ್ಕೆ ಹಿಡಿದ ವ್ಯಾಧಿ ಬೇರೆ ರೀತಿಯದು. "ನಮ್ಮ ದೇಶದ ಜನಕ್ಕೆ ಮೈಬಗ್ಗಿಸದೆ ಹಣ ಮಾಡುವ ಹುಚ್ಚು ಹಿಡಿದಿದೆ" ಅನ್ನುತ್ತಾನೆ.

ಹಾಗೆಯೇ ಅಮೆರಿಕದ ಬಗ್ಗೆ, ಎಲ್ಲ ದೇಶಗಳ ಸ್ವಾತಂತ್ರ್ಯ ಕಸಿದುಕೊಳ್ಳುತ್ತಿರುವ ಅಮೆರಿಕಕ್ಕೆ ಗುಪ್ತ ರೋಗವೊಂದು ತಗುಲಿದೆ. ಅದು ಏಡ್ಸ್ ಅಲ್ಲ, ಕ್ಯಾನ್ಸರ್ ಅಲ್ಲ, ಅಹಂಕಾರದ್ದು. ಒಂದು ಅಂಕಿಅಂಶದ ಪ್ರಕಾರ ವರ್ಷವೊಂದಕ್ಕೆ ಅಮೆರಿಕನ್ನರು 270 ಟನ್ ಕೊಕೇನ್ ಬಳಸುತ್ತಾರೆ. ಅದು ಅಮೂರ್ತವಾದ ಸಂಖ್ಯೆ. ಮುನ್ನೂರು ಲಾರಿಗಳನ್ನು ತುಂಬಿದ ಕೊಕೇನ್ ಕಲ್ಪಿಸಿಕೊಳ್ಳಿ.

● ಮಾರ್ಚ್ 10, 1993

ಡಿ.ಎಸ್. ನಾಗಭೂಷಣರ ದ್ವಂದ್ವ!

ಧಾರವಾಡದಲ್ಲಿ ಪ್ರಜಾವಾಣಿ ಪತ್ರಿಕೆಯ ಪ್ರಾಯೋಜಕತ್ವದಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿದ್ದ ಡಿ.ಎಸ್. ನಾಗಭೂಷಣರಿಗೆ ಮೆಚ್ಚಿಗೆಯಾಗುವಂತೆ- ಅದೂ ಪ್ರಾಮಾಣಿಕವಾಗಿ- ಮಾತನಾಡಿದ ಸಾಹಿತಿಯೆಂದರೆ ಎಸ್.ಎಲ್. ಭೈರಪ್ಪನವರು. ಅದನ್ನು ತಮ್ಮ 'ಹೊಸ ಮನುಷ್ಯ' ಪತ್ರಿಕೆಯಲ್ಲಿ ಮೆಚ್ಚುಗೆಯಿಂದಲೇ ದಾಖಲಿಸಿದ ನಾಗಭೂಷಣ ಅದೇ ಸಾಹಿತ್ಯದ ಸಭೆಯಲ್ಲಿ ಮೋದಿ ಬಗ್ಗೆ ಪ್ರಸ್ತಾಪ ಮಾಡಿದ ಅನಂತಮೂರ್ತಿಯವರನ್ನು ಚೆಡ್ಡಿವೀರರನ್ನು ಮೀರಿಸಿ ಟೀಕಿಸಿದ್ದರು. "ಸ್ವಾಮಿ, ನಿಮಗೆ ಅಷ್ಟೊಂದು ರಾಜಕೀಯ ತೆವಲಿದ್ದರೆ ಬೀದಿಗೆ ಬಂದು ಮೋದಿ ವಿರುದ್ಧ ಸಾರ್ವಜನಿಕ ಭಾಷಣಗಳನ್ನು ಶುರುಮಾಡಿ. ಹೀಗೆ ಸಾಹಿತ್ಯದ ವೇದಿಕೆಗಳ ಮೇಲೆ ಪುಂಡಾಟಿಕೆ ನಡೆಸಿ ಸಾಹಿತ್ಯದ ಜೀವಕೋಶದ ಮೇಲಿನ ತೆಳು, ಆದರೆ ಅನನ್ಯಸೂಕ್ಷ್ಮವಾದ ಪೊರೆಯನ್ನು ಜಖಂಗೊಳಿಸಬೇಡಿ. ಅದು ಉಸಿರಾಡುವುದನ್ನು ನಿಲ್ಲಿಸೀತು" ಎಂದು ನಾಗಭೂಷಣ ಎಚ್ಚರಿಸಿದ್ದಲ್ಲದೆ, ಅನಂತಮೂರ್ತಿಗಳ ಇಂತಹ ಪ್ರತಿಕ್ರಿಯೆಗಳನ್ನು ಹುಚ್ಚಾಟವೆಂದು ಟೀಕಿಸಿದ್ದರು.

ಮೋದಿಯಂತಹವನು ವಕ್ಕರಿಸಿದರೆ ಸಾಹಿತ್ಯದ ಜೀವಕೋಶದ ಮೇಲಿನ ತೆಳು ಅಂದರೆ ಅನನ್ಯ ಸೂಕ್ಷ್ಮವಾದ ಪೊರೆಯನ್ನು ಹರಿದು ನಾಗಭೂಷಣರ ಸಹಜ ಉಸಿರಾಟವನ್ನು ನಿಲ್ಲಿಸಬಲ್ಲ ಎಂಬುದು ಅವರಿಗೆ ತಿಳಿಯದ್ದೇನಲ್ಲ. ಈಗಾಗಲೇ ಸತತ ಎರಡು ಮೂರು ಬಾರಿ ಒಂದು ಕ್ಷೇತ್ರದಲ್ಲಿ ಆರಿಸಿ ಬಂದಿರುವ ಬಿಜೆಪಿ ಶಾಸಕರ ಕ್ಷೇತ್ರಗಳಿಗೆ ಹೋಗಿ ಒಂದು ಸಣ್ಣ ಸಮೀಕ್ಷೆ ನಡೆಸಿದರೆ ಸಾಕು, ನಾಗಭೂಷಣ ಹೇಳುವ ತೆಳುಪೊರೆ ಮಂದವಾಗಿ ಕಮಲದ ಬಣ್ಣ ಪಡೆದುಕೊಳ್ಳುತ್ತಿರುವುದು ಗೋಚರಿಸುತ್ತದೆ.

ಇರಲಿ, ಇತ್ತೀಚೆಗೆ ನಾಗಭೂಷಣರ ಸಲಹೆಯನ್ನು ಗಂಭೀರವಾಗಿ ಪರಿಗಣಿಸಿದಂತೆ ಕಂಡ ಅನಂತಮೂರ್ತಿಯವರು ನರೇಂದ್ರ ಮೋದಿ ವಿರುದ್ಧ ಬೀದಿಗಿಳಿದು ಮೋದಿ ಆಗಮನದಿಂದಾಗುವ ಅನಾಹುತವನ್ನು ಬಿತ್ತರಿಸುತ್ತ ಹೊರಟರು. ಇದರ ವಿರುದ್ಧವೂ ತಿರುಗಿಬಿದ್ದ ನಾಗಭೂಷಣ್ "ಈ ಅನಂತಮೂರ್ತಿ, ಕಾರ್ನಾಡ್, ದೇವನೂರ್ ಮುಂತಾದ ಬುದ್ಧಿಜೀವಿಗಳು ಹಿಡಿದಿರುವ ಹಾದಿ ಮಾತ್ರ ಕರುಣಾಜನಕ. ಮಾತ್ರವಲ್ಲ ಅನುಮಾನಾಸ್ಪದವೂ ಎನ್ನಿಸುತ್ತದೆ" ಎಂದು ಹೀಯಾಳಿಸುತ್ತ (ಪ್ರಜಾವಾಣಿ 17) ಚರ್ಚಾ ಲೇಖನ ಬರೆದಿದ್ದಾರೆ.

ಅರೆ, ಅನಂತಮೂರ್ತಿ ಮೋದಿ ಬಗ್ಗೆ ಹೋಗಿ ಬೀದಿಬದಿಯಲ್ಲಿ ಮಾತನಾಡಿ ಎಂದು ಸಲಹೆ ಕೊಟ್ಟ ಗಿರಾಕಿಯೇ, ಅವರು ಅದೇ ಕೆಲಸ ಮಾಡಿದಾಗ ನಿಮ್ಮನ್ನು ನೋಡಿ ಕನಿಕರವಾಗುತ್ತದೆ ಎಂದಾಗ ಇವರ ತಲೆ ಸ್ಥಿಮಿತದಲ್ಲಿದೆಯೋ ಅಥವಾ ಅಪಾಯಕಾರಿ ಸ್ಥಿತಿಯಲ್ಲಿದೆಯೋ ಎಂಬ ಗಾಬರಿಯಾಗುತ್ತವೆ.

ಏಕೆಂದರೆ ಹಠಾತ್ತನೆ ನರಭಕ್ಷಕ ಹುಲಿಯೊಂದು ಮೇಲೆರಗಲು ಸಜ್ಜಾಗುತ್ತಿರುವಾಗ, ಅದನ್ನು ತಡೆಯಲು ಸಜ್ಜಾಗಬೇಕೋ ಅಥವಾ "ಸ್ವಲ್ಪ ತಡೆಯಿರಿ ನಮ್ಮ ಆಮ್ ಆದ್ಮಿ ಮರಿಗಳನ್ನು ಬೆಳೆಸಿ ನಿಮ್ಮ ಮೇಲೆ ಛೂ ಬಿಡುತ್ತೇವೆ" ಎನ್ನಬೇಕೊ?

ನಾಗಭೂಷಣರ ದೃಷ್ಟಿಯಲ್ಲಿ ಈ ಆಮ್ ಆದ್ಮಿಯಾಗಲೇ ನಿರ್ಣಾಯಕ ಸಂದರ್ಭದ ಘಟ್ಟ ತಲುಪಿರುವಂತೆ ಕಾಣುತ್ತದೆ; ಅಂತಹ ಘಟ್ಟದಲ್ಲಿ ಬುದ್ಧಿಜೀವಿಗಳು ಅಡ್ಡದಾರಿ ಹಿಡಿದು ಹಾಸ್ಯಾಸ್ಪದರಾಗದೆ ಆಮ್ ಆದ್ಮಿ ಹುಡುಗರನ್ನು ಹಿಡಿದು ಸಾಕಿ ಬೆಳೆಸಬೇಕಿತ್ತು.

ಅಷ್ಟಕ್ಕೂ ಇಂತಹ ವಕ್ರ ಆಲೋಚನೆಗಳೆಲ್ಲಾ ವ್ಯಕ್ತಿಗತ ಚೇಷ್ಟೆಗಳೆನ್ನುವಂತೆ ಕನ್ನಡದ ಪ್ರಜ್ಞಾವಂತರು ಸುಮ್ಮನಿರುವಾಗ, ಹುಟ್ಟಾ ಚೆಡ್ಡಿಗಳು ಮಾತ್ರ ನಾಗಭೂಷಣರನ್ನು ಕೊಂಡಾಡುತ್ತಿರುವುದೊಂದು ವಿಪರ್ಯಾಸ!

● ಆಮ್ ಆದ್ಮಿ

ಮಂಡ್ಯ: ರಮ್ಯಾಗೆ 'ಕೈ' ಕೊಟ್ಟ ಅಂಬಿ ಬಣ



ಕರ್ನಾಟಕದ 28 ಲೋಕಸಭಾ ಕ್ಷೇತ್ರಗಳಿಗೆ ಚುನಾವಣೆ ...ಮು ವಾರ ಕಳೆದಿದೆ. ಮಳೆ ನಿಂತರೂ ಮರದ ಹನಿ ...ದು ಎಂಬ ಗಾದೆಯಂತೆ ಚುನಾವಣೆ ಮುಗಿದು ವಾರ ...ದರೂ ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ರಮ್ಯಾ-...ಟ್ಟರಾಜು ಇಬ್ಬರಲ್ಲಿ ಯಾರು ಗೆಲ್ಲುತ್ತಾರೆ, ಇಲ್ಲಾ ಯಾರು ...ಲುತ್ತಾರೆ ಎಂಬ ಲೆಕ್ಕಾಚಾರ ದಿನದಿಂದ ದಿನಕ್ಕೆ ...ಗೆಯಲ್ಲೂ ಬಿಸಿಯೇರಿಸುತ್ತಿದೆ.

ಕನ್ನಡ ಚಿತ್ರರಂಗದ ಮೋಹಕ ತಾರೆ ರಮ್ಯಾ ...ಯಿಂದ ಮಂಡ್ಯ ಕ್ಷೇತ್ರ ಬಹು ಪ್ರತಿಷ್ಠೆಯಾಗಿ ...ರ್ಪಟ್ಟಿತ್ತು. ಆರು ತಿಂಗಳ ಹಿಂದೆಯಷ್ಟೇ ನಡೆದ ಉಪ ...ನಾವಣೆಯಲ್ಲಿ ಜೆಡಿಎಸ್‌ನ ಪುಟ್ಟರಾಜುರವರನ್ನು 67 ...ರಕ್ಕೂ ಹೆಚ್ಚು ಮತಗಳ ಅಂತರದಿಂದ ಸೋಲಿಸಿ ...ರ್ಲಿಮೆಂಟ್ ಮೆಟ್ಟಿಲೇರಿದ್ದ ರಮ್ಯಾ ಮತ್ತೆ ಗೆಲ್ಲುತ್ತಾಳೋ ...ವ್ವೋ ಎಂಬ ಚರ್ಚೆಗಳು ಕ್ಷೇತ್ರದೆಲ್ಲೆಡೆ ನಡೆಯುತ್ತಿದೆ.

ಜಿಲ್ಲಾ ಉಸ್ತುವಾರಿ ಸಚಿವ ಅಂಬರೀಶ್ ಬೆಂಬಲಿಗರು ...ಮ್ಯಾಗೆ ಭರ್ಜರಿಯಾಗಿ ಕೈಕೊಟ್ಟಿರುವ ಹಿನ್ನೆಲೆಯಲ್ಲಿ ...ಬಾರಿಯ ಫಲಿತಾಂಶ ರಮ್ಯಾ ವಿರುದ್ಧವಾಗಿ ಬಂದರೂ ...ಶ್ಚರ್ಯವಿಲ್ಲ ಎಂಬ ಮಾತುಗಳು ಕೇಳಿಬರುತ್ತಿವೆ.

ಸಂಸದೆಯಾದ ನಂತರ ರಮ್ಯಾ ಕ್ಷೇತ್ರದ ಪ್ರತಿ ಹಳ್ಳಿಗಳನ್ನು ...ತ್ತ ಜನಸಾಮಾನ್ಯರ ಕೈಗೆ ಸಿಕ್ಕಿದ್ದರಿಂದ ಸಹಜವಾಗಿಯೇ ...ಯ ಪರ ಕ್ಷೇತ್ರದಲ್ಲಿ ಭರ್ಜರಿ ಹವಾ ಎದ್ದಿತ್ತು. ತನ್ನ ...ಂಟ್‌ಕೇರ್ ವ್ಯಕ್ತಿತ್ವದಿಂದಲೇ ಸಿನಿಮಾ ರಂಗದಲ್ಲಿ ...ರಿಗೂ ಸವಾಲ್ ಹಾಕುತ್ತಿದ್ದ ರಮ್ಯಾ ರಾಜಕೀಯ ...ತ್ರದಲ್ಲಿ ಅದನ್ನೇ ಮುಂದುವರೆಸಿದ್ದರು. ಆದರೆ ...ಧ್ಯಮಗಳ ಮುಂದೆ ಅಸಂಬದ್ಧವಾಗಿ ಮಾತನಾಡಿ ...ಸುಮ್ಮನೆ ವಿವಾದಗಳನ್ನು ಮೈಮೇಲೆ ಎಳೆದುಕೊಂಡ ...ಣಾಮ ಈ ಬಾರಿಯ ಲೋಕಸಭಾ ಚುನಾವಣೆಯ ...ಲಾಗಿದೆ. ವಸತಿ ಸಚಿವ ಅಂಬರೀಶ್ ಬಣವನ್ನು ವಿಶ್ವಾಸಕ್ಕೆ ...ದುಕೊಳ್ಳದೆ ನಖರಾ ತೋರಿದ ರಮ್ಯಾರಿಗೆ ಅಂಬಿ ...ಬಲಿಗರು ಚುನಾವಣೆಯಲ್ಲಿ ನಖರಾ ತೋರುವ ...ಮೂಲಕ ತಿರುಗೇಟು ನೀಡಿದ್ದಾರೆ.


ಜಿಲ್ಲಾ ಕಾಂಗ್ರೆಸ್ ಅಂಬಿ ಮತ್ತು ಎಸ್.ಎಂ.ಕೃಷ್ಣ ಬಣ ...ಗಿ ಒಡೆದುಹೋಗಿದೆ. ಅಂಬಿ ಬೆಂಬಲಿಗರನ್ನು ಕಂಡರೆ ...ಷ್ಣ ಬೆಂಬಲಿಗರು ಉರಿದು ಬೀಳುತ್ತಾರೆ. ಆದೇ ರೀತಿ ...ಷ್ಣ ಬೆಂಬಲಿಗರನ್ನು ಕಂಡರೆ ಅಂಬಿ ಬೆಂಬಲಿಗರು ಮುಖ ...ಗಿಸುತ್ತಾರೆ. ಇಂತಹ ಸಂದರ್ಭದಲ್ಲಿ ಅಂಬಿ ಬೆಂಬಲಿ ...ನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಿದ್ದ ರಮ್ಯಾ ...ಂಬತನದಿಂದ ಮುಂದುವರಿದಿದ್ದು ಚುನಾವಣೆಯ ಮೇಲೆ ...ಭೀರ ಪರಿಣಾಮವನ್ನೇ ಬೀರಬಹುದು. ಅಂಬಿ ವಿರುದ್ಧ ...ಮ್ಯಾ ಆಡಿದ ಮಾತುಗಳು, ತಮಗೆ ಸರಿಯಾದ ಮಾನ್ಯತೆ ...ಡಲಿಲ್ಲ ಎಂದು ಅಸಮಾಧಾನದಿಂದ ಕುದಿಯುತ್ತಿದ್ದ ...ಬಿ ಬೆಂಬಲಿಗರ ಕೋಪವನ್ನು ಶಮನಮಾಡುವ ಪ್ರಯತ್ನ ...ಸಿಎಂ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ...ಪರಮೇಶ್ವರ್ ಮಾಡಿದ್ದರು. ಈ ಹಿನ್ನೆಲೆಯಲ್ಲಿಯೇ ...ನಾರೋಗ್ಯದಿಂದ ಮಲೇಷ್ಯಾದ ಸ್ನೇಹಿತರ ಮನೆಯಲ್ಲಿ ...ರಾಂತಿ ಪಡೆಯುತ್ತಿದ್ದ ಅಂಬಿಯನ್ನು ತರಾತುರಿಯಲ್ಲಿ ...ಸಲಾಯಿತು.

ಬೆಂಗಳೂರಿಗೆ ಬಂದ ಅಂಬಿ "ಮಂಡ್ಯ ಜನರಿಗೆ ...ಸ್‌ಬುಕ್, ಟ್ವಿಟ್ಟರ್, ವಾಟ್ಸಪ್ ಅವೆಲ್ಲಾ ಗೊತ್ತಾಗಲ್ಲ" ...ದು ರಮ್ಯಾರನ್ನು ಕಿಚಾಯಿಸಿದ್ದರು. "ರಮ್ಯಾ ಇನ್ನೂ ...ಹುಡುಗಿ, ಅವಳು ಹುಟ್ಟುವುದಕ್ಕೆ ಮುನ್ನವೇ ನನಗೆ ...ಜಕೀಯ ಸ್ನೇಹವಿತ್ತು" ಎಂದೆಲ್ಲಾ ಮಾಧ್ಯಮಗಳ ಮುಂದೆ ...ಸುವ ಮೂಲಕ ತನ್ನಷ್ಟೇ ಅಂಬಿಯನ್ನು ರಾಜಕೀಯಕ್ಕೆ ...ಕರೆದಿದ್ದು ಎಂಬ ರಮ್ಯಾ ಮಾತಿಗೆ ಸರಿಯಾದ ಟಾಂಗ್ ...ಡಿದ್ದರು. ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ...ಕ್ಕೆ ಪ್ರತಿಕ್ರಿಯೆ ಕೊಡುವುದು ಸರಿಯಲ್ಲ ಎಂಬ ತಿಳಿವಳಿಕೆ ...ದ ರಮ್ಯಾ "ನಾನು ಯಾರೇ ಹೇಳಿದರೂ ಫೇಸ್‌ಬುಕ್, ...ರ್, ವಾಟ್ಸಪ್ ಬಿಡಲ್ಲ, ತಂತ್ರಜ್ಞಾನದ ಮೂಲಕ ಮಂಡ್ಯದ ಜನರನ್ನು ಬದಲಾವಣೆ ಮಾಡುತ್ತೇನೆ" ಎಂದು ಟ್ವೀಟ್ ಮಾಡಿ ಯಡವಟ್ಟು ಮಾಡಿಕೊಂಡರು.

ರಮ್ಯಾ ಟ್ವೀಟ್ ಮಾಡಿದ್ದನ್ನೇ ದೊಡ್ಡದಾಗಿ ಮಾಡಿದ ಮಾಧ್ಯಮಗಳು ರಮ್ಯಾ ಅಂಬಿಯ ವಿರುದ್ಧ ಎಂಬಂತೆ ಮಾಡಿ ಅಂಬಿ ಅಭಿಮಾನಿಗಳು ಮತ್ತೆ ಕೆರಳುವಂತೆ ಮಾಡಿಬಿಟ್ಟವು. ಈ ಮಧ್ಯೆ ಅನಾರೋಗ್ಯದಿಂದ ಚೇತರಿಸಿಕೊಂಡ ಅಂಬಿ ಮಂಡ್ಯಕ್ಕೆ ಕಾಲಿಟ್ಟಾಗ ರಮ್ಯಾ ಅವರನ್ನು ಬರಮಾಡಿಕೊಳ್ಳದೆ ಉದಾಸೀನ ತೋರಿದರೆಂದು ಆಪಾದಿಸಿದ ಕೆಲ ಅಂಬಿ ಅಭಿಮಾನಿಗಳು ಮದ್ದೂರಿನಲ್ಲಿ ರಸ್ತೆ ತಡೆ ನಡೆಸಿ ರಮ್ಯಾ ವಿರುದ್ಧ ಧಿಕ್ಕಾರ ಕೂಗಿದ್ದೂ ಆಯಿತು. ತನ್ನ ಆಪ್ತ ಅಮರಾವತಿ ಚಂದ್ರಶೇಖರ್ ಮನೆಯಲ್ಲಿ ಮಾಧ್ಯಮಗಳೊಂದಿಗೆ ಸಂವಾದ ನಡೆಸಿದ ಸಂದರ್ಭದಲ್ಲೂ ರಮ್ಯಾ ವಿರುದ್ಧ ಆಡಿದ ಮಾತುಗಳನ್ನು ಸಮರ್ಥಿಸಿಕೊಂಡ ಅಂಬಿ, ಚುನಾವಣೆಗೆ ಮೂರು ದಿನ ಇರುವಾಗಷ್ಟೇ ಮುಖ್ಯಮಂತ್ರಿ ಸಿದ್ದರಾಮಯ್ಯ ಪರಮೇಶ್ವರ್ ಅವರೊಂದಿಗೆ ಸಿಲ್ವರ್ ಜ್ಯೂಬಿಲಿ ಪಾರ್ಕ್‌ನಲ್ಲಿ ನಡೆದ ಸಭೆಯಲ್ಲಿ ಮಾತ್ರ ಭಾಗವಹಿಸಿದ್ದರು. ಉಳಿದ ಎರಡು ದಿನಗಳಲ್ಲಿ ಬೆಂಗಳೂರು ದಕ್ಷಿಣ ಕ್ಷೇತ್ರದಲ್ಲಿ ನಂದನ್ ನಿಲೇಕಣಿ ಹಾಗೂ ದಾವಣಗೆರೆಯಲ್ಲಿ ಮಲ್ಲಿಕಾರ್ಜುನ್ ಪರ ಅಂಬಿ ಪ್ರಚಾರ ಮಾಡಿದ್ದರು. ರಮ್ಯಾ ಬಗ್ಗೆ ಒಳಗೊಳಗೆ ಮುನಿಸಿಕೊಂಡಿದ್ದರಿಂದಲೇ ಅಂಬಿ ಕಾಟಾಚಾರಕ್ಕೆ ಒಂದು ದಿನ ಮಾತ್ರ ಪ್ರಚಾರ ಮಾಡಿ ಸುಮ್ಮನಾಗಿದ್ದರು.

ತುಪ್ಪ ಸುರಿದ ಕೃಷ್ಣ

ಈ ಮಧ್ಯೆ ರಮ್ಯಾಳ ರಾಜಕೀಯ ಗುರು ಎಸ್.ಎಂ.ಕೃಷ್ಣ ರಮ್ಯಾ ಪರವಾಗಿ ಮಂಡ್ಯ, ನಾಗಮಂಗಲದಲ್ಲಿ ಪ್ರಚಾರ ಮಾಡಿದರು. ಪ್ರಚಾರದ ಅಂತಿಮ ದಿನ ರವೀಂದ್ರ ಶ್ರೀಕಂಠಯ್ಯ ಶ್ರೀರಂಗಪಟ್ಟಣದಲ್ಲಿ ಸೇರಿಸಿದ್ದ ಭಾರಿ ಜನಸ್ತೋಮ ನೋಡಿ ಖುಷಿಯಾದ ಕೃಷ್ಣ "ನಿಜವಾದ ಜನನಾಯಕ ಎಂದರೆ ಹೀಗಿರಬೇಕು" ಎಂದು ತನ್ನ ಬಣದ ರವೀಂದ್ರ ಶ್ರೀಕಂಠಯ್ಯನನ್ನು ಹಾಡಿ ಹೊಗಳಿಬಿಟ್ಟರು.





ಕಳೆದ ವಿಧಾನಸಭಾ ಚುನಾವಣೆಯಲ್ಲಿ ಅಂಬಿ ತನ್ನ ಶಿಷ್ಯನಿಗೆ ಟಿಕೆಟ್ ತಪ್ಪಿಸಿದ್ದನ್ನೇ ಮನಸ್ಸಿನಲ್ಲಿಟ್ಟುಕೊಂಡಿದ್ದ ಕೃಷ್ಣ "ಕೆಲ ನಾಯಕರ ಕುತಂತ್ರದಿಂದ ಶ್ರೀರಂಗಪಟ್ಟಣ ಕ್ಷೇತ್ರ ಕಾಂಗ್ರೆಸ್ ಪಕ್ಷದ ಪಾಲಾಗುವುದು ತಪ್ಪಿತು" ಎಂದು ಅಂಬಿ ಹೆಸರೇಳದೆ ವಾಗ್ದಾಳಿ ನಡೆಸಿದರು. ರಮ್ಯಾ ವಿರುದ್ಧ ಮೊದಲೇ ಕೋಪದಿಂದ ಕುದಿಯುತ್ತಿದ್ದ ಅಂಬಿ ಬೆಂಬಲಿಗರಿಗೆ ಕೃಷ್ಣರ ಹೇಳಿಕೆ ಮತ್ತಷ್ಟು ಉಗ್ರರಾಗುವಂತೆ ಮಾಡಿತು. ಕೃಷ್ಣರಂತಹ ಹಿರಿಯ, ಮುತ್ಸದ್ಧಿ ರಾಜಕಾರಣಿ ಚುನಾವಣೆಯ ಸಂದರ್ಭದಲ್ಲಿ ಯಾಕೆ ಈ ರೀತಿ ಉರಿಯುವ ಬೆಂಕಿಗೆ ತುಪ್ಪ ಸುರಿಯುವ ಹೇಳಿಕೆ ನೀಡಿದರೋ ಎಂದು ಜನರೇ ಮಾತನಾಡಿಕೊಳ್ಳುವಂತಾಯಿತು. ಇದಾದನಂತರ ಸಂಪೂರ್ಣ ಸಿಟ್ಟಾದ ಅಂಬಿ ಬೆಂಬಲಿಗರು ಚುನಾವಣೆಯಲ್ಲಿ ರಮ್ಯಾರಿಗೆ 'ಕೈ' ಕೊಟ್ಟು ಜೆಡಿಎಸ್ ಅಭ್ಯರ್ಥಿ ಪುಟ್ಟರಾಜುಗೆ ಸಹಕಾರ ನೀಡಿಬಿಟ್ಟರು. ಮತಗಟ್ಟೆಯಲ್ಲಿ ತೋರಿಕೆಗಷ್ಟೇ ನಿಂತಿದ್ದ ಕೆಲ ಅಂಬಿ ಬೆಂಬಲಿಗರು ರಮ್ಯಾ ಪರ ಮತ ಕೇಳದೆ ಸುಮ್ಮನಾದರೆ, ಮತ್ತೆ ಕೆಲ ಬೆಂಬಲಿಗರು ಬಹಿರಂಗವಾಗಿಯೇ ಪುಟ್ಟರಾಜು ಪರ ಮತ ಹಾಕಿಸಿ ರಮ್ಯಾ ವಿರುದ್ಧ ಮುಯ್ಯಿ ತೀರಿಸಿಕೊಂಡರು.

ಗಳಗಳನೆ ಅತ್ತ ರಮ್ಯಾ

ಸಂಸದೆಯಾಗಿ ಮತ್ತೆ ಪುನರಾಯ್ಕೆ ಆಗುವ ವಿಶ್ವಾಸದಲ್ಲಿಯೇ ಚುನಾವಣೆ ಎದುರಿಸಿದ್ದ ರಮ್ಯಾ ಮತದಾನದ ದಿನ ಮಂಡ್ಯ, ಕೆ.ಆರ್.ಪೇಟೆ, ಕೆ.ಆರ್.ನಗರ, ಶ್ರೀರಂಗಪಟ್ಟಣ ಮೊದಲಾದ ಕಡೆ ಸುತ್ತಿ ಬಂದಿದ್ದರು. ಆ ಪ್ರಕಾರ ಪ್ರತಿ ತಾಲ್ಲೂಕಿನಲ್ಲಿಯೂ ಅಂಬಿ ಮತ್ತು ಕೃಷ್ಣ ಬಣಗಳ ನಡುವಿನ ಗುದ್ದಾಟ ಈ ಬಾರಿಯ ಫಲಿತಾಂಶದ ಮೇಲೆ ಖಂಡಿತಾ ಪರಿಣಾಮ ಬೀರಲಿದೆ ಎಂಬ ಸತ್ಯ ರಮ್ಯಾಗೆ ಗೊತ್ತಾಗಿತ್ತು.

ಕೆ.ಆರ್.ಪೇಟೆಯಲ್ಲಿ ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್ ಕಾಂಗ್ರೆಸ್ ಮುಖಂಡ ಕಿಕ್ಕೇರಿ ಸುರೇಶ್ ವಿರುದ್ಧ ಬಹಿರಂಗವಾಗಿಯೇ ತೋಳೇರಿಸಿದ್ದನ್ನು ಕಂಡ ಮಾನವಂತ ಕೆ.ಆರ್.ಪೇಟೆ ಕೃಷ್ಣ ಕೂಡ ಬೇಸರಪಟ್ಟುಕೊಂಡರು. ರಮ್ಯಾ ಗೆದ್ದರೆ ಕೆ.ಬಿ.ಚಂದ್ರಶೇಖರನಿಗೆ ಎಲ್ಲಾ ಕ್ರೆಡಿಟ್ ಸೇರುತ್ತೆ ಎಂದುಕೊಂಡ ಕಿಕ್ಕೇರಿ ಸುರೇಶ್, ಕೃಷ್ಣ ಕೂಡ ರಮ್ಯಾ ಪರವಾಗಿ ಅಷ್ಟಾಗಿ ಕೆಲಸ ಮಾಡಲಿಲ್ಲ.

ಮದ್ದೂರಿನಲ್ಲಿ ಎಸ್.ಎಂ.ಕೃಷ್ಣರ ಅಣ್ಣನ ಮಗ ಗುರುಚರಣ್ ಹಾಗೂ ಮಧು ಮಾದೇಗೌಡರಿಗೆ ಅಷ್ಟಕಷ್ಟೆ. ಹಾಗಾಗಿ ಇಲ್ಲೂ ಕೂಡ ಈ ಬಾರಿ ಜೆಡಿಎಸ್‌ಗೆ ಲೀಡ್ ಎಂಬ ಪರಿಸ್ಥಿತಿ ನಿರ್ಮಾಣವಾಗಿದೆ. ನಾಗಮಂಗಲದಲ್ಲಿ ಮಾಜಿ ಶಾಸಕರಾದ ಕೆ.ಸುರೇಶ್‌ಗೌಡ ಮತ್ತು ಎಲ್.ಆರ್. ಶಿವರಾಮೇಗೌಡ ನಡುವಿನ ಮುನಿಸು ಗೊತ್ತಿರುವಂತದ್ದೇ. ಅಂಬಿ ಜೊತೆ ಚೆನ್ನಾಗಿರುವ ಶಿವರಾಮೇಗೌಡ ರಮ್ಯಾ ಪರ ಕಾಟಾಚಾರಕ್ಕಷ್ಟೇ ಪ್ರಚಾರದಲ್ಲಿ ಭಾಗಿಯಾಗಿದ್ದರು.

ಈ ಮಧ್ಯೆ ಅಂಬಿ ಬೆಂಬಲಿಗರಾದ ಅಮರಾವತಿ ಚಂದ್ರಶೇಖರ್, ಶೆಟ್ಟಹಳ್ಳಿ ಲಿಂಗರಾಜು, ಇಂಡುವಾಳು ಸಚ್ಚಿದಾನಂದ, ಎಲ್.ಡಿ.ರವಿ ಸೇರಿದಂತೆ ಇತರರು ಚುನಾವಣೆಯಲ್ಲಿ ತನ್ನ ಪರ ಕೆಲಸ ಮಾಡಿಲ್ಲ ಎಂಬುದನ್ನು ತಿಳಿದ ರಮ್ಯಾ ಗಳಗಳನೆ ಅಳುತ್ತಾ ಮತದಾನದಂದು ಕಾರು ಏರಿ ಬೆಂಗಳೂರಿಗೆ ಹೋದವರು ಇನ್ನೂ ಮಂಡ್ಯಕ್ಕೆ ಕಾಲಿಟ್ಟಿಲ್ಲ.

ಲೆಕ್ಕಾಚಾರ


ಮತದಾನದ ನಂತರದ ಚಿತ್ರಣವನ್ನು ನೋಡುವುದಾದರೆ, ಈ ಬಾರಿ ಮಂಡ್ಯದಿಂದ ಮತ್ತೆ ಗೆಲ್ಲುವುದು ಅಷ್ಟು ಸುಲಭವಲ್ಲ ಎಂಬ ಸತ್ಯ ರಮ್ಯಾಳಿಗೆ ಈಗಾಗಲೇ ಗೊತ್ತಾಗಿದೆ. ಜೆಡಿಎಸ್ ನಾಯಕರೆಲ್ಲ ಒಗ್ಗಟ್ಟಿನ ಮಂತ್ರ ಜಪಿಸಿದ್ದರಿಂದ ಖುಷಿಯಾದ ಕಾರ್ಯಕರ್ತರೆಲ್ಲಾ ಅಭ್ಯರ್ಥಿ ಪುಟ್ಟರಾಜುರವರ ಗೆಲುವಿಗೆ ಸಾಕಷ್ಟು ಬೆವರು ಹರಿಸಿದ್ದಾರೆ. ಚಲುವರಾಯಸ್ವಾಮಿ ನೇತೃತ್ವದಲ್ಲಿ ಚುನಾವಣೆ ಎದುರಿಸಿದ ಪುಟ್ಟರಾಜು ಕಾಂಗ್ರೆಸ್ ಅಭ್ಯರ್ಥಿ ರಮ್ಯಾಗಿಂತ ಹೆಚ್ಚು ಹಣ ಖರ್ಚು ಮಾಡಿರುವುದು ಕೂಡ ಪ್ಲಸ್ ಆಗಲಿದೆ. ಗುರುಚರಣ್ ಮತ್ತು ಮಧು ಮಾದೇಗೌಡ ಬಣಗಳ ನಡುವಿನ ಗುದ್ದಾಟದ ಲಾಭ ಪಡೆದ ಡಿ.ಸಿ.ತಮ್ಮಣ್ಣ ಮದ್ದೂರು ಕ್ಷೇತ್ರದಲ್ಲಿ ಪುಟ್ಟರಾಜು ಪರ ಭರ್ಜರಿ ಲೀಡ್ ಕೊಡಿಸಲಿದ್ದಾರೆಂಬುದು ಸಮೀಕ್ಷೆಗಳಿಂದ ತಿಳಿದುಬಂದಿದೆ. ಜೆಡಿಎಸ್ ಪ್ರತಿ ಬೂತ್‌ಗೆ 50 ಸಾವಿರ ಹಣ ಕೊಟ್ಟರೆ, ಕಾಂಗ್ರೆಸ್ ಕೇವಲ 15 ಸಾವಿರ ಹಣ ಕೊಟ್ಟಿದೆ. ಇನ್ನು ಬಹುತೇಕ ಕಡೆ ಮತಕ್ಕೆ 100 ರೂ.ನಂತೆ ಹಣ ಕೂಡ ಜೆಡಿಎಸ್ ಹಂಚಿದೆ. ಅದರಲ್ಲೂ ಈ ಬಾರಿ ಮತದಾರರಿಗೆ ಹೆಚ್ಚು ಹಣ ತಲುಪುವಂತೆ ನೋಡಿಕೊಂಡಿರುವ ಜೆಡಿಎಸ್ ಇದೇ ಲೆಕ್ಕಾಚಾರದಲ್ಲಿ ಈಗಾಗಲೇ ಗೆದ್ದಂತೆ ಬೀಗುತ್ತಿದೆ. ಜೆಡಿಎಸ್ ಕಾರ್ಯಕರ್ತರು ಕೋಟಿ ಕೋಟಿ ರೊಕ್ಕ ಹಿಡಿದುಕೊಂಡು ಪುಟ್ಟರಾಜು ಪರ ಬೆಟ್ಟಿಂಗ್‌ಗೆ ಇಳಿದಿರುವುದೇ ಈ ಬಾರಿ ಜೆಡಿಎಸ್‌ಗೆ ಗೆಲುವಿನ ಛಾನ್ಸ್ ಇದೇ ಎಂಬುದನ್ನು ತೋರಿಸುತ್ತದೆ.

ಮಂಡ್ಯ ನಗರಸಭೆಯ ಬಹುತೇಕ ಸದಸ್ಯರು ಅಂಬಿ ಬೆಂಬಲಿಗರಾಗಿದ್ದು, ಮತದಾರರಿಗೆ ಹಂಚಲೆಂದು ಕೊಟ್ಟ ಹಣವನ್ನು ತಾವೇ ಪಿನ್ ಮಾಡಿ ರಮ್ಯಾಗೆ ಕೈಕೊಟ್ಟ ಸುದ್ದಿಯೂ ಜೋರಾಗಿ ಶಬ್ದ ಮಾಡಿದೆ. "ಅಂಬರೀಶಣ್ಣನಿಗೆ ರಮ್ಯಾ ಈಗ್ಲೇ ಗೌರವ ಕೊಡೋಲ್ಲ, ಇನ್ನು ಈ ಬಾರಿಯೂ ಗೆದ್ದರೆ ಅಷ್ಟೇ" ಎನ್ನುವ ಮಾತುಗಳನ್ನಾಡುತ್ತಿದ್ದ ಅಂಬಿ ಬೆಂಬಲಿಗರು ರಮ್ಯಾಗೆ ಸರಿಯಾಗಿಯೇ ಕೈ ಕೊಟ್ಟಿದ್ದಾರೆ.

ಇಷ್ಟಿದ್ದರೂ ಎಲ್ಲೋ ಒಂದು ಕಡೆ ಸಿನಿಮಾ ನಟಿಯೆಂಬ ಕಾರಣಕ್ಕೆ ರಮ್ಯಾರನ್ನು ಹೆಚ್ಚಿನ ಪ್ರಮಾಣದಲ್ಲಿ ಮಹಿಳಾ ಮತದಾರರು, ಯುವಜನತೆ ಕೈ ಹಿಡಿದಿದ್ದಾರೆಂಬ ತರ್ಕವೂ ಕೇಳಿಬರುತ್ತಿದೆ. ಅಂಬಿ ಬೆಂಬಲಿಗರು ರಮ್ಯಾಗೆ ಈ ಬಾರಿ ಕೈಕೊಡುತ್ತಾರೆಂಬುದನ್ನು ಅರಿತ ಮತದಾರರು ರಮ್ಯಾ ಪರ ಅನುಕಂಪ ತೋರಿದ್ದಾರೆ. ಕಳೆದ ಚುನಾವಣೆಯಲ್ಲಿ ಮೇಲುಕೋಟೆ ಹೊರತುಪಡಿಸಿ ಮಂಡ್ಯ, ಶ್ರೀರಂಗಪಟ್ಟಣ, ನಾಗಮಂಗಲ, ಮದ್ದೂರು, ಮಳವಳ್ಳಿ, ಕೆ.ಆರ್.ನಗರ, ಕೆ.ಆರ್.ಪೇಟೆ ತಾಲ್ಲೂಕುಗಳಲ್ಲಿ ಕಾಂಗ್ರೆಸ್‌ಗೆ ಲೀಡ್ ಸಿಕ್ಕಿತ್ತು. ಕಳೆದ ಬಾರಿ 9,42,453 ಮತಗಳ (ಶೇ.58.51) ಚಲಾವಣೆ ನಡೆದಿದ್ದರೆ, ಈ ಬಾರಿ 11,91,708 (ಶೇ.71.42) ಮತಗಳು ಚಲಾವಣೆಯಾಗಿವೆ. ಮೇಲುಕೋಟೆ ಕ್ಷೇತ್ರದಲ್ಲಿ ದಾಖಲೆಯ ಶೇ.78.33ರಷ್ಟು ಮತದಾನ ನಡೆದಿದ್ದು, ಎರಡು ಬಾರಿ ಸೋತಿರುವ ಪುಟ್ಟರಾಜು ಇದೇ ಕ್ಷೇತ್ರಕ್ಕೆ ಸೇರಿರುವ ಹಿನ್ನೆಲೆಯಲ್ಲಿ ಹೆಚ್ಚಿನ ಮತದಾರರ ಒಲವು ಗಳಿಸಲಿದ್ದಾರೆ.



ಇನ್ನು ಮಳವಳ್ಳಿಯಲ್ಲಿ ಉಪ ಚುನಾವಣೆಯಲ್ಲಿ ರಮ್ಯಾಗೆ 23 ಸಾವಿರ ಮತಗಳ ಲೀಡ್ ಕೊಡಿಸಿದ್ದ ಶಾಸಕ ಪಿ.ಎಂ.ನರೇಂದ್ರಸ್ವಾಮಿ ಈ ಬಾರಿಯೂ ಅಷ್ಟೇ ಪ್ರಮಾಣದ ಲೀಡ್ ಕೊಡಿಸಲು ಪ್ರಯತ್ನ ನಡೆಸಿದ್ದರು. ಆದರೆ ಈ ಬಾರಿ ಅಷ್ಟು ಲೀಡ್ ಕೊಡಿಸುವುದು ಸಾಧ್ಯವಿಲ್ಲವಾದರೂ ಇಲ್ಲಿ ಕಾಂಗ್ರೆಸ್‌ನ ರಮ್ಯಾ ಮುನ್ನಡೆ ಸಾಧಿಸಲಿದ್ದಾರೆ.




"ಏನೇ ಆದರೂ ಜೆಡಿಎಸ್ ಕಳೆದ ಬಾರಿ ರಮ್ಯಾ ಪಡೆದಿದ್ದ 67,611 ಮತಗಳ ಲೀಡ್‌ನ್ನು ಕಡಿಮೆ ಮಾಡಿ ಗೆಲ್ಲಲು ಸಾಧ್ಯವೇ?" ಎಂಬ ಅಭಿಪ್ರಾಯಗಳು ಕೂಡ ಕ್ಷೇತ್ರದಲ್ಲಿ ಕೇಳಿಬರುತ್ತಿವೆ. ಆಡಳಿತ ಪಕ್ಷದ ಸಾಧನೆ, ಅಹಿಂದ ಮತದಾರರ ಬೆಂಬಲ, ಸಿನಿಮಾ ನಟಿಯೆಂಬ ಗ್ಲಾಮರ್ ಎಲ್ಲವೂ ಸೇರಿ ರಮ್ಯಾ 'ಕೈ' ಹಿಡಿಯುತ್ತವೆ ಎಂಬ ನಂಬಿಕೆ ಕಾಂಗ್ರೆಸ್ ಕಾರ್ಯಕರ್ತರದ್ದಾಗಿದ್ದರೆ, ಜೆಡಿಎಸ್ ನಾಯಕರ ಒಗ್ಗಟ್ಟು, ಕ್ಷೇತ್ರದಲ್ಲಿ ಹಂಚಿದ ಹಣ, ಎರಡು ಬಾರಿ ಸೋತಿರುವ ಅನುಕಂಪ ಸಿ.ಎಸ್.ಪುಟ್ಟರಾಜುಗೆ ವರದಾನವಾಗಲಿದೆ ಎಂಬ ಅತೀವಾದ ವಿಶ್ವಾಸ ಜೆಡಿಎಸ್ ಕಾರ್ಯಕರ್ತರದ್ದಾಗಿದೆ.

ಬಿಜೆಪಿಯಿಂದ ಸ್ಪರ್ಧಿಸಿದ್ದ ದುಡ್ಡಿನ ಕುಳ ಬಿ.ಶಿವಲಿಂಗಯ್ಯ 'ಮೋದಿ ಅಲೆ'ಯಲ್ಲಿ ಗೆದ್ದು ಬರುವ ಯಾವ ಸನ್ನಿವೇಶವೂ ಕ್ಷೇತ್ರದಲ್ಲಿ ನಿರ್ಮಾಣವಾಗಲಿಲ್ಲ. ಪಟ್ಟಣ ಪ್ರದೇಶಗಳಲ್ಲಿ ಬಿಜೆಪಿಗೆ ಒಂದಷ್ಟು ಮತಗಳು ಬರಬಹುದೇ ಹೊರತು ಗ್ರಾಮೀಣ ಭಾಗದಲ್ಲಿ ಮೋದಿ ಹೆಸರೇ ಗೊತ್ತಿಲ್ಲ. ಹಾಗಾಗಿ ಬಿಜೆಪಿಗೆ ಮೂರನೇ ಸ್ಥಾನ ಗ್ಯಾರಂಟಿಯಾಗಿದೆ.

ಈ ಬಾರಿ ಜೆಡಿಎಸ್‌ನ ಪುಟ್ಟರಾಜು ಹಾಗೂ ಕಾಂಗ್ರೆಸ್‌ನ ರಮ್ಯಾ ನೇರ ಹಣಾಹಣಿ ಏರ್ಪಟ್ಟಿದ್ದು ಯಾರೇ ಗೆದ್ದರೂ 15ರಿಂದ 20 ಸಾವಿರ ಅಂತರ ಎನ್ನಲಾಗುತ್ತಿದೆ. ಈ ಎಲ್ಲಾ ವಿಶ್ಲೇಷಣೆಗಳಿಗೆ ಮೇ 16ರ ಮತ ಎಣಿಕೆಯ ದಿನ ಉತ್ತರ ದೊರೆಯಲಿದೆ.

● ಮಂಡ್ಯ ನಾಗೇಶ್

ಪಂಕ್ತಿಭೇದ: ಅದೇ ರಾಗ, ಅದೇ ಹಾಡು



ಭೇದ (ನಾಮವಾಚಕ) 1.ಒಡೆಯುವುದು 2.ಬಿರುಕು 3. ವ್ಯತ್ಯಾಸ 4. ಬಗೆ 5. ಬದಲಾವಣೆ 6. ಗುಟ್ಟನ್ನು ರಟ್ಟುಮಾಡುವುದು 7.ಭಿನ್ನಾಭಿಪ್ರಾಯ 8. ಚತುರೋಪಾಯಗಳಲ್ಲಿ ಒಂದು: ಒಡಕು ಹುಟ್ಟಿಸುವುದು (ಪುಟ 225, ಕನ್ನಡ ರತ್ನಕೋಶ, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, 2001)


* * *

"ಹಿಂದೂಗಳಿಗೆ ಪೂಜ್ಯವಾಗಿರುವ ಧಾರ್ಮಿಕ ನಂಬಿಕೆ, ಕಟ್ಟುಪಾಡುಗಳ ಪ್ರಕಾರ ಸಹಪಂಕ್ತಿಭೋಜನ ಮತ್ತು ಅಂತರ್ಜಾತೀಯ ವಿವಾಹಗಳು ಅಸಹ್ಯವಾದ ಆಚರಣೆಗಳಾಗಿರುವ ಏಕೈಕ ಕಾರಣಕ್ಕಾಗಿ ಅವರು ಆಚರಣೆಗಳನ್ನು ನಿರಾಕರಿಸುತ್ತಿದ್ದಾರೆ. ಜಾತಿಯು ಕಲ್ಲಿನ ಗೋಡೆ ಅಥವಾ ಮುಳ್ಳುತಂತಿಯ ಬೇಲಿಯ ಹಾಗೆ ಕಿತ್ತೆಸೆಯಬಹುದಾದ ಭೌತಿಕ ತಡೆಯಲ್ಲ; ಅದೊಂದು ಮನೋಸ್ಥಿತಿ. ಹಾಗಾಗಿ ಜಾತಿವಿನಾಶವು ಭೌತಿಕ ತಡೆಯ ನಾಶವಲ್ಲ; ಅದು ಹಿಂದೂಗಳ ಮನೋಧರ್ಮದಲ್ಲಿ ಆಗಬೇಕಾಗಿರುವ ಬದಲಾವಣೆ. ಜಾತಿ ಕೆಟ್ಟದು, ಇದರಿಂದಾಗಿ ಮನುಷ್ಯ ತನ್ನ ಸಹಜೀವಿಗಳನ್ನೇ ಅಮಾನವೀಯವಾಗಿ ನಡೆಸಿಕೊಳ್ಳುತ್ತಾನೆ, ಇವೆಲ್ಲ ಸರಿ. ಆದರೆ ಹಿಂದೂಗಳು ತುಂಬು ಧಾರ್ಮಿಕ ಶ್ರದ್ಧೆಯುಳ್ಳವರಾಗಿ ಜಾತಿಪದ್ಧತಿಯನ್ನು ಆಚರಿಸುತ್ತಿದ್ದಾರೆಯೇ ವಿನಃ, ಮತಿಹೀನರೂ, ಅಮಾನವೀಯರೂ ಆಗಿರುವುದರಿಂದ ಅಲ್ಲ, ಜನ ಜಾತಿಮನೋಭಾವ ಹೊಂದಿರುವುದು ತಪ್ಪಲ್ಲ; ತಪ್ಪಿರುವುದು ಜಾತಿಯತೆಯನ್ನು ಬಿತ್ತುವ ಹಿಂದೂ ಧರ್ಮದಲ್ಲಿ. ಈ ನಿಲುವು ಸರಿ ಎಂದಾದರೆ, ಜಾತಿಯತೆಯನ್ನು ಆಚರಿಸುವ ಜನ ನಿಮ್ಮ ಶತ್ರುಗಳಲ್ಲ; ಜನರಿಗೆ ಜಾತಿಯತೆಯ ಧರ್ಮವನ್ನು ಭೋದಿಸುವ ಶಾಸ್ತ್ರಗಳು ನಿಮ್ಮ ನಿಜವಾದ ಶತ್ರುಗಳು; ನೀವು ಈ ಶಾಸ್ತ್ರಗಳನ್ನು ಎದುರಿಸಬೇಕಾಗಿದೆ." (ಪುಟ 41-42, ಅಂಬೇಡ್ಕರ್ ಅವರ ಆಯ್ದ ಬರಹಗಳು, ಅಕ್ಷರ ಪ್ರಕಾಶನ, ಹೆಗ್ಗೋಡು, 2009)

ನಾನು ವರದಿ ಮಾಡಲಿರುವ ಘಟನೆಗೆ ಈ ಬಗೆಯ ಮುನ್ನುಡಿಯೇ! ಎಂದು ದಯವಿಟ್ಟು ಮೂಗು ಮುರಿಯಬೇಡಿ. ಒಂದು ಘಟನೆಯನ್ನು ನಾವಾಡುವ ಭಾಷೆಯ ಎಲ್ಲಾ ಅರ್ಥದಲ್ಲಿ, ನಾವು ಬದುಕುತ್ತಿರುವ ಸಮಾಜವನ್ನು ಚಿತ್ರವತ್ತಾಗಿ ನಿರೂಪಿಸುವ ಜ್ಞಾನದ ಬೆಳಕಲ್ಲಿ ಓದದೇ ಹೋದರೆ, ಘಟನೆಯಲ್ಲಿ ಪಾಲ್ಗೊಂಡವರ ಅಭಿಮಾನ-ಅಪಮಾನಗಳೂ, ಘಟನೆಯ ಸೂತ್ರಧಾರಿಗಳ ಅಧಿಕಾರ ಚಲಾವಣೆಯ ವಿಧಾನಗಳೂ ಅರಿವಾಗುವುದಿಲ್ಲ.

* * *

ಇದೇ ಏಪ್ರಿಲ್ 15ರಂದು, ಕರ್ನಾಟಕದ ಕರಾವಳಿ ಭಾಗದಲ್ಲಿ 'ಸೌರಮಾನ ಯುಗಾದಿ'ಯಾಗಿ ಆಸ್ತಿಕರು ಆಚರಿಸಿದರು. ಕರ್ನಾಟಕದ ಬಹುತೇಕ ಭಾಗಗಳಲ್ಲಿ ಯುಗಾದಿ ಎಂದರೆ 'ಚಂದ್ರಮಾನ ಯುಗಾದಿ' ಯಾಗಿರುವುದರಿಂದ, ಕರಾವಳಿಯ ಉದ್ಯೋಗಸ್ಥರಿಗೆ ರಜೆ ಇರಲಿಲ್ಲ, ಹಾಗಾಗಿ ಮಣಿಪಾಲ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಅಲೈಡ್ ಹೆಲ್ತ್ ಸೈನ್ಸಸ್‌ನಲ್ಲಿ ಸಹ ಅಧ್ಯಾಪಕಿಯಾಗಿರುವ ಶ್ರೀಮತಿ ವನಿತ ಶೆಟ್ಟಿಯವರಿಗೂ ರಜೆ ಇರಲಿಲ್ಲ, ಅವರು, ತಮ್ಮ ಊಟದ ಬಿಡುವಿನ ವೇಳೆಯಲ್ಲಿ, ಹಬ್ಬದ ದಿನ 'ದೇವರ ಪ್ರಸಾದ' ಸ್ವೀಕರಿಸುವ ಸಲುವಾಗಿ, ತಮ್ಮ ಇಬ್ಬರು ಸಹೋದ್ಯೋಗಿಗಳ ಜೊತೆ ಉಡುಪಿಯ ಶ್ರೀಕೃಷ್ಣ ದೇವಸ್ಥಾನದ ಸಾರ್ವಜನಿಕ ಭೋಜನಾಲಯದ ಕೆಳ ಅಂತಸ್ತಿನ ಪಂಕ್ತಿಯಲ್ಲಿ ಹೋಗಿ ಕುಳಿತರು. ಎಲೆ ಹಾಕಿ ಬಡಿಸುವ ಹೊತ್ತಿಗೆ, ಬಡಿಸುವ ಒಬ್ಬ ಬ್ರಾಹ್ಮಣ ಯುವಕ ಬಂದು ವನಿತ ಶೆಟ್ಟಿಯವರಿಗೆ "ನಿಮ್ಮ ಮಠ ಯಾವುದು?" ಎಂದು ಕೇಳಿದ. ಅವರು ತಮಗೆ ಯಾವ ಮಠವೂ ಇಲ್ಲ ಎಂದು ತಿಳಿಸಿದರು. ಆಗ ಆತ "ನಿಮ್ಮ ಜಾತಿ ಯಾವುದು?" ಎಂದು ಕೇಳಿದ. ಆಗ ವನಿತ ತಾವು ಬಂಟರು ಎಂದು ಪ್ರಾಮಾಣಿಕವಾಗಿಯೇ ಹೇಳಿದರು. ಆತ "ಇಲ್ಲಿ ನಿಮಗೆ ಸ್ಥಾನವಿಲ್ಲ, ಎದ್ದು ಹೋಗಿ" ಎಂದು ಎಬ್ಬಿಸಿ ಹೊರಗೆ ಕಳಿಸಿದ. ಸಾರ್ವಜನಿಕವಾಗಿ ಅವಮಾನಕ್ಕೊಳಗಾದ ವನಿತ, ಮನೆಗೆ ಬಂದು ಮಠದ ಟ್ರಸ್ಟಿಗೆ ಫೋನು ಮಾಡಿ ತಮಗಾದ ಅವಮಾನವನ್ನು ತಿಳಿಸಿದರು. ಆ ಟ್ರಸ್ಟಿ "ಏನೋ ಆಕಸ್ಮಿಕವಾಗಿದೆ. ದಯವಿಟ್ಟು ಈ ವಿಷಯ ಸಾರ್ವಜನಿಕಗೊಳಿಸಬೇಡಿ" ಎಂಬ ಸಮಜಾಯಿಷಿ ನೀಡಿ ಸಮಾಧಾನಪಡಿಸಲು ನೋಡಿದ. ಆದರೆ, ಅವಮಾನಿತರಾದ ವನಿತ ಹಾಗು ಅವರ ಪತಿ ನಿತ್ಯಾನಂದ ಶೆಟ್ಟಿ ಅವರಿಗೆ ಸಮಾಧಾನವಾಗದೆ, ತಮಗಾದ ಅವಮಾನವನ್ನು ಸಾರ್ವಜನಿಕಗೊಳಿಸಲು ನಿರ್ಧರಿಸಿದರು. ತಮ್ಮ ಹಿತೈಷಿಗಳ ಮೂಲಕ ಕರ್ನಾಟಕ ದಲಿತ ಸಂಘರ್ಷ ಸಮಿತಿ (ರಿ) ಹಾಗು ಕರ್ನಾಟಕ ಕೋಮು ಸೌಹಾರ್ದ ವೇದಿಕೆಗಳ ಉಡುಪಿ ಜಿಲ್ಲಾ ಘಟಕಗಳನ್ನು ಸಂಪರ್ಕಿಸಿದರು. ಸಂಘಟನೆಯ ಕಾರ್ಯಕರ್ತರು ಮಾಧ್ಯಮಗಳಿಗೆ ಘಟನೆಯ ವಿವರಗಳನ್ನು ತಿಳಿಸಿದರು. ಆಗ 'ಪಂಕ್ತಿಭೇದ'ದ 'ಗುಟ್ಟು' ರಟ್ಟಾಯಿತು. ದಿನಾಂಕ 17ರಂದು ಲೋಕಸಭಾ ಚುನಾವಣೆಯ ಮತದಾನವಿದ್ದುದ್ದರಿಂದ, ಕ.ದ.ಸಂ.ಸ.(ರಿ) ಹಾಗು ಕ.ಕೋ.ಸೌ.ವೇ. "ಉಡುಪಿ ಜಿಲ್ಲಾ ಘಟಕಗಳು ದಿನಾಂಕ 19.4.2014ರ ಶನಿವಾರದಂದು ಪ್ರಸ್ತುತ ಘಟನೆಯನ್ನು ವಿರೋಧಿಸಿ ಸಾರ್ವಜನಿಕ ಪ್ರತಿಭಟನೆ





ನಡೆಸಿದರು. ಆ ಸಭೆಗೆ ಬಂದಿದ್ದ ನಿತ್ಯಾನಂದ ಶೆಟ್ಟಿಯವರು ಮಾಧ್ಯಮಗಳಿಗೆ ಘಟನೆಯ ವಾಸ್ತವಿಕ ವಿವರಗಳನ್ನು ತಿಳಿಸಿದರು. ಕರ್ನಾಟಕ ಕೋಮು ಸೌಹಾರ್ದ ವೇದಿಕೆಯ ಅಧ್ಯಕ್ಷರಾದ ಜಿ.ರಾಜಶೇಖರ್ ಹಾಗು ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಸಂಚಾಲಕರಾದ ಜಯನ್ ಮಲ್ಪೆಯವರು ಉಡುಪಿಯ ಶ್ರೀಕೃಷ್ಣ ದೇವಸ್ಥಾನದಲ್ಲಿ ನಡೆಯುತ್ತಿರುವ ಪಂಕ್ತಿಭೇದದ ಇತಿಹಾಸವನ್ನು ಸೋದಾಹರಣವಾಗಿ ವಿವರಿಸಿದರು.

1934ರಲ್ಲಿ ಉಡುಪಿಗೆ ಬಂದಿದ್ದ ಗಾಂಧೀಜಿಯವರನ್ನು ಶ್ರೀಕೃಷ್ಣ ದೇವಸ್ಥಾನಕ್ಕೆ ಕರೆದುಕೊಂಡು ಹೋದಾಗ, ದೇವಸ್ಥಾನ ಪ್ರವೇಶಿಸುವುದಕ್ಕೆ ಮುಂಚೆ ಗಾಂಧಿ "ಇಲ್ಲಿ ಹರಿಜನರಿಗೆ ಪ್ರವೇಶವಿದೆಯೇ?" ಎಂದು ಕೇಳಿದರು; ಅಲ್ಲಿ ಹರಿಜನರಿಗೆ ಪ್ರವೇಶವಿಲ್ಲ ಎಂಬ ವಾಸ್ತವ ಅರಿತ ಗಾಂಧೀಜಿ ತಾನೂ ಆ ದೇವಸ್ಥಾನಕ್ಕೆ ಹೋಗಲಾರೆ ಎಂದು ಹಿಂದಿರುಗಿದ ವಿದ್ಯಮಾನವನ್ನು ಜಿ.ರಾಜಶೇಖರ್ ವಿವರಿಸಿದರು.

"ಹಿಂದೂತ್ವದ ಪರವಾಗಿ ಪ್ರಚಾರ ಮಾಡುವ, ಹರಿಜನ ಕೇರಿಗಳಿಗೆ ಹೋಗಿ ದೀಕ್ಷೆ ಕೊಡುತ್ತೇನೆನ್ನುವ ಪೇಜಾವರ ಮಠದ ಸ್ವಾಮಿಗಳು, ಈ ಘಟನೆಯ ಬಗ್ಗೆ ಏನು ಹೇಳುತ್ತಾರೆ" ಎಂದು ಜಯನ್ ಮಲ್ಪೆ ಸವಾಲು ಹಾಕಿದರು.

ಈ ಪ್ರತಿಭಟನೆಯ ವರದಿ ಮಾಧ್ಯಮಗಳಲ್ಲಿ ವರದಿಯಾಗುತ್ತಿದ್ದಂತೆಯೇ, ಮೈಸೂರಿನಲ್ಲಿದ್ದ ಪೇಜಾವರ ಶ್ರೀಗಳು ತಾವು ಉಡುಪಿಗೆ ವಾಪಸು ಹೋದ ನಂತರ ವ್ಯವಸ್ಥೆ ಸರಿಪಡಿಸುವುದಾಗಿ ಹೇಳಿಕೆ ನೀಡಿದರು. ತಮ್ಮ ಸಮುದಾಯಕ್ಕೆ ಸೇರಿದ ವ್ಯಕ್ತಿಯೊಬ್ಬರಿಗೆ ಆದ ಅವಮಾನಕ್ಕೆ ಪ್ರತಿಕ್ರಿಯೆಯಾಗಿ ದಿ.21ರಂದು ಬಂಟರ ಸಂಘದವರು ಪತ್ರಿಕಾಗೋಷ್ಠಿ ನಡೆಸಿ ಪ್ರತಿಭಟಿದರು.

ಪ್ರತಿಭಟನೆಯ ಬಿಸಿ ತಾಗುತ್ತಿದ್ದ ಹಾಗೆಯೇ, ಈ ಬಾರಿಯ ಶ್ರೀಕೃಷ್ಣ ದೇವಸ್ಥಾನದ ಪರ್ಯಾಯ ಪೀಠಾಧೀಶರಾಗಿರುವ ಕಾಣಿಯೂರು ಮಠಾಧೀಶರು "ನಡೆದ ಘಟನೆಗೆ ವಿಷಾದ ವ್ಯಕ್ತಪಡಿಸುತ್ತೇವೆ. ಬಂಟರು ನಮ್ಮ ಬೆನ್ನೆಲುಬು. ಖುದ್ದಾಗಿ ಮಧ್ಯಪ್ರವೇಶಿಸಿ ಪರಿಸ್ಥಿತಿ ಸರಿಪಡಿಸುತ್ತೇವೆ" ಎಂದು ಹೇಳಿಕೆ ನೀಡಿದ್ದಾರೆ. ಇದಕ್ಕೆ ಪ್ರತಿಕ್ರಿಯೆಯಾಗಿ ಬಂಟರ ಮಠಾಧೀಶರೊಬ್ಬರು ತಾವು ಶ್ರೀಕೃಷ್ಣ ಮಠದ ಜೊತೆ ಮಾತುಕತೆ ನಡೆಸಿ ಪರಿಸ್ಥಿತಿ ಸರಿಪಡಿಸುತ್ತೇವೆ ಎಂದು ಅಪ್ಪಣೆ ಕೊಡಿಸಿದ್ದಾರೆ.

* * *

ಉಡುಪಿಯ ಅಷ್ಟಮಠಗಳಲ್ಲಿ ವಿವಿಧ ಬಗೆಯ 'ಪಂಕ್ತಿಭೇದ'ದ ಭೋಜನಾಚರಣೆಗಳಿವೆ. ಮಠಾಧೀಶರು ಹಾಗು ಆಸ್ಥಾನ ಪುರೋಹಿತರಿಗೆ ಮಾತ್ರ ಮೀಸಲಾದ ಭೋಜನ ವ್ಯವಸ್ಥೆ ಒಂದನೆಯದು. ವಿವಿಧ ಕರ್ಮ ಕಾರ್ಯಗಳನ್ನು ಮಾಡಿಸುವ ಬ್ರಾಹ್ಮಣರಿಗೆ ಹಾಗು ಪುರೋಹಿತರಿಗೆ ಮೀಸಲಾದ 'ಚೌಕಿ ಊಟ' ಎರಡನೆಯದು. ಈ ಎರಡೂ ಕಡೆಗಳಲ್ಲಿ ಇತರ ಬ್ರಾಹ್ಮಣರಿಗೂ ಪ್ರವೇಶವಿಲ್ಲ ಎನ್ನುವುದು ಬ್ರಾಹ್ಮಣರ ಸಮಾನತೆಯ ವಾದ! ಇರಲಿ. ಹಾಗೆಯೇ, ವಿವಿಧ ಮಠಗಳಲ್ಲಿ ಕಾರ್ಯ ಮಾಡಿಸಿದವರು ಆಹ್ವಾನಿತ ಅತಿಥಿಗಳಿಗೆ ನೀಡುವ ಭೋಜನ ವ್ಯವಸ್ಥೆ ಇದೆ. ಅಲ್ಲಿ, ಬಹಳ ನಾಜೂಕಿನಲ್ಲಿ, ಮುಂಡು (ಪಂಚೆ, ಧೋತ್ರ) ಉಟ್ಟುಕೊಂಡು, ಬರಿ ಮೈಯಲ್ಲಿ ಜನಿವಾರ ಝಳಪಿಸುವವರದೊಂದು ಪಂಕ್ತಿ ಹಾಗು 'ಪ್ಯಾಂಟು-ಷರ್ಟ'ನವರ ಮತ್ತೊಂದು ಪಂಕ್ತಿ ಎಂದು ವಿಂಗಡಿಸಲಾಗುತ್ತದೆ. ಎಷ್ಟೋ ಸಾರಿ ಈ 'ಪ್ಯಾಂಟು-ಷರ್ಟು' ಪಂಕ್ತಿಯಲ್ಲೂ ಬ್ರಾಹ್ಮಣರು- ಬ್ರಾಹ್ಮಣೇತರರು ಎಂಬ ನಾಜೂಕಿನಲ್ಲಿ ಊಟದೆಲೆಯ ಸಾಲುಗಳನ್ನು ಹಾಕಲಾಗುತ್ತದೆ. ಇದೆಲ್ಲಾ, ಅಭ್ಯಾಗತರು-ಅತಿಥಿಗಳ ನಡುವಿನ ವ್ಯವಹಾರ ಎಂದು ಸಮಾಧಾನಿಸಬಹುದು. ಆದರೆ, ಪರ್ಯಾಯ ಮಠಾಧೀಶರ ಉಸ್ತುವಾರಿಯಲ್ಲಿ ನಡೆಯುವ ಸಾರ್ವಜನಿಕ ಭೋಜನಶಾಲೆಯ ವ್ಯವಸ್ಥೆಯಲ್ಲಿ ಅಡಕವಾಗಿ ನಡೆಯುವ ಪಂಕ್ತಿಭೇದದ್ದೂ ಮಾತ್ರ ಭಿನ್ನ ಕಲೆ. ಕೆಳ ಅಂತಸ್ತಿನ ಪಂಕ್ತಿ ಬ್ರಾಹ್ಮಣರಿಗೆ; ಮೇಲಂತಸ್ತಿನ ಪಂಕ್ತಿ ಬ್ರಾಹ್ಮಣೇತರರಿಗೆ. ಇದು ಅಲಿಖಿತ ನಿಯಮ. ಕೆಳ ಅಂತಸ್ತಿನಲ್ಲಿ ಗಂಡಸರು ಅಂಗಿ ತೆಗೆದು ಜನಿವಾರ ತೋರಿಸಬೇಕು. ಇಲ್ಲದವರನ್ನು ವಿನಯಪೂರ್ವಕವಾಗಿ ಮೇಲಂತಸ್ತಿನ ಪಂಕ್ತಿಗೆ ಕಳಿಸಲಾಗುತ್ತದೆ.

ಮಹಿಳೆಯರ ಮಟ್ಟಿಗೆ ಇದು ಅಸಾಧ್ಯವಾದುದರಿಂದ, ಪಂಕ್ತಿಯಲ್ಲಿ ಕೂತವರನ್ನು ಹಲವು ಪರೀಕ್ಷೆಗಳಿಗೆ ಒಡ್ಡಲಾಗುತ್ತದೆ. ಬಿರುಬೀಸಾಗಿ ಕುಲಗೋತ್ರ ವಿಚಾರಿಸುವುದು ಒಂದು ಬಗೆ; ಆಡುವ ಮಾತಿನ ಭಾಷೆ-ಭಾಷಾ ಶೈಲಿಗಳಿಂದ ಗುರುತಿಸುವುದು ಮತ್ತೊಂದು ಬಗೆ. ಊಟ ಮಾಡುವ ಬಗೆಯ ನಯಗಾರಿಕೆಯನ್ನು ಕಾಣುವುದು ಮತ್ತೊಂದು ಬಗೆ.

ಸದರಿ ಲೇಖಕನಿಗೆ, ಒಬ್ಬ ಗೌಡ ಸಾರಸ್ವತ ಮಹಿಳೆ ಕೊಂಕಣಿ ಮಾತಾಡಿ ಹೊರಗಟ್ಟಿಸಿಕೊಂಡ ಅನುಭವವೂ, ಬ್ರಾಹ್ಮಣ ಮಹಿಳೆಯೊಟ್ಟಿಗೆ ಹೋಗಿ ತಾನು ಊಟ ಮಾಡುವ ಒರಟುತನದಲ್ಲೇ, ಜೊತೆಗಾತಿ ಬ್ರಾಹ್ಮಣತಿಗೆ ಫಜೀತಿ ತಂದ ಅನುಭವ ಕಥನವೂ ಕೇಳಿ ಅರಿವಿದೆ.


ವನಿತ ಶೆಟ್ಟಿಯವರಿಗೂ ಆದದ್ದೂ ಹಾಗೆಯೇ. ಅವರ ಸಹೋದ್ಯೋಗಿಯೊಬ್ಬರು ಬ್ರಾಹ್ಮಣರಾಗಿದ್ದರಿಂದ ಅವರ ಜೊತೆ ಇವರು ಕೆಳಗಿನ ಭೋಜನಶಾಲೆಗೆ ಹೋದರು. ಅಲ್ಲಿನ ಅಡುಗೆ ಭಟ್ಟರೊಬ್ಬರಿಗೆ ಇವರ ಪರಿಚಯವಿದ್ದು, ಬಡಿಸುವ ಯುವಕನಿಗೆ ಇವರ ಜಾತಿಯನ್ನು ತಿಳಿಸಿ, ಎಬ್ಬಿಸಿ ಕಳಿಸುವ ಸೂಚನೆ ನೀಡಿದ. ಆ ಯುವಕ ಯಥಾಪ್ರಕಾರ ತನ್ನ ಪರೀಕ್ಷಾ ಪ್ರಶ್ನೆಗಳನ್ನು ಪ್ರಯೋಗಿಸಿ ಎಬ್ಬಿಸಿ ಕಳಿಸಿದ.

ಇಲ್ಲಿ ಪೇಜಾವರ ಶ್ರೀಗಳೂ, ಕಾಣಿಯೂರು ಮಠಾಧೀಶರೂ ಯಾ ಬಂಟ ಮಠಾಧೀಶರು ಏನನ್ನು ಸರಿಪಡಿಸುತ್ತಾರೆ? ತನ್ನ ಧರ್ಮದ ನಂಬಿಕೆಯ ಪ್ರಕಾರ ಬ್ರಾಹ್ಮಣರ ಜೊತೆ ಇತರೆ ಜಾತಿಯವರು ಕೂತು ಉಣ್ಣುವುದು ತಪ್ಪು? ಎಂದು ಪ್ರಾಮಾಣಿಕವಾಗಿಯೇ ನಂಬಿ ವನಿತ ಅವರನ್ನು ಎಬ್ಬಿಸಿದ ಹೊಟ್ಟೆಪಾಡಿಗೆ ಮಾಣಿಯಾಗಿರುವ ಆ ಯುವಕನನ್ನು ಕೆಲಸದಿಂದ ತೆಗೆದು ಪ್ರಕರಣ ತಣ್ಣಗಾಗಿಸಿ ಪಂಕ್ತಿಭೇದದ ವ್ಯವಸ್ಥೆಯನ್ನು ನಯವಾದ ಮ್ಯಾನೇಜ್‌ಮೆಂಟ್ ಶೈಲಿಯಲ್ಲಿ ಜ್ಯಾರಿಯಲ್ಲಿ ಇಡುತ್ತಾರೋ? ಬಾರುಗಳಲ್ಲಿರುವ ಹಾಗೆ-ಸ್ಮೋಕರ್ಸ್ ವಿಭಾಗ, ನಾನ್‌ಸ್ಮೋಕಿಂಗ್ ವಿಭಾಗ- 'ಪ್ಲೀಸ್ ಸಾರ್-ಮ್ಯಾಡಂ! ದಟ್ ಸೈಡ್' ಅಂತ! ನೆನಪಿಡಿ ಕನ್ನಡ ಭಾಷೆಯಲ್ಲಿ 'ಭೇದ- ಚತುರೋಪಾಯಗಳಲ್ಲಿ ಒಂದು ಒಡಕು ಹುಟ್ಟಿಸುವುದು'.

ಸದ್ಯಕ್ಕಂತು ಮಠಾಧೀಶರು ಒಡಂಬಡಿಕೆ ಮಾಡಿಕೊಂಡು ಒಡಕನ್ನು ಜಾರಿಯಲ್ಲಿಡುವ ನಯವಾದ ಪಂಕ್ತಿಭೇದವನ್ನು ಜಾರಿ ಮಾಡಬಹುದು. ಆದರೆ "ಹಿಂದೂಗಳಿಗೆ ಪೂಜ್ಯವಾಗಿರುವ ಧಾರ್ಮಿಕ ನಂಬಿಕೆ, ಕಟ್ಟುಪಾಡುಗಳ ಪ್ರಕಾರ ಸಹಪಂಕ್ತಿಭೋಜನ ಮತ್ತು ಅಂತರ್ಜಾತೀಯ ವಿವಾಹಗಳು ಅಸಹ್ಯವಾದ ಆಚರಣೆಗಳಾಗಿರುವ ಏಕೈಕ ಕಾರಣಕ್ಕಾಗಿ ಅವರು ಆಚರಣೆಗಳನ್ನು ನಿರಾಕರಿಸುತ್ತಿದ್ದಾರೆ. ಜಾತಿಯು ಕಲ್ಲಿನ ಗೋಡೆ ಅಥವಾ ಮುಳ್ಳುತಂತಿಯ ಬೇಲಿಯ ಹಾಗೆ ಕಿತ್ತೆಸೆಯಬಹುದಾದ ಭೌತಿಕ ತಡೆಯಲ್ಲ; ಅದೊಂದು ಮನೋಸ್ಥಿತಿ. ಹಾಗಾಗಿ ಜಾತಿವಿನಾಶವು ಭೌತಿಕ ತಡೆಯ ನಾಶವಲ್ಲ; ಅದು ಹಿಂದೂಗಳ ಮನೋಧರ್ಮದಲ್ಲಿ ಆಗಬೇಕಾಗಿರುವ ಬದಲಾವಣೆ."

ಈ ಮನೋಧರ್ಮದ ಬದಲಾವಣೆಗೆ ಮಠಾಧೀಶರು ಶ್ರಮಿಸುತ್ತಾರೋ? ಅದು ಆಗೊದಿಲ್ಲ, ಪ್ರಜಾಪ್ರಭುತ್ವದಲ್ಲಿ ಸರಕಾರಗಳು ಮಧ್ಯಪ್ರವೇಶಿಸಿ, ಮನೋಧರ್ಮದ ಬದಲಾವಣೆಗೆ ತಕ್ಕುದಾದ ಶಾಸನ ರೂಪಿಸಬೇಕು. ಅಂಬೇಡ್ಕರ್ 'ಹಿಂದೂ ಕೋಡ್ ಬಿಲ್' ಮೂಲಕ ತರಲು ಹೊರಟಿದ್ದ ಸಾಮಾಜಿಕ ಸಂಕಲ್ಪ ಅಂಥದಾಗಿತ್ತು, ಅದನ್ನು ಎಲ್ಲಾ ರಾಜಕೀಯ ಪಕ್ಷಗಳೂ ಸೋಲಿಸಿದವು. ಈ ವಿದ್ಯಮಾನದ ಸಂದರ್ಭ ಅಂತಹ ಸಂಕಲ್ಪವನ್ನು ಜಾಗೃತಗೊಳಿಸುವುದು ಎಲ್ಲಾ ಬಗೆಯ ಚಳವಳಿಗಳ ಜವಾಬ್ದಾರಿ. ಚಳವಳಿಗಳು ತಯಾರಿವೆಯೋ?

● ಕೆ.ಫಣಿರಾಜ್



ಮೋದಿ ಮಾತಿಗೆ ನೀವಿದ್ರೂ ಸತ್ತಂಗೆಯ ಸಾ!

ಒಂದು ಜಾನಪದ ಕತೆ ಮೋದಿ ಮಹಾಶಯನಿಗೆ ಬರೆಸಿದಂತಿದೆಯಲ್ಲಾ, ಕಾಡಿನಲ್ಲೊಂದು ನರಿ ಇತ್ತಂತೆ. ತಡೆದುಕೊಳ್ಳಲಾರದ ಹಸಿವೆಯಿತ್ತಂತೆ. ಆಗ ಕಣ್ಣಿಗೆ ಹೆಣ್ಣುಗುರಿ ಕಾಣಿಸಿತಂತೆ. ಅದನ್ನು ತಿನ್ನಬೇಕಾದರೆ ಸುಲಭವಲ್ಲದ ಆ ಕಾಲದಲ್ಲಿ "ಈ ಕುರಿಮರಿಗೆ ...ಡೂ ವಾರಸುದಾರರಿಲ್ಲವೆ? ನನಗೆ ಸಾಯುವಷ್ಟು ...ವೆಯಾಗಿದೆ. ತಿನ್ನಬೇಕು" ಎಂದು ಕೂಗಿತಂತೆ. ಆಗ ...ದೇವಿ "ಆ ಕುರಿಮರಿಯ ವಾರಸುದಾರಳು ನಾನೇ ...ನೆ. ಅದನ್ನು ತಿನ್ನಬೇಕಾದರೆ ಹಣ ಕೊಡಬೇಕು. ...ದ್ದೀಯ?" ಎಂದಳಂತೆ. ಆದಕ್ಕೆ ನರಿ "ಆ ಕುರಿಮರಿ ...ತಿ ಶಕ್ತಿಗಳಿಸಿಕೊಂಡು ಹಣ ತಂದು ಕೊಡುತ್ತೇನೆ" ...ದು ಪ್ರಮಾಣ ಮಾಡಿತಂತೆ. ಅದಕ್ಕೆ ಭೂದೇವಿ ...ದಳಂತೆ. ಆ ಕೂಡಲೇ ನರಿ ಕುರಿಯ ಮೇಲೆ ಹಾರಿ ...ದು ತಿಂದಿತಂತೆ.

ಇದಾದನಂತರ ಇಲ್ಲಿದ್ದರೆ ಭೂದೇವಿ ಹಣ ...ತ್ತಾಳೆಂದು ಆ ಪ್ರಾಂತ್ಯವನ್ನೇ ಬಿಟ್ಟು ಉತ್ತರ ದಿಕ್ಕಿಗೆ ...ತಂತೆ. ಎಲ್ಲಿಗೆ ಹೋದರೂ ಭೂದೇವಿಯಿಂದ ...ಕೊಳ್ಳಲು ಸಾಧ್ಯವೇ? "ಎಲ್ಲಿ ಕುರಿಮರಿ ತಿಂದ ಹಣ?" ...ದನಿ ಭೂಮಿ ಒಡಲಿನಿಂದ ಬರತೊಡಗಿತಂತೆ. ...ದೇವಿಯು ಸಾಲ ವಸೂಲಾತಿ ದನಿಯಿಂದ ...ಕೊಳ್ಳಲು ನರಿ ಹಿಮಾಲಯದ ಕಡೆಗೆ ಓಡಿತಂತೆ. ...ಭೂದೇವಿ ಸಾಲ ಕೇಳಲಾಗಿ ನರಿ ಗಡ್ಡ ಮೀಸೆಗೆ ಬಣ್ಣ ಬಳಿದುಕೊಂಡು, ಬಗಲಲ್ಲಿ ಜೋಳಿಗೆ, ಕೈಯಲ್ಲಿ ...ರು ದೊಣ್ಣೆ ಹಿಡಿದು, ವೇಷವನ್ನೇ ಬದಲಿಸಿ "ನಾನು ...ಸಾಲ ಕೊಡಬೇಕಾದವನಲ್ಲ, ಅವನ್ಯಾರೊ ನಾನ್ಯಾರೊ" ...ತಂತೆ. ಆಗ ಭೂದೇವಿ ನಕ್ಕು "ಅಯ್ಯೋ, ಹೊಟ್ಟೆಬಾಕ ...ಡೆದೆ. ನೀನು ನನ್ನ ಜೊತೆ ವ್ಯವಹಾರದ ಮಾತನಾಡಿ ...ಮರಿಯನ್ನು ತಿಂದು ಹೊಟ್ಟೆ ಮುಂದಿಟ್ಟುಕೊಂಡು ...ಬೊಗಳುತ್ತಿರುವೆಯ ಚಾಂಡಾಳ. ನಿನ್ನ ದೇಹದ ...ಮಾಂಸದಲ್ಲಿ ಕುರಿಮರಿಯು ರಕ್ತಮಾಂಸವೂ ...ತಿರುವುದನ್ನು ಮರೆತೆಯಾ? ನೀನು ...ಮಾಲಯದವರೆಗೂ ಓಡಿಬರುವ ಶಕ್ತಿ ಕೊಟ್ಟವರಾರು ...ಬುದನ್ನು ಬಲ್ಲೆಯಾ? ಸುಳ್ಳಿನಿಂದ ಪಲಾಯನ ...ಡುವುದಕ್ಕಿಂತ ಇದ್ದಲ್ಲೇ ಸತ್ಯ ಹೇಳಿ ಬದುಕಬಹುದಿತ್ತಲ್ಲ. ...ರೇನು ನಿನ್ನ ಕುಲವೇ ಅಂತದು. ಹೋಗಿ ಬದುಕಿಕೊ" ...ದಳಂತಲ್ಲಾ, ಥೂತ್ತೇರಿ!

****

...ಮೋದಿ ನಿಶ್ಚಯಿಸಿಕೊಂಡವನಂತೆ, "ಹೌದು ನನಗೆ ...ದುವೆಯಾಗಿದೆ, ಆದಕ್ಕೇನೀಗ?" ಎಂದು ಹೂಂಕರಿಸಿದ ...ಡಲೇ ಚೆಡ್ಡಿ ಲಾಯರ್‌ಗಳು "ನಮ್ಮ ಪ್ರಧಾನಿಯವರಾದ



ಮೋದಿ ಮದುವೆಯಾದಾಗ ಅವರಿಗೆ ಹದಿನಾರು ವರ್ಷ ಹನ್ನೊಂದು ತಿಂಗಳು ಇಪ್ಪತ್ತೊಂಭತ್ತು ದಿನವಾಗಿತ್ತು, ಇನ್ನು ನಮ್ಮ ಪ್ರೀತಿಯ ಬೆಹನ್ ಜಶೋದಾಗೆ ಅದಾಗತಾನೆ ಹದಿಮೂರು ತುಂಬಲಿತ್ತು, ಆದ್ದರಿಂದ ಇದೊಂದು ಅಪ್ರಾಪ್ತ ವಯಸ್ಸಿನ ವಿವಾಹ. ಬಾಲ್ಯವಿವಾಹ ಅಂದರೂ ನಡೆಯುತ್ತದೆ. ಬಹುಮುಖ್ಯ ಸಂಗತಿಯೆಂದರೆ ಇದು ದೇಶಭಕ್ತರಾದ ಮೋದಿಗೆ ಬೇಕಿಲ್ಲದ ಮದುವೆ. ಆದ್ದರಿಂದ ಚಿಕ್ಕವಯಸ್ಸಿನ ಜಶೋದಾ ದೊಡ್ಡ ವಯಸ್ಸಿನವಳಾಗುವವರೆಗೂ ಕಾಯುವುದಕ್ಕಿಂತ ದೇಶ ಪರ್ಯಟನೆ ಮಾಡಿ ಬಂದರೆ ಹೇಗೆ ಎಂದು ಹಿಮಾಲಯದವರೆಗೂ ಹೋಗಿಬಿಟ್ಟರು. ನಿಮಗೇ ಗೊತ್ತಿರುವಂತೆ ನಮ್ಮ ಹಿಮಾಲಯ ಎಂತಹ ಲೌಖಿಕ ಜೀವನದ ಲೋಲುಪರನ್ನೂ ವೈರಾಗ್ಯದ ಮಡಿಲಿಗೆ ಸೆಳೆದುಕೊಂಡುಬಿಡುತ್ತೆ. ಹಾಗೆ ನಮ್ಮ ಮೋದಿ ಬ್ರಹ್ಮಚಾರಿಯಾಗೇ ಉಳಿದುಬಿಟ್ಟರು. ಅಂದರೆ ನಮಗೆ ಮತ್ತೊಬ್ಬ ವಾಜಪೇಯಿ ಸಿಕ್ಕಂತಾಯ್ತು, ಇದು ನಮ್ಮ ಹಿಂದೂ ಸಾಮ್ರಾಜ್ಯದ ಪುಣ್ಯ" ಎಂದು ಕಂಡಕಂಡಲ್ಲಿ ವಾದಿಸುತ್ತಿವೆಯಂತಲ್ಲಾ, ಥೂತ್ತೇರಿ!!

****

ಮಕ್ಕಳಿಲ್ಲದವನು ಪ್ರಧಾನಿಯಾದರೆ ಚೆಡ್ಡಿಗಳೆಲ್ಲಾ ಅವನ ಮಕ್ಕಳಾಗಿ ದೇಶಮುಕ್ಕಬಹುದೆಂಬ ಸಂಚಿನಿಂದ ಕೂತಿರುವ ಚೆಡ್ಡಿಗಳು ಕೊಡುವ ಕಾರಣವೇ ಭಲೇ ಮಜವಾಗಿದೆಯಲ್ಲಾ, "ಇಂದಿರಾ ಗಾಂಧಿಯ ಮಗ ಸಂಜಯಗಾಂಧಿಯ ಅವಾಂತರಗಳಿಂದ ಆಕೆ ಸೋಲಬೇಕಾಯ್ತು, ಆದರೆ ನಂತರ ಅಧಿಕಾರಕ್ಕೆ ಬಂದವರು ಯಾವ ಸಂಜಯಗಾಂಧಿಯನ್ನು ಟೀಕಿಸಿದ್ದರೊ ಆ ಕಾರಣವನ್ನೆ ಮರೆತರು. ಮೊರಾರ್ಜಿ ಹಿಂದೆ ಕಾಂತಿಭಾಯಿ, ಚರಣ್‌ಸಿಂಗ್ ಹಿಂದೆ ಅಜಿತ್ ಸಿಂಗ್, ಜಗದೇವನ ಜೊತೆ ಅವನಂತದೇ ಆಕೃತಿ ಕಂಡಾಗ ಇಡೀ ದೇಶದ ಜನ ಓಹೋ ಇವರೂ ಅವರಂತೆ ಅಂದುಕೊಂಡು ನೋಡಿದ್ದು ವಾಜಪೇಯಿ ಕಡೆಗೆ. ಯಾಕೆಂದರೆ ಆತನಿಗೆ ಮಕ್ಕಳೇ ಇರಲಿಲ್ಲ, ಅಂತಹ ಜಾಗ್ರತೆ ವಹಿಸಿ ಜೀವನ ಸಾಗಿಸಿ ಸೈ ಎನ್ನಿಸಿಕೊಂಡ ಬ್ರಹ್ಮಚಾರಿಯಾಗಿದ್ದರು. ಈಗಲೂ ನಮ್ಮ ಮೋದಿ, ವಾಜಪೇಯಿಯಂತೆಯೇ ಕಾಣುತ್ತಾರೆ. ರಾಜಕಾರಣದಲ್ಲಿ ಮಕ್ಕಳೇ ಬಂದು ಶಾಪವಾಗುತ್ತಿರುವಾಗ, ಮಕ್ಕಳಿಲ್ಲದ ಮೋದಿಗೆ ನಾವೇ ಮಕ್ಕಳು" ಎಂದು ಚೆಡ್ಡಿಗಳು ಕುಣಿದಾಡುತ್ತಿವೆಯಂತಲ್ಲಾ, ಥೂತ್ತೇರಿ!!

****

ಮಕ್ಕಳನ್ನು ಮಾಡಲು ಹೆದರುತ್ತ, ಮಕ್ಕಳಾಗಿ ಲ್ಹಾರಿ ಬೀಸಲು ಹಾತೊರೆಯುವ ಚೆಡ್ಡಿಗಳು ಒಂದೆಡೆಯಾದರೆ, ಇನ್ನೊಂದೆಡೆ ಈಗಾಗಲೇ ಮೊಮ್ಮಕ್ಕಳನ್ನು ಜೆಡಿಎಸ್ ಪಾರ್ಟಿಯ ವಾಹನ ಹತ್ತಿಸಿ, ಜನಗಳ ಕಡೆ ಕೈಬೀಸುವುದನ್ನು ಹೇಳಿಕೊಡುತ್ತಿರುವ ದೇವು ಕುಟುಂಬದ ಯಾರನ್ನಾದರೂ ಮಾತನಾಡಿಸಿದರೆ ಹೇಗೆ ಅನ್ನಿಸಿದಾಗ ಹೊಳೆದ ಹೆಸರೇ ರೇವಣ್ಣನದು. ಆ ಕೂಡಲೇ ಫೋನ್ ಮಾಡಲಾಗಿ ರಿಂಗಾಯ್ತು.

ರಿಂಗ್ ಟೋನ್: "ಟ್ರರ್.... ಟರ್....ಟರ್....ಟರ್...."

"ಹಲೋ ಯಾರ್ರಿ?"

"ನಾನು ಸಾರ್ ಯಾಹು, ಪತ್ರಕರ್ತ."

"ನಮ್ಮ ತಂದೆಗೆ ಓಟು ಮಾಡದ ಮರೀಬ್ಯಾಡಿ ಕಂಡ್ರಿ."

"ನನ್ನ ಓಟು ಬೆಂಗಳೂರಲ್ಲದೆ ಸಾರ್."

"ಎಲ್ಲಾರ ಇರ್ಲಿ, ಮರೀಬ್ಯಾಡಿ."

"ನೀವೆಲ್ಲಿದ್ದೀರಿ ಸಾರ್?"

"ಹಾಸನದಲ್ಲಿದ್ದಿನಿ."

"ಹೆಂಗಿದೆ ಸಾರ್ ವಾತಾವರಣ?"

"ನಮ್ಮ ತಂದೆ ಸೋಲಸಕ್ಕೆ ಇನ್ನೊಂದು ಸತಿ ಹುಟ್ಟಿಬಂದ್ರೂ ಆಗದಿಲ್ಲ, ಅವುರಿಗೆ ರಾಜಯೋಗ ಅದೆ ಕಂಡ್ರೀ."

"ತಿರಗ ಪ್ರಧಾನಿ ಆಯ್ತರ ಸಾ?"

"ಆಯ್ತರಾ ಅಂತ ಕೇಳ್ತಿರಾ? ಆ ಡೆಲ್ಲೀಲಿ ನಮ್ಮಪ್ಪನಂಗೆ ಯಾರವುರೆ? ತಿರಗ ನಮ್ಮನೆ ಬಾಗಲಿಗೇ ಬರಬೇಕು, ಅಂಗದೆ ನಮ್ಮಪ್ಪನ ಯೋಗ."

"ಯರಡು ಮೂರು ಸೀಟ ತಗಂಡು ಪ್ರಧಾನಿ ಯಂಗಾಯ್ತರೆ?"

ಥೂತ್ತೇರಿ

▶ ಯಾಹೂ

"ಯಂಗೆ ಅಂದ್ರೆ ಒಂದು ಅವುರು ಈಸ್ಟರದ ಭಕ್ತರು. ಯಾರಡ್ನೆದೇನಪ್ಪಾ ಅಂದ್ರೇ ಫಲಕ್ಸನ್ ನ್ಯಡಿಯದು ಗುರುವಾರ. ಅದು ರಾಘವೇಂದ್ರ ಸ್ವಾಮಿ ವಾರ. ನಮ್ಮಪ್ಪನಿಗೆ ಆ ದೇವರ ಕಂಡ್ರೂ ಭಕ್ತಿ ಆ ಡೆಲ್ಲೀಲಿ ನಮ್ಮಪ್ಪನ ಮೀರಸೊ ರಾಜಕಾರಣಿನೆ ಇಲ್ಲ, ಮಾಜಿ ಪ್ರಧಾನಿ ಬ್ಯಾರೆ. ಇನ್ನೇನಾಗಬೇಕ್ರಿ?"

"ದೈವಬಲದ ಮುಂದೆ ಸೀಟುಗೀಟು ಏನೂ ನ್ಯಡಿಯಲ್ಲ ಸಾ?"

"ಅಂಗನ್ನಿ ಮತ್ತೆ, ನಮ್ಮಪ್ಪ ಹತ್ತು ತಿಂಗಳು ದೇಸ ಯಂಗಿಟ್ಟದ್ರು. ವಳೆನರಸೀಪುರ ಯಂಗಿಟ್ಟದ್ರೊ ಅದೇ ತರ ದೇಸನೂ ಮಡಿಕಂಡಿದ್ರು. ಆ ಕೇಸರಿ ಅನ್ನೊ ಮೇಸ್ತ್ರಿ ನ್ಯಟ್ಟಗಿದ್ರೆ ದೇಸವ ಬಂಗಾರ ಮಾಡತಿದ್ರು ನಮ್ಮಪ್ಪ".

"ಕಾಂಗ್ರೆಸ್ಸೇ ಅಧಿಕಾರ ಕೊಟ್ಟಿತ್ತು, ಕಾಂಗ್ರೆಸ್ಸೇ ಕಿತಗತ್ತು, ಹೋಗ್ಲಿ ಬುಡಿ ಸಾ. ಈಗ ತಿರಗ ಪ್ರಧಾನಿಯಾಯ್ತರಲ್ಲಾ ಅದು ಮುಖ್ಯ. ಅದೂ ಕೂಡ ದ್ಯಾವೇಗೌಡ್ರೆ ಹೇಳಿರೊ ಮಾತು. ಒಬ್ಬ ಕನ್ನಡಿಗ ಪ್ರಧಾನಿ ಆಯ್ತನೆ ಅಂದವ್ರುರೆ."

"ಆದ್ಕೆ ಕಂಡ್ರಿ ವಟ್ಟೆ ಉರಿ ಬಂದು ಆ ಯಸ್ಸೆಂ ಕಿಸ್ಣ ಯಂತ ಮಾತಂದ ಗೊತ್ತೇನ್ರಿ?"

"ಏನಂದ್ರು ಸಾರ್?"

"ತಿರಗ ಉಪಚುನಾವಣೆ ಬರಂಗೆ ಮಾಡಬ್ಯಾಡಿ ಅಂತನಲ್ರಿ?"

"ಅಂಗಂದ್ರೇನು ಸಾರ್?"

"ಅಯ್ಯೋ, ಅಷ್ಟು ಗೊತ್ತಾಗೊದಿಲ್ಲವೇನ್ರಿ. ನಮ್ಮ ತಂದೆಗಾಗ್ಲೆ ಯಂಬತ್ರರಡಾಯ್ತು. ಆದ್ಕೆ ಈ ವರ್ಸ ತಿಥಿ ಊಟ ಉಣ್ಣಂಗಾದಾತು. ಕಾಂಗ್ರೆಸ್‌ಗೆ ಓಟಾಕಿ ಅಂತನಲ್ಲಾ, ಇವುನಿಗೆ ಏಟೊರ್ಸ ಅನ್ನದ ಮೆರತೆಬುಟ್ಟ ಅಯ್ಯ."

"ಕೃಷ್ಣ ಇವತ್ತಿನವರಿಗೂ ಯಾರ ಭುಜದ ಮೇಲೂ ಕೈಯ್ಯಾಕ್ಕಂಡು ನ್ಯಡದಿಲ್ಲ ಸಾರ್. ಈಗ್ಲೂ ಶೆಟ್ಯಾಡ್ತರೆ"

"ಸಟ್ಟು ನಾನೂ ಆಡ್ತೀನಿ ಕಂಡ್ರಿ. ಅದು ಒಂದಾಟವೆ? ಕೇವಿಲ್ದೊರು ಆಡಬೇಕಷ್ಟೆಯ."

"ಅಂತು ಗೌಡ್ರಿಗಿಂತ ಚುರುಕಾಗ್ಯವುರಲ್ಲವೆ. ಅದ್ಕೆ ಅಂಗಂದವುರೆ. ಹಾಸನಕ್ಕೆ ಭವಾನಿ ಯೋಗ್ಯವಾದ ಕ್ಯಾಂಡೇಟು ಅಥವಾ ನಿಮ್ಮ ಮಗ ಪ್ರಜ್ವಲ ಒಳ್ಳೆ ಅಭ್ಯರ್ಥಿ. ಅದುಬುಟ್ಟು ಅವುರೆ ನಿಂತಗಂಡ್ರೆ ಇಂತ ಮಾತ ಕೇಳಬೇಕಾಯ್ತದೆ."

"ಅಯ್ಯೋ, ಭವಾನಿ ಕತೆ ಬ್ಯಾಡಿ. ಅನಿತ ನಿಲ್ಲದಾದ್ರೆ ನಾನು ನಿಂತಗತಿನಿ ಅಂತ ಒಂದೆ ಸಮ ನಮ್ಮಪ್ಪನತ್ರ ಗೋಳಾಡಿದ್ಕೆ ನಮ್ಮಪ್ಪ ಯಾರೂ ಬ್ಯಾಡ ಅಂತ ಅವುರೆ ನಿಂತವುರೆ."

"ಆ ಮೋದಿ ಅನ್ನೋನು ದ್ಯಾವೇಗೌಡ್ರ ತಗಂಡೋಗಿ ಗುಜರಾತಲ್ಲಿ ಸಾಕತಿನಿ ಅಂದವುನಲ್ಲಾ, ಅದ್ಯಾಕ್ ಸಾ ಅಂಗಂದ?"

"ಅಲ್ರೀ, ಮೋದಿ ನಮ್ಮ ತಂದೆ ಕರಕಂಡೋಗಿ ಗುಜರಾತಲ್ಲಿ ಇಟ್ಟುಕೊಂಡು ಸಾಕ್ತಿನಿ ಅಂದ್ರೆ ನಮ್ಮ ತಂದೆ ಎಷ್ಟು ದೊಡ್ಡ ವ್ಯಕ್ತಿ ಅನ್ನದ ಲ್ಯಕ್ಕಹಾಕ್ರಿ. ಆ ಪರಮೇಶ ಯಾವಾಗ ಇಸ ಕುಡಿತರೊ ಅಂತ ಕಾಯ್ತಿನಿ ಅಂತನೆ. ಯಸ್ಸೆಂ ಕಿಸ್ಣ ಉಪಚುನಾವಣೆ ಬತ್ತದೆ ಜೆಡಿಎಸ್‌ಗೆ ಓಟಾಕಿದ್ರೆ ಅಂತನೆ. ಅಂತದ್ರಲ್ಲಿ ಮೋದಿ ಅಂಗಂದಾ ಅಂದ್ರೆ ನಾವ್ಯಲ್ಲ ಯಮ್ಮೆಪಡಬೇಕು ಕಂಡ್ರೀ."

"ನಿಜ ಸಾರ್, ಸಾಮಾನ್ಯವಾಗಿ ಯಾರದ್ದಾದ್ರೂ ಮನೇಲಿ ಹಿರಿಯೋರನ್ನ ಸರಿಯಾಗಿ ನ್ಯಡಿಸಿಗಳಕ್ಯಾಗಲಿಲ್ಲ ಅಂದ್ರೆ "ಕಳುಸ್ರಿ, ನಮ್ಮನೆಲಿ ಇಟ್ಟಗಂಡು ನೋಡಿಕತ್ತಿವಿ" ಅಂತ ಯಾರೋ ಬೀದಿಲೋಗನು ಅಂತನೆ ಅನ್ನದಾದ್ರೆ, ಆ ಮಾತು ಅವುನ ಮನಿಯೊರಿಗೇ ಅವಮಾನದ ಮಾತು ಸಾರ್. ನಿಜಕ್ಕೂ ನೀವೂ ಬದುಕಿದ್ರೂ ಸತ್ತಂಗೆಯ. ಕರ್ನಾಟಕದ ಕುಟುಂಬ ರಾಜಕಾರಣದ ಪಿತಾಮಹನನ್ನು ಯಾವನೋ ಹೆಂಡತಿ ಬಿಟ್ಟು ನಾಯಿ ತರ ತಿರಗೊ ತಿರುಬೋಕಿ ಅಂಥೋನು ನಮ್ಮ ದೇವೇಗೌಡ್ರ ಕಳುಸ್ರಿ ನಾನು ಸಾಕತಿನಿ ಅಂದ್ರೆ, ನೀವು ಏನಾಗಿದ್ದಿರಿ ಅನ್ನದು ನ್ಯಾಯ ಮಾಡಬೇಕಾದ ವಿಷಯ ಸಾರ್."

"ಅಂತ ಮಾತೇನಿ ಅದೂ!"

"ನಿಮ ಪ್ರಕಾಶ ಅವುಮಾನದ ಮಾತು ಸಾರ್"

"[illegible] ಸಿಕಿ ಮಾಡಿಸಿ"

"ಥೂತ್ತೇರಿ!!!"

ಕ್ಯಾತನಬೀಡನ ಕಿಳ್ಳೆಕ್ಯಾತರು!


ಮೊನ್ನೆ ನಡೆದ ಚುನಾವಣೆಯಲ್ಲಿ ಯಾವ್ಯಾವ ...ಶದಲ್ಲಿ ಎಷ್ಟು ಪರಸೆಂಟ್ ಮತವಾಯಿತು ಎಂಬ ...ಕ್ಷೆಯೊಂದು ವರದಿಯಾಗಿದೆ. ಈ ಪೈಕಿ ...ಮಗಳೂರು ಸಮೀಪದ ಕ್ಯಾತನಬೀಡಿನಲ್ಲಿ ಬರೋಬರಿ ...% ಮತದಾನವಾಗಿದೆ.

ಇದನ್ನು ನೋಡಿ ತುಂಬ ಆಶ್ಚರ್ಯವಾಯಿತು. ಏಕೆಂದರೆ ಕ್ಯಾತನಬೀಡು ಬೇರೆ ಊರಿನಂತಲ್ಲ, ಕ್ಯಾತನಬೀಡು ...ಸಾದ ಮುಖಾಂತರ ಪ್ರತಿ ವರ್ಷ ಮಾರ್ಚ್ ತಿಂಗಳಲ್ಲಿ ...ಡುಮೂರು ದಿನ ವಿಚಾರಗೋಷ್ಠಿ ಮತ್ತು ನಾಟಕ ...ಡಿಸಿ ಸಂಭ್ರಮಿಸುವ ಊರು ಇದು. ಅಲ್ಲದೆ ಸಾಣೆಹಳ್ಳಿ ...ಕಗಳು ಕೂಡ ಇಲ್ಲಿ ಕಡ್ಡಾಯವಾಗಿ ಪ್ರದರ್ಶನಗೊಳ್ಳುತ್ತವೆ. ...ಊರ ಜನ ಹಗ್ಗದಾಟ, ರಂಗೋಲಿ ಸ್ಪರ್ಧೆ, ಗೀತ ...ಸದಲ್ಲಿ ಪಾಲ್ಗೊಂಡು ತಮ್ಮ ಊರು ಬೇರೆ ...ನಲ್ಲ ಎಂಬುದನ್ನು ತಮ್ಮ ಕಾರ್ಯಕ್ರಮದ ಮೂಲಕ ...ತುಪಡಿಸಿದ್ದಾರೆ.

ಇಲ್ಲಿನ ಮುಂದಾಳಾದ ರವೀಶ್ ಬಸಪ್ಪ ನಾಡಿನ ...ಲೆಮೂಲೆಯ ಸಾಹಿತಿಗಳನ್ನು ಸಂಪರ್ಕಿಸಿ ಕರೆತಂದು ...ಸನ ಮಾಡಿಸಿ ಕಳುಹಿಸಿದ್ದಾರೆ. ಈ ಬಾರಿ ಗಣ್ಯ ಸಾಹಿತಿಗಳನ್ನು ಕರೆಸಿ ಕಳಿಸುವ ಜವಾಬ್ದಾರಿಯನ್ನು ರವೀಶ್ ನನಗೆ ವಹಿಸಿದ್ದರಿಂದ ಅಗ್ರಹಾರ ಕೃಷ್ಣಮೂರ್ತಿ ಮತ್ತು ಕುವೆಂಪು ವಿ.ವಿ.ಯ ಕುಲಸಚಿವರಾದ ಮಲ್ಲಿಕಾ ಘಂಟಿಯವರನ್ನು ಕರೆಸಿದ್ದೆ. ಅವರು ಬರಲು ಸಮಯವಿಲ್ಲ ದಿದ್ದರೂ ಕೂಡ ಬಂದು ಗ್ರಾಮೀಣ ಜನರೊಟ್ಟಿಗೆ ಕಲೆತು ಹೋದರು.

ಮಲ್ಲಿಕಾ ಘಂಟಿಯವರಂತೂ ಸುಮಾರು ಮನೆಗಳಿಗೆ ಭೇಟಿಯಿತ್ತು, ಅವರೊಡನೆ ಬೆರೆತು, ಖುಷಿಯಿಂದ ಹೋದರು. ನನ್ನ ಕಟ್ಟೆಪುರಾಣ ನಾಟಕವನ್ನು ಕೂಡ ಊರವರು ಕೊಟ್ಟಷ್ಟು ಕಾಸೀಸಿಕೊಂಡು ಮಾಡಿದೆವು.

ವಾಸ್ತವವಾಗಿ ನನ್ನ ಆಪ್ತ ಬಂಧುವೊಬ್ಬರು ತೀರಿಕೊಂಡಿದ್ದರಿಂದ, ನಾನು ಈ ಕ್ಯಾತನಬೀಡಿನ ಸಂಭ್ರಮದಲ್ಲಿ ಭಾಗವಹಿಸುವಂತೆಯೇ ಇರಲಿಲ್ಲ, ನನ್ನ ದುಃಖ ನನಗೆ ಇರಲೀ ಎಂದು ತೋರಿಸಿಕೊಳ್ಳದೆ ನನ್ನ ಜವಾಬ್ದಾರಿ ಮುಗಿಸಿದೆ. ನಾನೂ ಹಳ್ಳಿಯವನಾದ್ದರಿಂದ ಹಳ್ಳಿಗರ ಮನಸ್ಸನ್ನು ನೋಯಿಸಬಾರದೆಂದು ಆ ಊರಹಬ್ಬದಲ್ಲಿ ಪಾಲ್ಗೊಂಡೆ.



ಬಹುತೇಕ ಚಿಕ್ಕಮಗಳೂರಿನ ಗಣ್ಯ ರಾಜಕಾರಣಿಗಳೆಲ್ಲಾ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ತಾವು ಪಾಲಿಸಲಾಗದ್ದನ್ನೆಲ್ಲಾ ಆ ಊರವರಿಗೆ ಕೊರೆದು ಹೋಗುತ್ತಿದ್ದಾರೆ. ಈ ಬಾರಿ ಜಯಪ್ರಕಾಶ್ ಹೆಗಡೆಯವರು ಬಂದು ಆ ಪ್ರದೇಶದಲ್ಲಿ ಕಂಡುಬಂದ ನೀರಿನ ಅಭಾವಕ್ಕೆ ಏನಾದರೂ ಮಾಡಲೇಬೇಕೆಂದು ಈ ಹಿಂದೆ ತಯಾರಿಸಲಾದ ಕುಡಿಯುವ ನೀರಿನ ಯೋಜನೆಗೆ ಕೋಟ್ಯಂತರ ರೂಪಾಯಿ ಮಂಜೂರು ಮಾಡಿಸಿರುವುದನ್ನು ಹೇಳಿಹೋದರು. ಅದು ಕೂಡ ಅವರಾಗಿ ಹೇಳಿದ್ದಲ್ಲ, ಗೆಳೆಯ ರವೀಶ್ ಹೇಳಿದ ಮಾತಿಗೆ ಅವರು ದನಿಗೂಡಿಸಿದರು ಅಷ್ಟೆ.

ಸಾಕ್ಷರತೆಯಲ್ಲಿ, ಸುಭಿಕ್ಷತೆಯಲ್ಲಿ ಮುಂದಿರುವ ಈ ಊರಜನ ಇಷ್ಟು ಕಡಿಮೆ ಓಟು ಮಾಡಿದ್ದೇಕೆ ಎಂದು ಪರಿಚಿತರನ್ನು ಕೇಳಿದಾಗ ಆಘಾತಕಾರಿ ಮಾಹಿತಿಯೊಂದು ಸಿಕ್ಕಿತು. ಅದೇನೆಂದರೆ ಈ ಹಿಂದೆ ಡಿ.ಸಿ. ಶ್ರೀಕಂಠಪ್ಪ ನಿಂತಾಗ ಊರೆಲ್ಲಾ ಸೇರಿ ಅತಿಹೆಚ್ಚು ಮತ ಹಾಕುತ್ತ ಬಂದಿದ್ದಾರೆ. ವೀರೇಂದ್ರ ಪಾಟೀಲರು ನಿಂತಾಗಲಂತೂ ಸತ್ತು ಕೈಲಾಸವಾಸಿಗಳಾದವರೆಲ್ಲಾ ಬಂದು ಮತ ಹಾಕಿ ಹೋದರಂತೆ. ಆದರೆ ಈಗಿನ ನಿರುತ್ಸಾಹಕ್ಕೆ ಕಾರಣ ತಮ್ಮ ಜನಾಂಗದ ಅಭ್ಯರ್ಥಿ ಇಲ್ಲದಿದ್ದದ್ದಂತೆ.

ಈ ಕ್ಷುದ್ರ ಕಾರಣ ಸುಳ್ಳಾಗಲಿ. ಇಲ್ಲಿನ ಮುಖಂಡರು ಇವ ನಮ್ಮವ ಇವ ನಮ್ಮವ ಎನ್ನುವ ಮಾತನ್ನು ಇನ್ನಾದರೂ ನಿಲ್ಲಿಸಲಿ. ಇಡೀ ಜಿಲ್ಲೆಯಲ್ಲಿ ನಮ್ಮ ಜನಾಂಗವನ್ನೇ ಕಡೆಗಣಿಸಲಾಗಿದೆ ಎಂಬ ಸುಳ್ಳು ಸುದ್ದಿಯಿಂದ ಮುಕ್ತಿಪಡೆಯಲಿ. ಇದೇನೇ ಆದರೂ ಈಗ ಇಂತಹ ಪ್ರದೇಶಕ್ಕೆ ಹೋಗಿ ಭಾಷಣ ಬಿಗಿದು ನಾಟಕ ಮಾಡಿ ಬಂದಿದ್ದೇ ಒಂದು ಅಪಮಾನಕರ ಪ್ರಸಂಗವಾಗಿ ಕಾಣತೊಡಗಿದೆ!


● ಬಿ.ಚಂದ್ರೇಗೌಡ


ಒಡಲೊಳಗಿನ ಕಾವು ಬೆಳಕಾಗಿ..ಬಯಲಾಗಿ..

'ಬಾಡೂಟದ ಜೊತೆಗೆ ಗಾಂಧಿ ಜಯಂತಿ' ಇದು ಲಡಾಯಿ ಪ್ರಕಾಶನದವರು ಪ್ರಕಟಿಸಿರುವ ಬಿ.ಎಂ.ಬಶೀರ್ ಅವರ ಬಿಡಿ ಲೇಖನಗಳ ಕೃತಿ. ಒಟ್ಟು 28 ಬೇರೆ ಬೇರೆ ವಿಷಯಗಳನ್ನಾಧರಿಸಿದ ಇಲ್ಲಿಯ ಲೇಖನಗಳು ಭಾರತೀಯ ಸಮಾಜದ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸರದ ಸಮಾಜದಲ್ಲಿ ಅದ್ದಿ ತೆಗೆದಂತಿವೆ. ಇಲ್ಲಿಯ ಜಾತಿ, ಧರ್ಮ, ಭಾಷೆ, ಆಹಾರ, ವೇಷಭೂಷಾ ಮುಂತಾದವುಗಳ ಪಲುಕಿನೊಂದಿಗೆ, ಆಯಾ ಸಂದರ್ಭಕ್ಕೆ ತಕ್ಕ ಹಾಗೆ ಬರೆಯಿಸಿಕೊಂಡ ಬರಹಗಳಿವು. ಸಮಾಜವೊಂದರ ನಗ್ನತೆಯನ್ನು ನಿಚ್ಚಳವಾಗಿ ತೋರುವ ಶುಭ್ರವಾದ ಕನ್ನಡಿಯಂತೆ ಇಲ್ಲಿಯ ಬರಹಗಳು ಕೆಲಸ ಮಾಡುತ್ತವೆ. ಕೆಲ ಲೇಖನಗಳ ವಿಷಯ ಪುನರಾವರ್ತಿತವಾದಂತೆನಿಸಿದರೂ ಮನುಷ್ಯನ ಮರೆಗುಳಿತನದ ಎಚ್ಚರದ ಹಿನ್ನೆಲೆ ತಾನೇತಾನಾಗಿ ಈ ಬರಹಗಳಿಗೆ ಮೈಗೂಡಿ ಕೊಂಡಿರುವುದಿದೆ. ಲೇಖಕನೇ ಖುದ್ದಾಗಿ ಹೇಳಿಕೊಂಡಂತೆ 'ಇಲ್ಲಿರುವ ಎಲ್ಲ ಲೇಖನಗಳು ಪತ್ರಿಕೆಗಳಿಗಾಗಿ ಬರೆದವುಗಳು. ಪತ್ರಿಕಾ ಬರಹಗಳಿಗಿರುವ ಎಲ್ಲ ಮಿತಿಗಳನ್ನು ಇಲ್ಲಿರುವ ಲೇಖನಗಳು ತನ್ನದಾಗಿಸಿ ಕೊಂಡಿವೆ' ಎಂದು ಹೇಳಿರುವುದರಿಂದ ಮತ್ತೆ ಇಲ್ಲಿಯ ಲೇಖನಗಳ ಮಿತಿಯ ಪ್ರಸ್ತಾಪ ಅನಗತ್ಯವೆನಿಸುತ್ತದೆ.

ಅಬ್ಬೂ ಕಾಕಾನ ಗೂಡಂಗಡಿಯ ಚಾ ಮತ್ತು ಅಲ್ಲಿಯ ರಾಜಕೀಯ ಚರ್ಚೆಯೊಂದಿಗೆ ರೂಪಿತವಾದ ಅನೇಕ ವ್ಯಕ್ತಿತ್ವಗಳ ಬಗೆಗಿನ ವಿವರಣೆಯೊಂದಿಗೆ ಆರಂಭವಾಗುವ ಲೇಖನ ಆ ಗೂಡಂಗಡಿ ಕಂ ಕ್ಲಾಸ್ ರೂಂ ಆಗಿ ಅದು ಕೆಲಸ ಮಾಡಿದ ಬಗೆಯನ್ನು ಲೇಖಕರು ವಿವರಿಸುತ್ತ 'ಆ ಗೂಡಂಗಡಿಯಲ್ಲಿ ದೊರೆಯುತ್ತಿದ್ದ ನೀರು ದೋಸೆ, ಕಲ್ತಪ್ಪವನ್ನು ಮೀನು ಸಾರಿನೊಂದಿಗೆ ಬಡಿಸಿದರೆಂದರೆ..' ಎನ್ನುತ್ತಲೇ ಓದುಗರ ನಾಲಿಗೆಯನ್ನೂ ನೀರಾಗಿಸುತ್ತಾರೆ. 'ಯಕ್ಷರಂಗದ ರಾಕ್ಷಸ ವೇಷಗಳು' ಎನ್ನುವ ಲೇಖನದಲ್ಲಿ ಅವರು ಈ ಕಲೆ ಕ್ರಮೇಣವಾಗಿ ಮೇಲಿನ ಸ್ತರಗಳ ಸ್ವತ್ತಾಗಿ ಅದು ವೈದಿಕೀಕರಣ ಮತ್ತು ಕೋಮುವಾದೀಕರಣಗೊಂಡ ಬಗ್ಗೆ ಖೇದವನ್ನು ವ್ಯಕ್ತಪಡಿಸುತ್ತಲೇ ಅದು ಕಮರ್ಷಿಯಲ್ ಆದ ಬಗ್ಗೆಯೂ ಬೇಸರಿಸುತ್ತಲೇ 'ಕಮರ್ಷಿಯಲ್ ಆಗಿರುವುದು ಹಸಿವಿನ ಕಾರಣದಿಂದ ಆಗಿದ್ದರೆ ಅದನ್ನು ಯಾವ ಕಾರಣಕ್ಕೂ ಪ್ರಶ್ನಿಸುವಂತಿಲ್ಲ. ಕಲೆಗಿಂತ ದೊಡ್ಡ ಸತ್ಯ ಬದುಕು. ಆದರೆ ಎರಡನೆಯದನ್ನು ನಾವು ಪ್ರಶ್ನಿಸಲೇ ಬೇಕಾಗುತ್ತದೆ' ಎನ್ನುವುದು ಲೇಖಕರ ಮನದಾಳದ ನೋವಿನ ಅಭಿಪ್ರಾಯವೂ ಹೌದು. 'ಮೂತ್ರ ರಾಜಕೀಯ' ಎನ್ನುವ ಲೇಖನದಲ್ಲಿ ದನದ ಮೂತ್ರವನ್ನು ಔಷಧಿಯಾಗಿ ಬಳಸುವ ಬಗ್ಗೆ ತಕರಾರು ಎತ್ತುವ ಲೇಖಕರು 'ವೈದ್ಯರ ಕೆಲಸವನ್ನು ರಾಜಕಾರಣಿಗಳು ಮಾಡುವಂತಿಲ್ಲ. ಔಷಧಿಗಳಿಗೆ, ವೈದ್ಯಕೀಯಕ್ಕೆ ಅದರದೇ ಆದ ಚೌಕಟ್ಟುಗಳಿವೆ, ನೀತಿ ಸಂಹಿತೆಗಳಿವೆ' ಎನ್ನುವ ಲೇಖಕರು ಮೂತ್ರವನ್ನು ಔಷಧಿಗಾಗಿ ಬಳಸುವ ಒತ್ತಡ ಎಷ್ಟು ಸರಿ..? ಎನ್ನುವ ಪ್ರಶ್ನೆಯನ್ನೂ ಎತ್ತುತ್ತಾರೆ.

ಕವಿತಾ ಲಂಕೇಶರ 'ಅವ್ವ' ಸಿನಿಮಾದ ಬಗ್ಗೆ ಬರೆಯುವಾಗ ಗಾಂಧಿಯಂಥಾ ಮಹಾನ್ ವ್ಯಕ್ತಿತ್ವದ ಅಂತರ್ಯದಲ್ಲಿ ಓರ್ವ ಹೆಣ್ಣಿದ್ದಳು. ಹಾಗಾಗಿಯೇ ಅವರ ಹೋರಾಟ ಗಂಗಾನದಿಯ ಹಾಗೆ ಉದ್ದಕ್ಕೂ ಹರಿಯಿತು ಎನ್ನುತ್ತಾರೆ. 'ಅವ್ವ' ಚಿತ್ರ ನಿರೀಕ್ಷೆಯ ಮಟ್ಟಕ್ಕೆ ಬಾರದೇ ಆ ಪಾತ್ರಕ್ಕಾಗಿ ಆಯ್ಕೆಯಾದ ಶೃತಿ ಪಕ್ಕಾ ಲಂಕೇಶರ 'ಅವ್ವ'ಳೇ ಆಗಿ ಜೀವ ತುಂಬಲಿಲ್ಲ. ಪರಿಣಾಮವಾಗಿ 'ಚಿತ್ರದುದ್ದಕ್ಕೂ ನಿರ್ದೇಶಕಿಯನ್ನು ಕಾಡಿದ ಲಂಕೇಶ್ ನೆರಳು. ಆದರಿಂದಾಗಿ ಅತ್ತ ಕವಿತಾರ ಚಿತ್ರವೂ ಆಗದೇ ಇತ್ತ ಲಂಕೇಶರ ಕಾದಂಬರಿಯೂ ಆಗದೇ ಪ್ರೇಕ್ಷಕರನ್ನು ನಡುಗಡಲಲ್ಲಿ ಕೈಬಿಟ್ಟು ಬಿಡುತ್ತದೆ' ಎನ್ನುತಾರೆ. ಬ್ಯಾರಿ ಚಿತ್ರ ಮತ್ತು





ಸಾರಾ ಅಬೂಬಕ್ಕರ್ ಕುರಿತು ಬರೆಯುವಾಗ ಅತ್ಯಂತ ಸಣ್ಣದಾದ ಪ್ರಾದೇಶಿಕ ಭಾಷೆಯೊಂದರ ಚಿತ್ರಕ್ಕೆ ಸ್ವರ್ಣ ಕಮಲ ದಕ್ಕಿದ್ದು ಸಾಮಾನ್ಯವಲ್ಲ. 'ತನ್ನ ಇದ್ದ ಬಿದ್ದ ಶಕ್ತಿಯೊಂದಿಗೆ ಒಂದು ಸಣ್ಣ ಭಾಷೆ, ಸಂಸ್ಕೃತಿ, ಸಿನಿಮಾ ರೂಪ ಪಡೆದು ಹಿಂದಿ ಸೇರಿದಂತೆ ರಾಜ್ಯದ ಎಲ್ಲ ಭಾಷೆಗಳಿಗೆ ಸೆಡ್ಡು ಹೊಡೆದು ಸ್ವರ್ಣ ಕಮಲವನ್ನು ತನ್ನದಾಗಿಸುವುದು ಸಣ್ಣ ವಿಷಯ ಅಲ್ಲವೇ ಅಲ್ಲ. ಅದು ಈ ದೇಶದ ಬಹು ಸಂಸ್ಕೃತಿಯನ್ನು ನಾಶ ಮಾಡಿ ಏಕಸಂಸ್ಕೃತಿಯನ್ನು ಪ್ರತಿಸ್ಥಾಪನೆ ಮಾಡುವವರಿಗೆ ಹಾಕಿದ ಸವಾಲು' ಎನ್ನುತ್ತಲೇ ತಾವು ಬ್ಯಾರಿ ಭಾಷೆಯನ್ನು ಮಾತನಾಡುವವರು ಎನ್ನುವ ಕಾರಣಕ್ಕಾಗಿಯೇ ಬಾಲ್ಯದಲ್ಲಿ ಅನುಭವಿಸಿದ ನೋವುಗಳನ್ನು ಖುಷಿಯಲ್ಲಿ ಬ್ಯಾರಿ ಭಾಷೆಯ ಚಿತ್ರವೊಂದು ಗೆಲ್ಲುವ ಮೂಲಕ ತುಂಬಿಕೊಟ್ಟದ್ದು ಅನನ್ಯವಾದುದು. 'ಗೋರಿಗಳ ತೋಟದ ಕಾವಲುಗಾರರು' ಎನ್ನುವ ಲೇಖನದಲ್ಲಿ ಸಾಹಿತಿಯೊಬ್ಬ ನಮ್ಮ ನಡುವಿನಿಂದ ನಿರ್ಗಮಿಸಿದಾಗ ಅವನನ್ನು ಆತ ಮಾಡಿಟ್ಟ ಆಸ್ತಿ ಅಂದರೆ ಮನೆ, ತೋಟ, ಮಣ್ಣು ಮಾಡಿದ ಸ್ಥಳದಲ್ಲಿ ಆವನನ್ನು ಹುಡುಕುವದಲ್ಲ, ಹಾಗೆಯೇ ಅವರ ಗೋರಿಗಳ ಕಾವಲುಗಾರರಾಗುವುದರಲ್ಲೂ ಯಾವ ಪುರುಷಾರ್ಥವೂ ಇಲ್ಲ ಎನ್ನುವುದನ್ನು ಅತ್ಯಂತ ಮಾರ್ಮಿಕವಾಗಿ ಬಶೀರ್ ಪ್ರತಿಪಾದಿಸಿದ್ದಾರೆ. 'ಕೋಳಿ ಅಂಕಕ್ಕೆ ಒಂದು ಸುತ್ತು' ಎನ್ನುವ ಲೇಖನದಲ್ಲಿ ಕೋಳಿಗಳ ನಡುವಿನ ಕಾಳಗ ಹೇಗೆ ಮನುಷ್ಯನ ಮೇಲಿನ ಸೇಡಾಗಿ ರೂಪುಗೊಂಡಿರುತ್ತದೆ ಎನ್ನುವುದನ್ನು ಹೇಳುತ್ತಲೇ 'ಒಬ್ಬ ಮನುಷ್ಯ ಮತ್ತೊಬ್ಬ ಮನುಷ್ಯನಿಗೆ ಥಳಿಸುವುದು ನಮಗೆ ರಂಜಿಸುತ್ತದೆ ಎಂದಾದರೆ ಗುಜರಾತ್ ಹತ್ಯಾಕಾಂಡವೂ ನಮ್ಮನ್ನು ರಂಜಿಸಬಲ್ಲದು' ಎನ್ನುತ್ತಾರೆ. 'ದಲಿತರು 'ಸತ್ತ ದನ' ದ ವಾರಸುದಾರರಾಗಬೇಕೆ..?' ಎನ್ನುವ ಲೇಖನದಲ್ಲಿ ಅವರನ್ನು ಮೇಲಿನ ಸ್ತರಗಳು ಪೂಸಿ ಹೊಡೆಯುತ್ತಲೇ ಮೋಸ ಮಾಡುವ ಕ್ರಮವನ್ನು ಒಂದು ನಿರಂತರವಾದ ಪ್ರಕ್ರಿಯೆಯಾಗಿ ಹೇಗೆ ಸಮಾಜ ಮತ್ತು ಸಂಸ್ಕೃತಿಯೊಂದರ ಭಾಗವೆಂಬಂತೆ ನಡೆಯಿಸಿಕೊಂಡು ಬರಲಾಗಿದೆ ಎನ್ನುವುದನ್ನು 'ಅವರೂ ಅರ್ಚಕರಾಗಬಹುದು' ಎನ್ನುವ ಹೇಳಿಕೆಯ ಅಪಾಯವನ್ನು ಮುಂದಿಟ್ಟುಕೊಂಡು ಚರ್ಚಿಸುತ್ತಾರೆ.

'ನನ್ನ ತಂದೆಯನ್ನು ಯಾಕೆ ಕೊಂದೆ?' ಎನ್ನುವ ಲೇಖನದಲ್ಲಿ ರಾಜೀವ ಗಾಂಧಿಯವರ ಮಗಳು ಪ್ರಿಯಾಂಕಾ ಜೈಲಿನಲ್ಲಿದ್ದ ನಳಿನಿಯನ್ನು ಕುರಿತು ಕೇಳಿದ ಪ್ರಶ್ನೆ ಇದು. ಇದಕ್ಕೆ ವ್ಯತಿರಿಕ್ತವಾಗಿ ನಳಿನಿಯೂ 'ನನ್ನ ತಂದೆಯನ್ನು ನೀವೆಲ್ಲ ಸೇರಿ ಯಾಕೆ ಕೊಂದಿರಿ..?' ಎನ್ನುವ ಮರುಪ್ರಶ್ನೆ ಹಾಕಿದ್ದರೆ ಬಹುಷಃ ಪ್ರಿಯಾಂಕಾಳಲ್ಲಿಯೂ ನಳಿನಿಯ ಮೌನವೇ ಉತ್ತರವಾಗಿರುತ್ತಿತ್ತು ಎನ್ನುವುದು ಲೇಖಕರ ಅಭಿಪ್ರಾಯ. ಶ್ರೀಲಂಕಾದ ನಾಯಕ ಜಯವರ್ಧನೆ ಮತ್ತು ರಾಜೀವಗಾಂಧಿ ಬೆಂಗಳೂರಿನಲ್ಲಿ ಭೇಟಿ ಮಾಡಿದ ಆ ಅವಿಸ್ಮರಣೀಯ ದಿನಗಳ ಬಗ್ಗೆ ಶ್ರೀಲಂಕಾದ ತಮಿಳು ಕವಿ ಚೇರನ್ ಅವರ ಕವಿತೆಯ ಕೆಲವು ಸಾಲುಗಳನ್ನು ಲೇಖಕರು ಬಳಸಿರುವುದಿದೆ.

'ಕಪ್ಪುಗಳಲ್ಲಿ ಚಹಾ ದಿಢೀರನೇ ರಕ್ತವಾಗಿದ್ದನ್ನು ತಿಳಿಯದೇ
ಇಬ್ಬರೂ ನಾಯಕರು ಕುರುಡು ರಾಜಕೀಯದಲ್ಲಿ
ಕಾಲ ಕಳೆದರು
ಮನುಷ್ಯ ಮೂಳೆಗಳು ಸುಂದರ ಚಮಚೆಗಳಾಗಿ
ತಲೆಬುರುಡೆಗಳು ತಟ್ಟೆಗಳಾಗಿ ರೂಪಾಂತರಗೊಂಡವು
ಊಟದ ಮೇಜಿನ ಮೇಲೆ
ದೂರದರ್ಶನ ಕಣ್ಣುಗಳೆಲ್ಲಾ ಕುರುಡಾದವು
ನಾವಿಲ್ಲದೇ ನಡೆದ ಒಪ್ಪಂದ ಸಾವಿರಾರು ಜೀವಗಳ
ನುಂಗಿ ನೆತ್ತರಲ್ಲಿ ಬರೆದ ಚರಿತ್ರೆ'

ಪುಸ್ತಕ ವಿಮರ್ಶೆ

● ಡಾ.ಎಸ್.ಬಿ.ಜೋಗುರ

'ಅಳು ತರಿಸುವ ರಾಂಪನ ಜೋಕುಗಳು' ಎನ್ನುವ ಬರಹ ರಾಮಪ್ಪಣ್ಣ ಎನ್ನುವ ವ್ಯಕ್ತಿಯ ವ್ಯಕ್ತಿತ್ವದ ಮೇಲೆ ಕೇಂದ್ರಿತವಾದ ಬರಹ. ಕೇವಲ ಐದು ರೂಪಾಯಿಗೆ ಹೊಟ್ಟೆ ತುಂಬ ಊಟ ಕೊಡುವ ಈ ಮನುಷ್ಯ ವಡ್ಡರ್ಸೆ ರಘುರಾಮ ಶೆಟ್ಟರ ಮುಂಗಾರಿಗೂ ಚೈತನ್ಯವಾಗಿದ್ದರು ಎನ್ನುವುದನ್ನು ತೀರಾ ಮನೋಜ್ಞವಾಗಿ ಬರೆದಿದ್ದಾರೆ. 'ವಿವೇಕ್ ಶಾನಭಾಗ್ ಕಂಡ ಉದ್ಯಾನವೊಂದರ ಕನಸು' ಎನ್ನುವ ಲೇಖನದಲ್ಲಿ ದೇಶ-ಕಾಲ ದಲ್ಲಿಯ ಅಚ್ಚುಕಟ್ಟುತನ ತನ್ನನ್ನು ಬೆರಗುಗೊಳಿಸಿತ್ತಾದರೂ 'ಜಗತ್ತಿನ ಶ್ರೇಷ್ಠವಾದುದೆಲ್ಲಾ ತನ್ನಲ್ಲಿರಬೇಕೆಂಬ ಹಟ ಈ ಪತ್ರಿಕೆಯೊಳಗಿದೆ ಎನಿಸಿತು. ಕ್ರಮೇಣವಾಗಿ 'ಈ ಪತ್ರಿಕೆಗೆ ಒಂದು ಪ್ರತಿ ಆಲೋಚನೆಯನ್ನು ಸೃಷ್ಟಿಸುವುದು ಸಾಧ್ಯವಾಗುತ್ತಿಲ್ಲ ಎನ್ನುವುದು ಗೊತ್ತಾಗತೊಡಗಿತು' ಎನ್ನುತ್ತಾರೆ. 'ಬಾಡೂಟದ ಜೊತೆಗೆ ಗಾಂಧಿ ಜಯಂತಿ' ಎನ್ನುವ ಪುಸ್ತಕದ ಶೀರ್ಷಿಕೆಯ ಲೇಖನದಲ್ಲಿ ಹೇಗೆ ಒಂದು ಧರ್ಮದ ಆಚರಣೆ ಇನ್ನೊಂದು ಧರ್ಮದವರ ಆಹಾರದ ಹಕ್ಕನ್ನು ಕಸಿಯುತ್ತದೆ ಎನ್ನುವುದನ್ನು ಹೇಳುತ್ತಾರೆ. 'ಕೆಲ ವರ್ಷಗಳ ಹಿಂದೆ ಬಕ್ರೀದ್ ಮತ್ತು ಮಹಾವೀರ ಜಯಂತಿ ಜೊತೆಜೊತೆಯಾಗಿಯೇ ಬಂತು. ಆಗ ರಾಜ್ಯದ ಮೂರ್ಖ ಸರ್ಕಾರ (ಬಾಡೂಟವನ್ನು ಅತಿಯಾಗಿ ಪ್ರೀತಿಸುತ್ತಿದ್ದ ಜೆ.ಎಚ್.ಪಟೇಲರೇ ಆಗ ಮುಖ್ಯ ಮಂತ್ರಿಯಾಗಿದ್ದದ್ದು ದುರಂತ) ಮಹಾವೀರ ಜಯಂತಿ ದಿನ ಮಾಂಸ ಮಾರಾಟವನ್ನು ನಿಷೇಧಿಸಿತು. ಒಂದು ಧರ್ಮವನ್ನು ಗೌರವಿಸುವ ಹೆಸರಿನಲ್ಲಿ ಇನ್ನೊಂದು ಧರ್ಮದ ಮೌಲ್ಯವನ್ನು ಅವಮಾನಿಸಿತು' ಎನ್ನುವುದನ್ನು ಮತ್ತು ನಿಷ್ಠುರವಾಗಿ ದಾಖಲಿಸುತ್ತಾರೆ. 'ಹುಲ್ಲು ಹುಲ್ಲು ತಿಂದು ರಾಕ್ಷಸರಾದವರು' ಎನ್ನುವ ಇನ್ನೊಂದು ಲೇಖನದಲ್ಲಿ ಕವಿ ಎನ್. ಹನುಮಂತಯ್ಯನವರ 'ಗೋವು ತಿಂದು ಗೋವಿನಂತಾದವನು' ಎನ್ನುವ ಕವಿತೆಯ ಸಾಲುಗಳನ್ನು ಉಲ್ಲೇಖಿಸುತ್ತಾ 'ಇತಿಹಾಸದುದ್ದಕ್ಕೂ ಗೋವು ತಿನ್ನದವರು ಗೋವು ತಿಂದವರ ಮೇಲೆ ದೌರ್ಜನ್ಯ ನಡೆಸಿದರೇ ಹೊರತು ಗೋವು ತಿಂದು ಬದುಕಿದವರು ಸಸ್ಯಾಹಾರಿಗಳ ಮೇಲೆ ಎರಗಿದ ಒಂದೇ ಒಂದು ಉದಾಹರಣೆಗಳಿಲ್ಲ' ಎಂದು ಹೇಳುತ್ತಾ ದೇವರು ಮತ್ತು ರಾಕ್ಷಸರ ನಡುವಿನ ಸಂಘರ್ಷ ಆರ್ಯ-ದ್ರಾವಿಡರ ಘರ್ಷಣೆಯೂ ಹೌದು ಎನ್ನುತ್ತಾರೆ. 'ಜಾತಿಗೊಬ್ಬ ಕುಲಗುರು', 'ರಾವಣನನ್ನು ಸುಡುವುದು ಎಷ್ಟು ಸರಿ..?', 'ಎದೆಯ ಧ್ವನಿಯನ್ನು ಆಲಿಸೋಣ' ಹೀಗೆ ಇಡೀ ಕೃತಿಯಲ್ಲಿ ಸಾಮಾಜಿಕ ಅಸಮಾನತೆ, ಮೇಲಿನ ಸ್ತರಗಳ ಶೋಷಣೆ, ಉಪ ಸಂಸ್ಕೃತಿಗಳ ಮೇಲೆ ಪ್ರಧಾನ ಸಂಸ್ಕೃತಿಯ ಹಾವಳಿ, ದಂತಕತೆಗಳ ವೈಭವೀಕರಣದ ಮೂಲಕ ಸವಾರಿ ಮಾಡುವ ಪ್ರಕ್ರಮ ಹೀಗೆ ಇಲ್ಲಿರುವ ಬಹುತೇಕ ಲೇಖನಗಳು ಪ್ರಾಮಾಣಿಕ ಅಭಿಪ್ರಾಯಗಳೊಂದಿಗೆ ಓದುಗನನ್ನು ಮುಖಾಮುಖಿಯಾಗಿಸುತ್ತವೆ. ಒಂದು ಕೃತಿಯಿಂದ ಇದಕ್ಕಿಂತ ಹೆಚ್ಚಿನದನ್ನು ನಿರೀಕ್ಷಿಸುವ ಅಗತ್ಯವಿಲ್ಲ ಎಂದುಕೊಳ್ಳುತ್ತೇನೆ.

ದೇವರು ದೊಡ್ಡವನು



ದೇವರು ದೊಡ್ಡವನು.
ಏನು ಹೇಳಲಿ
ಅವನ ಮಹಿಮೆಯ!

ಜಮೀನುದಾರರಿಗೆ
ಜಮೀನು ಕೊಟ್ಟ
ಅವನು
ಬಂಡವಾಳಶಾಹಿಗಳಿಗೆ
ಬಂಡವಾಳ ಕೊಟ್ಟ!

ಏನು ಹೇಳಲಿ
ಅವನ ಮಹಿಮೆಯ.
ಹುಟ್ಟಿಸಿದ್ದಕ್ಕೆ ಹುಲ್ಲು
ಮೇಯಿಸುವವನಲ್ಲ,
ಕೊಟ್ಟೇ ಕೊಡುತ್ತಾನೆ
ಕೂಲಿಕಾರರಿಗೆ ಕೂಲಿ;
ಭಿಕ್ಷುಕರಿಗೆ ತುತ್ತು ಅನ್ನ,

ತೋರಿಸುತ್ತಾನೆ ಹೀಗೆ
ತನ್ನ ಮಹಿಮೆಯ
ಸಾಬೀತುಪಡಿಸುತ್ತಾನೆ
ತನ್ನ ನಂಬಿ ಕೆಟ್ಟವರಿಲ್ಲ
ಎಂಬುದ.

ದೇವರು ದೊಡ್ಡವನು.
ಏನು ಹೇಳಲಿ
ಅವನ ಮಹಿಮೆಯ.

ಹಿಂದೂಗಳಿಗೆ
ಗೀತೆ ಕೊಟ್ಟ;
ಕ್ರೈಸ್ತರಿಗೆ
ಬೈಬಲ್ ಕೊಟ್ಟ;
ಮುಸ್ಲಿಮರಿಗೆ
ಕುರಾನ್ ಕೊಟ್ಟ.

ದೇವರು ದೊಡ್ಡವನು.
ಏನು ಹೇಳಲಿ
ಅವನ ಮಹಿಮೆಯ.
ಪರೀಕ್ಷಿಸುವುದಾಗಿ ಹೇಳಿ,
ನಿಜಮಾನವರಿಗೆ
ಕಿರಿಕಿರಿ ಕೊಟ್ಟ.
ಮಂದಿರ ಮಸೀದಿಗಳ
ಅಮಾಯಕರಿಗೆ
ಧರ್ಮಯುದ್ಧವೇ ಕೊಟ್ಟ!

ಏನೇ ಆದರೂ
ದೇವರು ದೊಡ್ಡವನು.
ಕೊಟ್ಟೇ ಕೊಡುವನು
ಕೊನೆಗೆ ಸಾವಿನಲ್ಲಾದರೂ
ಸರ್ವರಿಗೂ ಸಮಪಾಲು!

– ರಂಜಾನ್ ದರ್ಗಾ

ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಕಾಳಿಯ ಆರಾಧನೆ ಮತ್ತು ಶಾರದಾ ದೇವಿಯ ಶೋಷಣೆ


ದೇವಿಯರ ಗುಣಗಳ ವೈವಿಧ್ಯತೆಗಳಲ್ಲಿ ಸಾಕಷ್ಟು ಗಳಿವೆ. ಆದರೆ, ಬಹು ಮುಖ್ಯವಾಗಿ ಧ್ರುವಾಂತರದ ಗಳೆಂದರೆ, ಸಲಿಲತೆ ಮತ್ತು ಪೆಡಸುತನ. ಈ ದಲನೆಯ ಗುಣಕ್ಕೆ ಲಲಿತೆಯು ರೂಪಕವಾದರೆ, ಡನೆಯ ಗುಣಕ್ಕೆ ಭದ್ರಕಾಳಿಯೇ ರೂಪಕ. ವಾಗಿರುವ ಗುಣವು ಹೊರಗಿನ ಘಾತಗಳ ಅಥವಾ ಭಾವಗಳ ಪ್ರಭಾವಕ್ಕೆ ಸಿಕ್ಕುವಂತದ್ದಾದರೆ, ಭದ್ರಕಾಳಿಯು ಪೆಡಸುತನದಿಂದ ಯಾವುದೇ ಪ್ರಭಾವಗಳಿಗೆ ಕದಂತವಳು. ಈ ಎರಡೂ ಗುಣಗಳಿಗೆ ರೂಪಕಗಳು ಗೆ ನೇರವಾಗಿ ಕಾಣುವುದೆಂದರೆ ರಾಮಕೃಷ್ಣ ಮಹಂಸರ ಜೀವನದಲ್ಲಿ ಬಹುಮುಖ್ಯ ಪಾತ್ರವಹಿಸುವ ಣೇಶ್ವರದ ಕಾಳಿಯ ಆರಾಧನೆ ಮತ್ತು ಶಾರದೆಯ ಷಣೆ.


ಮಾತೆ ಶಾರದಾದೇವಿಯು ತನ್ನ ಪತಿಯಿಂದಲೇ ಯೆಂದೂ ಮತ್ತು ತಾಯಿಯೆಂದೂ ಗೌರವಿಸಿ ಡಂತಹ ಆಧ್ಯಾತ್ಮಿಕ ದೃಷ್ಟಿಯನ್ನು ಬದಿಗಿರಿಸಿದರೆ, ಾಜಿಕವಾಗಿ ಮತ್ತು ವ್ಯಕ್ತಿಗತವಾಗಿ ಶಾರದೆಯು ಶೋಷಿತೆ.

ಶಾರದಾಮಣಿ ಎಂದ ಬಡವಿ

ಐದು ವರ್ಷಗಳ ಬಾಲೆ ಈ ನಮ್ಮ ಪುಟ್ಟ ಶಾರದೆ ಕೃಷ್ಣ ಗದಾಧರನ ಕೈ ಹಿಡಿದಾಗ ಆತನ ವಯಸ್ಸು ದಾಟಿತ್ತು. ಮದುವೆಯೆಂದರೇನೆಂದೇ ತಿಳಿಯದ ಆ ಕೆಯು ಲೋಕದ ದೃಷ್ಟಿಯಲ್ಲಿ ಹುಚ್ಚನೆಂದು ಸಿಕೊಳ್ಳುತ್ತಿದ್ದ ಆ ಬ್ರಾಹ್ಮಣ ಪೂಜಾರಿಯ ಕೈ ಯಲು ಇದ್ದ ಬಹುಮುಖ್ಯ ಕಾರಣ ಆಕೆಯ ಯವರ ಬಡತನ. ಆಗಿನ ಸಮಾಜದಲ್ಲಿ ಬಾಲ್ಯವಿವಾಹವು ಾನ್ಯವಾಗಿದ್ದರೂ ಈ ಗಂಡು ಹೆಣ್ಣುಗಳ ವಯಸ್ಸು ್ಟೊಂದು ಅಂತರವಿದ್ದರೂ ಮದುವೆಗೆ ಮುಂದಾಗಿದ್ದು ಕುಟುಂಬದ ದಾರಿದ್ರ್ಯ ವ್ಯವಸ್ಥೆಯಲ್ಲದೇ ಮತ್ತೇನೂ ಮನೆಯಲ್ಲಿ ಯಾವುದೊಂದೂ ಚಿನ್ನದ ಒಡವೆಯಿಲ್ಲದ ಬಡ ಕುಟುಂಬವು ನೆರೆ ಮನೆಯಿಂದ ಎರವಲು ಚಿನ್ನದ ಬಳೆಗಳೆರಡನ್ನು ಆಕೆಗೆ ತೊಡಿಸಿದ್ದರು. ಆದರೆ, ುವೆಯಾದ ನಂತರ ಆಕೆಯನ್ನು ಕರೆದೊಯ್ಯುವಾಗ ಿನ್ನದ ಬಳೆಗಳನ್ನು ಬಿಡಿಸಿಕೊಂಡು ಅದರ ಮಾಲೀಕರಿಗೆ ುವ ಸಮಯದಲ್ಲಿ ಆಕೆ ರೋದಿಸಿದಳು. ಎಲ್ಲಾ ಾನ್ಯ ಹುಡುಗಿಯಂತೆ ತನ್ನ ಸುಪರ್ದಿನಲ್ಲಿರುವ ವಸ್ತುವನ್ನು ಡಲು ಇಷ್ಟಪಡದಂತಹ ಸಾಮಾನ್ಯ ಹೆಣ್ಣಿನ ಯಲ್ಲಿಯೇ ಆಕೆ ವರ್ತಿಸಿದ್ದಳು. ಇನ್ನು ಮುಂದಿನ ಗಳಲ್ಲಿ ತಮ್ಮನ್ನು ತಾವು ಆಧ್ಯಾತ್ಮಿಕ ಪ್ರಯೋಗಗಳಿಗೆ ಪಡಿಸಿಕೊಳ್ಳುತ್ತಿದ್ದ ರಾಮಕೃಷ್ಣರು ಸಾಮಾನ್ಯ ಡುಗಿಯೊಂದಿಗೆ ಸಾಮಾನ್ಯ ರೀತಿಯ ದಾಂಪತ್ಯವನ್ನು ಸಲು ಇಚ್ಛಿಸದೇ ಅಸಮಾನ್ಯವಾಗಿ ಆಕೆಯನ್ನು ದೇವಿಯ ಪಟ್ಟಕ್ಕೇರಿಸಿ ಪೂಜಿಸಿದರು. ಇದರ ಹಿಂದೂ ಂದೂ ಆಳ ಎತ್ತರ ಏನೂ ತಿಳಿಯದ ಮುಗ್ಧೆ ಶಾರದೇ ನ ಕಾಲದ, ಬಡ ಮತ್ತು ಆರ್ಥಿಕವಾಗಿ ಮತ್ತು ಣಿಕವಾಗಿ ಹಿಂದುಳಿದ ಎಲ್ಲಾ ಸಾಮಾನ್ಯ ಸ್ತ್ರೀಯರಂತೆ ಗಂಡನ ಮಾತುಗಳಿಗೆ ಮನ್ನಣೆಕೊಟ್ಟು ಅವರ ೇಶನದಂತೆಯೇ ನಡೆದುಕೊಂಡಳು. ರಾಮಕೃಷ್ಣರು ಯನ್ನು ನಿನಗೆ ಸಾಂಸಾರಿಕ ಸುಖ ಬೇಕೋ ಅಥವಾ ್ರತವಾದ ಮಾತೃಸ್ಥಾನ ಬೇಕೋ ಎಂಬ ಆಯ್ಕೆಯನ್ನು ಯ ಮುಂದಿಟ್ಟದ್ದೇನೋ ಸರಿ. ಆದರೆ, ಆಕೆ ತನ್ನ ಸ ಇಚ್ಛೆಗೆ ಅನುಗುಣವಾಗಿ ನಡೆದುಕೊಳ್ಳಲು ತನ್ನ ಾಜಿಕ ಪರಿಸರದಲ್ಲಿ ರೂಪುಗೊಂಡಿದ್ದಳು. ಚಿನ್ನದ ಗಳಿಗಾಗಿ ಅತ್ತ ಹುಡುಗಿ ಆ ಆಸೆಯನ್ನು ಬಿಟ್ಟಂತೆ, ಮುಂದೆ ತನ್ನ ಎಲ್ಲಾ ಸಾಮಾನ್ಯ ಆಸೆಗಳನ್ನು ಸಹಜವಾಗಿಯೇ ತ್ಯಾಗ ಮಾಡಿದ್ದಳು. ರಾಮಕೃಷ್ಣರು ತಮ್ಮ ಪಾಡಿಗೆ ತಾವು ತಮ್ಮ ಆಧ್ಯಾತ್ಮ ಸಾಧನೆಯಲ್ಲಿ ಮುಂದುವರಿದಂತೆ ಈಕೆಯ ಸಾಮಾನ್ಯ ಬದುಕು ಅಸಮಾನ್ಯವಾಗಿ ದಕ್ಷಿಣೇಶ್ವರದಲ್ಲಿ ಸವೆದಿತ್ತು. ಏನಾದರೂ ಉಪದೇಶ ನೀಡು ಎಂದು ಕೇಳುವ








ಶಿಷ್ಯರಿಗೆ ಈಕೆಯ ಅತ್ಯುನ್ನತವಾದ ಉಪದೇಶವೆಂದರೆ "ಪರದೋಷ ಕಾಣಬೇಡ. ಒಂದು ವೇಳೆ ದೋಷವನ್ನು ಕಾಣಬೇಕೆಂದರೆ ನಿನ್ನ ದೋಷವನ್ನೇ ನೀನು ಕಂಡಿಕೋ" ಎಂಬಂತಹ ಈ ಮಾತನ್ನು ತಾವು ಪಾಲಿಸಿದ ಕಾರಣದಿಂದ ತನ್ನನ್ನು ಶೋಷಿಸಿದ ಬಡ ಪೋಷಕರನ್ನಾಗಲಿ, ಹುಚ್ಚ ಪೂಜಾರಿಗೆ ತಂದುಕೊಂಡ ತನ್ನ ಗಂಡನ ಮನೆಯವರನ್ನಾಗಲಿ, ತನ್ನ ಬಾಲ್ಯವನ್ನು ವಯಸ್ಕನಿಗೆ ಕೊಟ್ಟು ಮದುವೆ ಮಾಡುವಂತಹ ವ್ಯವಸ್ಥೆಯನ್ನು ಜೀವಂತವಾಗಿಟ್ಟದ್ದಂತಹ ಸಮಾಜವನ್ನಾಗಲಿ, ತನ್ನ ಜೈವಿಕ ಅಗತ್ಯವಾದ ಲೈಂಗಿಕತೆಯನ್ನು, ಸಾಧಾರಣವಾದ ದಾಂಪತ್ಯ ಸುಖವನ್ನು, ತಾಯ್ತನ ಮತ್ತು ಹೆಣ್ತನದ ಧನ್ಯತೆಯನ್ನು ಪ್ರಕೃತಿ ಸಹಜವಾಗಿ ಅನುಭವಕ್ಕೆ ದಕ್ಕಿಸದ ಪ್ರಯೋಗಶೀಲ ಗಂಡನನ್ನು ಎಂದಿಗೂ ದೂರಲೇ ಇಲ್ಲ. ಕ್ರೂರ ಗಂಡರಂತೆ ರಾಮಕೃಷ್ಣ ತನ್ನ ಹೆಂಡತಿಗೆ ಹಿಂಸೆ ಕೊಡಲಿಲ್ಲ, ಕುಡಿದು ಬಂದು ಹೊಡೆಯಲಿಲ್ಲ, ಅವಾಚ್ಯ ಶಬ್ಧಗಳಿಂದ ನಿಂದಿಸಲಿಲ್ಲ ನಿಜ, ಆದರೆ ಆಕೆಯ ಸಾಮಾನ್ಯತನಕ್ಕೆ ಸಹಜವಾದ ಸಾಮಾನ್ಯತನದಿಂದಲೇ ಸ್ಪಂದಿಸಲಿಲ್ಲ. ಆತನೂ ಮತ್ತು ಆಕೆಯೂ ಇಬ್ಬರೂ ಆಗಿನ ಸಮಾಜದ ವ್ಯವಸ್ಥೆಯಲ್ಲಿ ಸಿಕ್ಕಿ ಬಿದ್ದವರೇ. ಆದರೆ, ರಾಮಕೃಷ್ಣರಿಗೆ ಸಮಾಜದ ಚೌಕಟ್ಟನ್ನು ಮೀರಿ ತನ್ನದೇ ಆದ ಸಾಧನೆಯನ್ನು ಮಾಡಿಕೊಳ್ಳಲು ಸಾಧ್ಯವಾಯ್ತು. ಆದರೆ, ಗಂಡನ ತೆರೆದ ಪಂಜರದಿಂದ ಹಾರಿ ಹೋಗಲಾಗದಂತೆ ಶಾರದೆಯ ರೆಕ್ಕೆಗಳನ್ನು ಸಮಾಜವು ಕತ್ತರಿಸಿತ್ತು. ಹೀಗೆ ಶಾರದೆಯು ಗಂಡನಿದ್ದೂ ಹೆಂಡತಿಯಾಗಿರದೇ, ಮಕ್ಕಳ ಸಹಜ ಭಾಗ್ಯವಿಲ್ಲದೇ, ವಿಧವೆಯಾಗಿ ಜೀವನವನ್ನು ಕೊನೆಗೊಳಿಸಿಕೊಂಡರು.

ವಾಸ್ತವವಾಗಿ ಕಾಳಿಯನ್ನು ಆರಾಧಿಸುವ ರಾಮಕೃಷ್ಣರಿಗೆ ಸಂಭೋಗವಾಗಲಿ, ಸ್ತ್ರೀ ಸಂಗವಾಗಲಿ, ಸಂಸಾರವಾಗಲಿ ನಿಷಿದ್ಧವೂ ಅಲ್ಲ. ಮೈಥುನ ತಾಂತ್ರಿಕತೆಯಲ್ಲಿ ಒಂದು ಸಾಧನಾತಂತ್ರವೇ ಆಗಿದೆ. ಹಾಗಾಗಿ ಶಾರದೆಯನ್ನು ಲೈಂಗಿಕ ಸುಖದಿಂದ ವಂಚಿಸುವ ಅಗತ್ಯವೇನಿರಲಿಲ್ಲ. ಜೊತೆಗೆ ರಾಮಕೃಷ್ಣರು ತಮ್ಮ ಆಧ್ಯಾತ್ಮ ಸಾಧನೆಯ ಪಥವನ್ನು ತಾವೇ ಕಂಡುಕೊಂಡವರೇ ಹೊರತು ಯಾವುದೇ ಸಿದ್ಧ ಪಂಥಕ್ಕೆ ಕಟ್ಟು ಬಿದ್ದವರಲ್ಲ, ಸಂನ್ಯಾಸಿಯೂ ಆಗಿದ್ದವರಲ್ಲ, ಹಾಗಿದ್ದರೂ ಶಾರದೆಯನ್ನು ಎಲ್ಲಾ ಸ್ತ್ರೀ ಸಹಜ ಅಗತ್ಯಗಳಿಂದ ವಂಚಿಸಿದರು.

ಮಾತೆ ಶಾರಾದಾದೇವಿ ಎಂದು ಬಹು ಗೌರವದಿಂದ ನಾವಿಂದು ಕರೆಯುವ ಪ್ರತಿಮೆಯ ಹಿಂದೆ ಶೋಷಣೆಗೆ ಒಳಗಾದ ಒಂದು ಸಾಮಾನ್ಯ ಹೆಣ್ಣಿನ ಕಥೆಯಿದೆ. ದುರಂತವಿದೆ. ಒಲ್ಲದ ಔನ್ನತ್ಯವಿತ್ತು ಮೂಲಭೂತ ಹಸಿವನ್ನೂ ತೀರಿಸಿಕೊಳ್ಳಲೂ ಬಿಡದ ಆ ಹೆಣ್ಣಿನ ಪಾಲಿಗೆ ಅವಳ ಪೋಷಕರು, ಗಂಡ, ಸಾಮಾಜಿಕ ವ್ಯವಸ್ಥೆ ಮತ್ತು ಅನಗತ್ಯದ ಗೌರವವನ್ನು ನೀಡಿದ ಮಂದಿ ಖಳರಾದರು, ತಡೆಗಲ್ಲುಗಳಾದರು.

ಗಂಡನ ಪ್ರಯೋಗಗಳಿಗೆ ಹೆಣ್ಣುಗಳು ಬಲಿಪಶುಗಳಾಗಿರುವುದರಲ್ಲಿ, ಗೌರವಶೋಷಣೆಗೆ ಒಳಗಾಗಿರುವುದರಲ್ಲಿ ಶಾರದೆಯೇನೂ ಒಬ್ಬೊಂಟಿಯಲ್ಲ. ಗಂಡನ ಸಾವಿನ ನಂತರ ಹೆಣ್ಣಿಗೆ ಸತಿಯ ಮಾನ್ಯತೆ ಕೊಡುವ ಮೂಲಕ ಸಮಾಜದ ಗೌರವಶೋಷಣೆಗೆ ಬಲಿಯಾಗಿ ಎಷ್ಟೋ ಮಂದಿ ಹೆಣ್ಣುಮಕ್ಕಳು ತಮ್ಮನ್ನು ತಾವು ಸುಟ್ಟುಕೊಂಡು ಮಹಾಸತಿಯರಾಗಿದ್ದಾರೆ. ಅಗ್ನಿಪ್ರವೇಶ ಮಾಡಲೊಲ್ಲದ ಗಂಡಸತ್ತ ಹೆಂಡತಿಯನ್ನು ಆಕೆಯ ಕಡೆಯವರು



ಒತ್ತಾಯಪೂರ್ವಕವಾಗಿಯೂ ಗಂಡನ ಚಿತೆಗೆ ಅಥವಾ ಅಗ್ನಿಗೆ ದಬ್ಬಿ ಅವಳಿಗೆ ಮಾಸ್ತಿಕಲ್ಲನ್ನು ನೆಟ್ಟಿರಲಿಕ್ಕೂ ಸಾಧ್ಯವಿದೆ. ತಮ್ಮ ಕುಲದಲ್ಲಿ ಹೆಣ್ಣೊಂದು ಮಹಾಸತಿಯಾದಳು ಎಂಬ ಗೌರವ ಅವಳ ಕುಟುಂಬದವರಿಗೆ ಬೇಕು. ಅದಕ್ಕೆ ಜೀವ ತೆರಬೇಕಾದವಳು ಯಾವುದೋ ನತದೃಷ್ಟ ಮತ್ತು ಸಾಮಾನ್ಯ ಹೆಣ್ಣು. 'ಗೌರವಶೋಷಣೆ' ಎಂಬ ಅಸಹ್ಯಕರವಾದ ಪ್ರತಿಷ್ಠೆಗೆ ಬಲಿಯಾದ ಹೆಣ್ಣು ಮಕ್ಕಳಲ್ಲಿ ಶಾರದಾ ದೇವಿಯೂ ಒಬ್ಬರು. ಆದರೆ ಆಕೆಯನ್ನು ಜೀವಂತವಾಗಿ ಸುಡಲಿಲ್ಲವಷ್ಟೇ!

ಜನರು ಏನು ಹೇಳಿದರೂ ಒಪ್ಪಿಕೊಳ್ಳುವ, ಹೊರಗಿನ ಅಧಿಕಾರಗಳಿಗೆ, ಪ್ರಭಾವಗಳಿಗೆ ಸುಲಭವಾಗಿ ಮಣಿಯುವ, ತನ್ನ ಸ್ವಂತಿಕೆಯನ್ನು ರೂಢಿಸಿಕೊಳ್ಳದ, ತನ್ನತನವನ್ನು ನಿರೂಪಿಸಿಕೊಳ್ಳಲಾಗದಂತಹ ಮನಸ್ಥಿತಿಗೆ ತಲುಪಲು ಕಾರಣ ಆಯಾ ವ್ಯಕ್ತಿಗಳದೇ ಧೋರಣೆ ಮತ್ತು ನಿಲುವುಗಳು. ಆದರೆ, ಅವರ ಗುಪ್ತ ಒಲವುಗಳನ್ನು ವ್ಯಕ್ತಪಡಿಸಲಾಗದಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡುವುದು ಸಾಮಾಜಿಕ ವ್ಯವಸ್ಥೆ ಮತ್ತು ಸಮೀಪವರ್ತಿಗಳ ಗಾಢ ಪ್ರಭಾವ.

ಹೆಣ್ಣಾಗಲಿ ಅಥವಾ ಗಂಡಾಗಲಿ, ಹೊಂದಿರುವ ಆಳವಾದ ಮತ್ತು ಸಲಿಲವಾದ ಮನಸ್ಥಿತಿಯ ಅಥವಾ ಮನೋಶಕ್ತಿಯ ರೂಪಕ ಪ್ರತಿಮೆಯೇ ಲಲಿತೆ. ಒಳ್ಳೆಯದಾಗಲಿ ಅಥವಾ ಕೆಟ್ಟದಾಗಲಿ, ಬೇಕಾಗಿರಲಿ ಅಥವಾ ಬೇಡವಾಗಿರಲಿ ಭಾವುಕವಾಗಿ ಸ್ವೀಕರಿಸುವ ಮನೋಗುಣವೇ ಲಲಿತೆ. ಪುರಾಣಗಳಲ್ಲಿ ಮತ್ತು ದುರ್ಗಾಸಪ್ತಶತಿಯಲ್ಲಿರುವ ಚಂಡೀಕವಚದಲ್ಲಿ ಉಲ್ಲೇಖಿಸಿರುವ ಹಾಗೆ ಲಲಿತೆಯ ಸ್ಥಾನ ಹೃದಯ.

ಭಾವನೆಗಳ ನೆಲೆ ಮತ್ತು ಭಾವದ ಸೆಲೆ

ಹೃದಯ ಕೇಂದ್ರಿತವಾದಂತಹ ವ್ಯಕ್ತಿಗಳೆಲ್ಲರೂ ಭಾವುಕರಾಗಿರುವುದಲ್ಲದೇ, ಭಾವನಾತ್ಮಕವಾಗಿ ಸ್ಪಂದಿಸುವವರು. ತಮ್ಮತನವನ್ನು ಎಂತಹ ಎಮೋಶನಲ್ ಬ್ಲ್ಯಾಕ್ ಮೇಲ್‌ಗಾದರೂ ಸುಲಭವಾಗಿ ಒಪ್ಪಿಸಿಬಿಡುವರು. ತ್ಯಾಗ ಮತ್ತು ಬಲಿದಾನಗಳಲ್ಲಿ ಇಂತವರದೇ ಮೇರು ಸ್ಥಾನ. ಇದೇ ರೀತಿಯಲ್ಲಿ ಮಾತೆ ಶಾರದಾದೇವಿಯು ತನ್ನ ವ್ಯಕ್ತಿಗತವಾದವುಗಳನ್ನೆಲ್ಲಾ ಬಲಿಗೊಟ್ಟು, ದಾಂಪತ್ಯ ಸುಖವನ್ನು ಅನುಭವಿಸದೇ, ತಾಯ್ತನವನ್ನು ಭೌತಿಕವಾಗಿ ಪಡೆಯದೇ ಭಕ್ತರಿಗೆ ಮತ್ತು ಶಿಷ್ಯರಿಗೆಲ್ಲಾ ಪಾವನ ಮಾತೆಯಾದುದು.

ಪ್ರೇಮಮಯಿ ಯೇಸು

ಇದೇ ರೀತಿಯಲ್ಲಿ ತನ್ನ ಬದುಕನ್ನು ಹೃದಯ ಕೇಂದ್ರಿತವಾದ ಪ್ರೇಮದಿಂದ ನಡೆಸಲು ಹೋಗಿ ಸಮಾಜದ ಮತ್ತು ಸಮೀಪವರ್ತಿಗಳ ಕ್ರೌರ್ಯಕ್ಕೆ ಬಲಿಯಾದ ಮತ್ತೊಂದು ಉದಾಹರಣೆ ಯೇಸು ಕ್ರಿಸ್ತ ಆದರೆ ಕ್ರಿಸ್ತನದು ಶಾರದೆಯ ಕಥೆಯಂತದ್ದಲ್ಲ. ತಾನು ನಂಬಿದ ಪ್ರೇಮದ ಸಿದ್ಧಾಂತದ ಪ್ರತಿಪಾದನೆ ಮಾಡಿದ ಯೇಸು ಎಡವಿದ್ದು ತಂದೆಯೆಂದು ಕರೆಯಲಾಗುವ ದೇವರ ಪರಿಕಲ್ಪನೆಯು ಆಧ್ಯಾತ್ಮಿಕ ವಿಜ್ಞಾನದಲ್ಲಿ ಪ್ರಾಯೋಗಿಕವಾಗಿ ಯಶಸ್ವಿಯಾಗುತ್ತದೆ ಎಂದು ವಿಶ್ವಾಸಿಸಿದ್ದು. ಯೇಸುವೂ ಕೂಡ ತಮ್ಮ ತತ್ವ, ಸಿದ್ಧಾಂತ ಮತ್ತು ಪ್ರಯೋಗಗಳು ಎಲ್ಲೋ ವಿಫಲವಾಗುತ್ತಿವೆ ಎಂದು ಗೋಚರವಾದಾಗ ದುರಂತದ ಪರಿಣಾಮವನ್ನು ಮನ್ನಿಸಿಬಿಟ್ಟಿದ್ದರು. ರೊಟ್ಟಿಯನ್ನು ಕೇಳಿದರೆ ಕಲ್ಲನ್ನು ಕೊಡದ, ಮೀನನ್ನು ಕೇಳಿದರೆ ಹಾವನ್ನು ಕೊಡದ ತಂದೆಗಿಂತ ಎಷ್ಟೋ ಘನವಾದ, ಶ್ರೇಷ್ಠವಾದ ತಂದೆ ಆ ದೇವರು ಎಂದು ನಂಬಿದ್ದ ಯೇಸು ಬಂದ ದುರಂತವನ್ನೂ ನಿನ್ನ ಇಚ್ಛೆಯಂತೆಯೇ ಆಗಲಿ ಎಂದು ಒಪ್ಪಿಬಿಟ್ಟರು. ಶಿಲುಬೆಯ ಮೇಲೆ ಸಾಯುವಾಗ ತನಗೆ ಹಿಂಸೆ ಕೊಟ್ಟವರನ್ನು ಕ್ಷಮಿಸುವ ಮೂಲಕ ತನ್ನ ಪ್ರೇಮ ಸಿದ್ಧಾಂತದ ಅಂತಿಮ ಉದಾಹರಣೆಯಾಗಿ ಅಭಿವ್ಯಕ್ತಗೊಂಡ ಯೇಸು ದೇವ-ವಿಜ್ಞಾನದ ಸಾಧನೆಯಲ್ಲಿ ವಿಫಲರಾದಾಗ ಅವರು ಅಂತಹ ಕ್ರೂರ ಅಂತ್ಯವನ್ನು ಕಾಣಲು ನೇರವಾಗಿ ಆಗಿದ್ದ ಸಾಮಾಜಿಕ ವ್ಯವಸ್ಥೆ ಮತ್ತು ಸಮೀಪವರ್ತಿಗಳ ಧೋರಣೆಯೇ ಕಾರಣ.

ಪರಿಸ್ಥಿತಿ ಹೀಗಿರುವಾಗ ಸಲಿಲವಾದ ಮನಸ್ಥಿತಿಯನ್ನು ರಕ್ಷಿಸಲು, ಅಂದರೆ ಲಲಿತೆಯ ಸಖ್ಯಕ್ಕೆ ಗಡುಸಿನ ರೂಪವನ್ನು ಕೊಡುವ ಅಗತ್ಯವಿದೆ. ಲಲಿತೆಯೇ ಕಾಳಿಯಾಗಬೇಕಾದ ಅಗತ್ಯವಿದೆ. ಹಾಗಾಗಿ ಸಲಿಲ, ಸುಂದರ, ಸುಕೋಮಲವಾದ ಲಲಿತೆಯು ಭಂಡಾಸುರನನ್ನು ಕೊಲ್ಲುವ ನಾಯಕಿಯಾಗಿ ರೂಪುಗೊಂಡಳು. ಷೋಡಶಿಯಾದ ಸುಂದರ ತರುಣಿ ರಣರಂಗಕ್ಕೆ ಇಳಿದು, ಕಾಳಿಯಂತೆ ಯುದ್ಧ ಮಾಡುವ ಪುರಾಣದ ಹೂರಣ ನಿಜಕ್ಕೂ ರೋಚಕ ಮತ್ತು ಸುಂದರ. ಲಲಿತೆಯ ಈ ಕಥೆ ಅನೇಕ ಬಗೆಯ ಮನೋವೈಜ್ಞಾನಿಕ ರೂಪಗಳನ್ನು ಪಡೆದುಕೊಳ್ಳುತ್ತದೆ. ಅದನ್ನು ಮುಂದಿನವಾರ ನೋಡೋಣ. ●

ಅಭಿವೃದ್ಧಿ ಅಲ್ಲ, ಅವನತಿಯತ್ತ ಗುಜರಾತ್

ಚುನಾವಣಾ ಪ್ರಚಾರದ ಶುರುಶುರುವಿಗೆ ಅಭಿವೃದ್ಧಿಯಲ್ಲಿ ಗುಜರಾತ್ ದೇಶದಲ್ಲೇ ನಂಬರ್ ಒನ್ ಎಂದು ಭಾರಿ ಸದ್ದು ಮಾಡುತ್ತಿದ್ದ ಮೋದಿ ಕೊನೆಕೊನೆಗೆ ಬಾಯಿ ಮುಚ್ಚಲೇಬೇಕಾಗಿ ಬಂತು. ಏಕೆಂದರೆ ಆತ ಬರೀ ಬೊಗಳೆ ಬಿಡುತ್ತಿದ್ದನೆಂದು ಸರ್ಕಾರದ ಅಂಕಿಅಂಶಗಳೇ ತೋರಿಸಿ ಕೊಟ್ಟವು. ಈಗ ನರೇಂದ್ರ ಮೋದಿಯ ಢೋಂಗಿ 'ಗುಜರಾತ್ ಅಭಿವೃದ್ಧಿ ಮಾದರಿ'ಯನ್ನು ಮಕಾಡೆ ಮಲಗಿಸುವಂತಹ ಇನ್ನೊಂದು ಪುರಾವೆ ಹೊರಬಿದ್ದಿದೆ. ಅದೇ 'ಸಾರ್ವಜನಿಕ ಕಾರ್ಯನೀತಿ ವರದಿ 2014'.

ಇದೀಗ ಬಿಡುಗಡೆಯಾಗಿರುವ ಈ ವರದಿ, ಸರ್ಕಾರಗಳು ಅಳವಡಿಸಿಕೊಳ್ಳುವ ಕಾರ್ಯನೀತಿಗಳ ಉಪಯುಕ್ತತೆ ಮತ್ತು ಅವು ಅಭಿವೃದ್ಧಿಯ ಮೇಲೆ ಬೀರಿರುವ ಪರಿಣಾಮವನ್ನು ಅಳೆಯುತ್ತದೆ. ಒಂದು ರಾಜ್ಯ ಸರ್ಕಾರದ ದಕ್ಷತೆಯನ್ನು ಆದರ ಕಾರ್ಯನೀತಿಗಳ ಪರಿಣಾಮಕಾರಿತ್ವದಿಂದ ಅಳೆಯಲು ಸಾಧ್ಯವೆನ್ನುತ್ತದೆ ಈ ಅಧ್ಯಯನ. ಇಂತಹುದೊಂದು ಅಧ್ಯಯನವನ್ನು ಕೈಗೆತ್ತಿಕೊಂಡಿರುವುದು ದೇಶದಲ್ಲಿ ಇದೇ ಮೊದಲ ಬಾರಿಗೆ. 1981ರಿಂದ ಆರಂಭಿಸಿ ಕಳೆದ ಮೂರು ದಶಕಗಳ ಅವಧಿಯಲ್ಲಿ ಭಾರತದ 26 ರಾಜ್ಯಗಳು ಏನು ಸಾಧನೆ ಮಾಡಿವೆ ಎನ್ನುವುದನ್ನು ತೋರಿಸಿಕೊಡುವ ಈ ವರದಿಯನ್ನು ತಯಾರಿಸಿದ ರಾಜೀವ್ ಮಲ್ಹೋತ್ರ ಓರ್ವ ಐಎಎಸ್ ಅಧಿಕಾರಿ. ಈತ ನಮ್ಮ ಕೇಂದ್ರ ಸರ್ಕಾರದ ಮಾಜಿ ಅರ್ಥಸಚಿವ ಪ್ರಣಬ್ ಮುಖರ್ಜಿಯವರ ಆರ್ಥಿಕ ಸಲಹೆಗಾರ ಆಗಿದ್ದವರು. ಮಾತ್ರವಲ್ಲ, ಯೋಜನಾ ಮಂಡಳಿ ಮತ್ತು ವಿಶ್ವಸಂಸ್ಥೆಯ ಮಾನವಹಕ್ಕುಗಳ ಆಯೋಗದಲ್ಲಿ ಕೆಲಸ ಮಾಡಿ ಸಾಕಷ್ಟು ಅನುಭವ ಪಡೆದವರು.

ರಾಜೀವ್ ಮಲ್ಹೋತ್ರ ಹೇಳುವಂತೆ ಸರ್ಕಾರದ ಕಾರ್ಯನೀತಿಗಳ ಅಂತಿಮ ಗುರಿಯೆ ಮಾನವ ಕಲ್ಯಾಣ. ಮಾನವ ಕಲ್ಯಾಣ ಆಗಬೇಕಿದ್ದರೆ ವ್ಯಕ್ತಿಗೆ ಜೀವನೋಪಾಯದ ಅವಕಾಶಗಳು ಲಭ್ಯವಿರಬೇಕು, ಸಾಮಾಜಿಕವಾಗಿ ಅರ್ಥಪೂರ್ಣವಾದ ಬಾಳುವೆ ಇರಬೇಕು ಮತ್ತು ಜೀವ ಭದ್ರತೆ, ಕಾನೂನಿನ ಆಡಳಿತ ಹಾಗೂ ಜೀವನಮಟ್ಟದಲ್ಲಿ ನಿರಂತರ ಸುಧಾರಣೆ ತರುವ ಸೌಕರ್ಯಗಳು ಸಿಗಬೇಕು. ಆದುದರಿಂದ ಈ ಅಧ್ಯಯನದಲ್ಲಿ ಕಾರ್ಯನೀತಿಗಳ ಪರಿಣಾಮಕತ್ವವನ್ನು ಅಳೆಯಲು ನಾಲ್ಕು ಮಾನದಂಡಗಳನ್ನು ಬಳಸಲಾಗಿದೆ. (1) ಕಾನೂನಿನ ಆಡಳಿತ (2) ಜೀವನೋಪಾಯದ ಅವಕಾಶಗಳು (3) ಸಾಮಾಜಿಕ ಅವಕಾಶಗಳು (4) ಮೂಲಸೌಕರ್ಯಗಳಲ್ಲಿ ಪ್ರಗತಿ.

1981-2011ರ ಅವಧಿಯ ಈ ಅಧ್ಯಯನ ಭಾರತದ ಅಭಿವೃದ್ಧಿ ಪ್ರಕ್ರಿಯೆ ಬಗ್ಗೆ ಸಾಮಾನ್ಯವಾಗಿ ಪ್ರಚಲಿತವಿದ್ದ ತಿಳಿವಳಿಕೆಗಳಿಗೆ ಮತ್ತು ಇದುವರೆಗೆ ಗುರುತಿಸಲ್ಪಡದ ಫಲಿತಾಂಶಗಳಿಗೆ ಪುರಾವೆ ಒದಗಿಸುತ್ತದೆ. ಮೂರು ದಶಕಗಳಲ್ಲಿ ದೇಶದ ಸೂಚ್ಯಂಕ ಕ್ರಮೇಣ ಅಭಿವೃದ್ಧಿ ಆಗಿದೆಯಾದರೂ ಅದು ಹೇಳಿಕೊಳ್ಳುವಷ್ಟು ಆಗಿರದೆ ಇನ್ನೂ ಕನಿಷ್ಠ ಮಟ್ಟದಲ್ಲೆ ಉಳಿದಿದೆ ಎನ್ನುತ್ತದೆ ವರದಿ. ದೇಶಾದ್ಯಂತ ಜೀವನೋಪಾಯದ ಅವಕಾಶಗಳು, ಕಾನೂನು ಸುವ್ಯವಸ್ಥೆ ಮತ್ತು ನ್ಯಾಯದಾನ ಪ್ರಕ್ರಿಯೆಗಳಲ್ಲಿ ಸಾಕಷ್ಟು ಸುಧಾರಣೆ ಆಗಿರದ ಅಂಶವನ್ನು ವರದಿ ಬಯಲಿಗೆಳೆಯುತ್ತದೆ.

ಆದರೆ ಗುಜರಾತ್ ರಾಜ್ಯದ ವಿಷಯಕ್ಕೆ ಬಂದರೆ



ಅಲ್ಲಿ ಕಳೆದ ಹತ್ತು ವರ್ಷಗಳಲ್ಲಿ ಅಂದರೆ ಮೋದಿ ಆಡಳಿತಾವಧಿಯಲ್ಲಿ ರಾಜ್ಯದ ಪರಿಣಾಮಕತ್ವ ಸೂಚ್ಯಾಂಕ ಅವನತಿಯ ಹಾದಿ ಹಿಡಿದಿದೆಯೆಂದು ವರದಿ ಹೇಳುತ್ತದೆ. 2001ರಲ್ಲಿ 11ನೆ ಸ್ಥಾನದಲ್ಲಿದ್ದ ಗುಜರಾತ್ 2011ರಲ್ಲಿ 16ನೆ ಸ್ಥಾನಕ್ಕಿಳಿದಿದೆ. ಮೂಲಸೌಕರ್ಯಗಳ ಪ್ರಗತಿಯೊಂದನ್ನು ಹೊರತುಪಡಿಸಿದರೆ ಮಿಕ್ಕ ಮೂರೂ ವಿಷಯಗಳಲ್ಲಿ ಗುಜರಾತ್ ಇತರ ರಾಜ್ಯಗಳಿಗಿಂತ ಹಿಂದುಳಿದಿದೆ. ಸಿಕ್ಕಿಂ, ಮಿಜೋರಾಂ, ಗೋವಾ, ಪಂಜಾಬ್, ದೆಹಲಿಗಳು ಉತ್ತಮ ಸೂಚ್ಯಂಕ ಪಡೆದು ಪಟ್ಟಿಯ ಮೇಲ್ಭಾಗದಲ್ಲಿದ್ದರೆ ಒಡಿಶಾ, ಬಿಹಾರ, ಮಧ್ಯಪ್ರದೇಶ, ಅಸ್ಸಾಂ ಮತ್ತು ಪಶ್ಚಿಮಬಂಗಾಳಗಳು ಕೊನೆಯಲ್ಲಿವೆ.

'ಗುಜರಾತ್ ಅಭಿವೃದ್ಧಿ ಮಾದರಿ' ದೇಶವನ್ನು ಎತ್ತ ಕೊಂಡೊಯ್ಯಲಿದೆ ಎಂದು ಅರ್ಥವಾಯಿತೇ?

(http://epaper.timesofindia.com)

****

ಇವತ್ತು ಯಾವುದೇ ಪತ್ರಿಕೆ ತೆರೆದರೂ, ಯಾವುದೇ ಟಿವಿ ಚಾನಲ್ ಹಾಕಿದರೂ, ಅಂತರ್ಜಾಲಕ್ಕೆ ಹೋದರೂ ಬಿಜೆಪಿಗೆ ಮತ ಹಾಕಿ, ಮೋದಿಯನ್ನು ಗೆಲ್ಲಿಸಿ, ಅಬ್ ಕೀ ಬಾರ್ ಮೋದಿ ಸರ್ಕಾರ್ ಎನ್ನುವಂಥಾ ಜಾಹೀರಾತುಗಳ ಸುರಿಮಳೆಯನ್ನೇ ಕಾಣಬಹುದು. ಅಷ್ಟೇ ಅಲ್ಲ, ಎಫ್‌ಎಂ ರೇಡಿಯೊ ಚಾನಲ್‌ಗಳಲ್ಲಿಯೂ ಪ್ರತಿ ಐದು ನಿಮಿಷಗಳಿಗೊಮ್ಮೆ ಇದೇ ತುಣುಕುಗಳು ಕಿವಿಗಪ್ಪಳಿಸುತ್ತಿರುತ್ತವೆ. ಹೌದು, ಪ್ರಶ್ನೆಯೊಂದು ನಿಮ್ಮ ಮನದಲ್ಲಿ ಈಗಾಗಲೆ ಮೂಡಿರಬಹುದು - ಇಷ್ಟೆಲ್ಲಾ ಪ್ರಚಾರಕ್ಕೆ ದುಡ್ಡೆಷ್ಟು ಬೇಕು?

ವಾಸ್ತವವಾಗಿ ಬಿಜೆಪಿಯು ಈ ಬೃಹತ್ತಾದ ಪ್ರಚಾರಾಂದೋಲನಕ್ಕೆ ಏನಿಲ್ಲವೆಂದರೂ 5,000 ಕೋಟಿ ಖರ್ಚಾಗಬಹುದೆಂದು ಕೆಲವು ನಂಬಲರ್ಹ ಮೂಲಗಳು ತಿಳಿಸಿವೆ. ಮೋದಿ ನೇತೃತ್ವದಲ್ಲಿ ಬಿಜೆಪಿ ಹೆಣೆದಿರುವ ಕಾರ್ಯತಂತ್ರದಂತೆ ಪತ್ರಿಕಾ ಓದುಗರು, ಟಿವಿ ವೀಕ್ಷಕರು, ರೇಡಿಯೊ ಕೇಳುಗರು, ದಾರಿಹೋಕರು ಎಲ್ಲರೂ ಪ್ರತಿ ನಿಮಿಷವೂ ಒಂದಿಲ್ಲೊಂದು ವಿಧದಲ್ಲಿ ಮೋದಿಯನ್ನು, ಬಿಜೆಪಿಯನ್ನು ಕಾಣುತ್ತಿರಬೇಕು ಅಥವಾ ಕೇಳುತ್ತಿರಬೇಕು. ಮಾತ್ರವಲ್ಲ ಈ ಪ್ರಚಾರದ ಅಬ್ಬರಕ್ಕೆ ಇತರ ಪಕ್ಷಗಳೆಲ್ಲಾ ಮುಳುಗಿ ಹೋಗಬೇಕು. ಭಾರತದಲ್ಲಿ ಇಂತಹ ಒಂದು ಮೀಡಿಯಾ ಆಂದೋಲನವನ್ನು ವ್ಯವಸ್ಥಿತವಾಗಿ ಯೋಜಿಸುವ ಕೆಲಸಕ್ಕಾಗಿ ಮ್ಯಾಡಿಸನ್ ವರ್ಲ್ಡ್ ಎಂಬ ಜಾಹೀರಾತು ಸಂಸ್ಥೆಯನ್ನು ನೇಮಿಸಲಾಗಿದೆ. ಇದರ ಒಟ್ಟು ವೆಚ್ಚ ರೂ. 5,000 ಕೋಟಿಗಳೆಂದು ಅಂದಾಜಿಸಲಾಗಿದೆ. ಈ 5,000 ಕೋಟಿಗಳಲ್ಲಿ ಕನಿಷ್ಠ 4,500 ಕೋಟಿ ಮಾಧ್ಯಮ, ಅಂತರ್ಜಾಲ ಮತ್ತು ರೇಡಿಯೊ ಜಾಹೀರಾತುಗಳಿಗಾಗಿದ್ದರೆ ಮಿಕ್ಕ ರೂ. 500 ಕೋಟಿಗಳನ್ನು ಕೆಲವು ಸೂಕ್ಷ್ಮ ಮತದಾರ ಕ್ಷೇತ್ರಗಳಲ್ಲಿ ಕೊನೆಗಳಿಗೆಯಲ್ಲಿ ಉದ್ಭವಿಸಬಹುದಾದ ಖರ್ಚುಗಳಿಗಾಗಿ ಕಾಯ್ದಿರಿಸಲಾಗಿದೆ.


ದೇಶದಾದ್ಯಂತ 15,000ಕ್ಕೂ ಅಧಿಕ ಫ್ಲೆಕ್ಸ್, ಕಟೌಟ್ ಇತ್ಯಾದಿಗಳನ್ನು ಮೂರು ತಿಂಗಳ ಅವಧಿಗೆ ಬುಕ್ ಮಾಡಿ ಆಗಿದೆ. ಜಾಗದ ಮೇಲೆ ಹೊಂದಿಕೊಂಡು ಇಂತಹ ಒಂದೊಂದು ಕಟೌಟ್‌ಗೆ ಪ್ರತಿ ತಿಂಗಳಿಗೆ 2, 3 ಲಕ್ಷದಿಂದ ಹಿಡಿದು 20 ಲಕ್ಷ ಬೇಕಾಗಬಹುದು. ಅಂದರೆ ಒಟ್ಟಾರೆ ಸುಮಾರು 2,500 ಕೋಟಿ ಬೇಕಾಗಬಹುದೆಂದು ಅಂದಾಜು ಮಾಡಲಾಗಿದೆ.

ಇನ್ನು ಮುದ್ರಣಮಾಧ್ಯಮಗಳಿಗೆ ಬಂದರೆ ಇಂಗ್ಲಿಷ್, ಹಿಂದಿ, ಸ್ಥಳೀಯ ಮತ್ತಿತರ ಪತ್ರಿಕೆಗಳು ಸೇರಿದಂತೆ ಒಟ್ಟು 50 ಪತ್ರಿಕೆಗಳಿಗೆ ಜಾಹೀರಾತುಗಳನ್ನು ಬುಕ್ ಮಾಡಲಾಗಿದೆ. ಅದೂ 40 ದಿನಗಳ ಅವಧಿಗೆ. ಚುನಾವಣೆ ಮುಗಿಯುವ ತನಕ ದಿನಕ್ಕೆ ನಾಲ್ಕೈದಾದರೂ ಜಾಹೀರಾತು ಬಿಡುಗಡೆಯಾಗಬೇಕು ಎಂಬ ಶರತ್ತಿನೊಂದಿಗೆ. ಇದಕ್ಕೊಂದು ರೂ. 500 ಕೋಟಿ ಮೀಸಲಿಡಲಾಗಿದೆ. ಇದಲ್ಲದೆ ನಿಯತಕಾಲಿಕಗಳಿಗೆಂದೆ ಇನ್ನೂ ರೂ. 150 ಕೋಟಿ ತೆಗೆದಿರಿಸಲಾಗಿದೆ.

ಹಿಂದಿ, ಇಂಗ್ಲಿಷ್, ಸ್ಥಳೀಯ ಮನರಂಜನೆ, ಆಟೋಟ ಚಾನಲ್ ಸೇರಿದಂತೆ ವಿವಿಧ ದೃಶ್ಯ ಮಾಧ್ಯಮಗಳಲ್ಲಿ ದಿನಕ್ಕೆ 2,000 ಸ್ಲಾಟ್‌ಗಳನ್ನು ಖರೀದಿಸಲಾಗಿದೆ. ಪ್ರತಿ ಸೆಕೆಂಡಿಗೆ ಸುಮಾರು ರೂ. 80,000ದಂತೆ ಇದಕ್ಕೆ ತಗಲುವ ಒಟ್ಟು ವೆಚ್ಚ ರೂ. 800ರಿಂದ 1,000 ಕೋಟಿಗಳಷ್ಟಾಗಬಹುದು. ಟಿ-20 ವಿಶ್ವ ಕಪ್ ಸಂದರ್ಭದಲ್ಲಿ ಹೆಚ್ಚುವರಿಯಾಗಿ ರೂ. 150 ಕೋಟಿ ಖರ್ಚು ಮಾಡಲಾಗಿದೆ. ಇನ್ನು ಅಂತರ್ಜಾಲ ಮತ್ತು ರೇಡಿಯೊ ಜಾಹೀರಾತುಗಳಿಗಾಗಿ ಸುಮಾರು ರೂ. 35 ಕೋಟಿ ಬೇಕಾಗಬಹುದೆಂದು ಅಂದಾಜಿಸಲಾಗಿದೆ.

ಕೇವಲ ಪ್ರಚಾರಕ್ಕೋಸ್ಕರ ಇಷ್ಟು ಖರ್ಚಾದರೆ ಇನ್ನು ನಾಯಕರುಗಳ ಪ್ರಯಾಣ, ಭಾಷಣ, ಸಭೆ ಮತ್ತಿತರ ಹತ್ತುಹಲವು ಖರ್ಚುಗಳಿಗೆ ಇನ್ನೆಷ್ಟು ಸಾವಿರ ಕೋಟಿ ತಗುಲಬಹುದು? ಇಷ್ಟೆಲ್ಲಾ ದುಡ್ಡು ಎಲ್ಲಿಂದ ಬರುತ್ತಿದೆ? ಹೇಗೆ ಬರುತ್ತಿದೆ? ಇದೆಲ್ಲವೂ ಬಿಳಿ ಹಣವಾ? ಅಯೋಧ್ಯೆಯ ಆ ಶ್ರೀರಾಮನೇ ಬಲ್ಲ!

(http://www.hindustantimes.com)



ಮೋದಿ ಎಂಬ ತುತ್ತೂರಿ ಊದುತ್ತಿರುವ ಕಿಂದರ ಜೋಗಿಗಳು

ನಾವು ಚಿಕ್ಕಂದಿನಲ್ಲಿ ಕನ್ನಡದ ಬೊಮ್ಮನಹಳ್ಳಿ ಕಿಂದರ ಜೋಗಿ ಅಥವಾ ಇಂಗ್ಲಿಷಿನ ಪೈಡ್ ಪೈಪರ್ ಎಂಬ ಕಥೆಯನ್ನು ಓದಿದ್ದೇವೆ. ಅದರಲ್ಲಿ ಕಿಂದರ ಜೋಗಿ ಕೊಳಲು ಬಾರಿಸಿ ಊರಿನ ಇಲಿಗಳನ್ನು ಮಾತ್ರವಲ್ಲ ಊರಿನ ಎಲ್ಲ ಮಕ್ಕಳನ್ನು ಸಹ ಮಂತ್ರಮುಗ್ಧರನ್ನಾಗಿ ಮಾಡಿ ತನ್ನೊಂದಿಗೆ ಕರೆದೊಯ್ಯುತ್ತಾನೆ ಮತ್ತು ಅವರನ್ನೆಲ್ಲ ಮಾಯ ಮಾಡಿ ಊರಿನವರಿಗೆ ಅಪಾರ ದುಃಖ ತಂದೊಡ್ಡುತ್ತಾನೆ.

ಅದೇರೀತಿ ಬಿಜೆಪಿಯವರು ಮೋದಿಯನ್ನು ಕಿಂದರ ಜೋಗಿಯಂತೆ ಉಪಯೋಗಿಸಿ ಪೇಡ್ ಮೀಡಿಯಾದವರನ್ನು ತನ್ನೊಂದಿಗೆ ಕರೆದೊಯ್ದು ಗುಂಡಿಗೆ ಬೀಳಿಸುವುದು ಖಂಡಿತ. ಅದೇನೋ ಗುಜರಾತ್ ಮಾದರಿಯಂತೆ. ಸ್ವತಃ ಗುಜರಾತಿಗಳೇ ಈ ಗುಜರಾತ್ ಮಾಡೆಲ್ಲನ್ನು ನಂಬುತ್ತಿಲ್ಲ. ಮೋದಿ ಅಲೆ ಎಂಬ ಭ್ರಮೆ ಹುಟ್ಟಿಸಿ ಇತರ ರಾಜ್ಯದವರನ್ನು ಮಂಗ ಮಾಡಲು ಬಿಜೆಪಿ ಹೊರಟಿರುವುದು ವಿಪರ್ಯಾಸ.

ಗುಜರಾತಿಗಿಂತ ಹೆಚ್ಚು ಔದ್ಯಮಿಕ ಅಭಿವೃದ್ಧಿ ಸಾಧಿಸಿರುವ ತಮಿಳುನಾಡು, ಹರಿಯಾಣ, ಮಹಾರಾಷ್ಟ್ರಗಳ ಸಾಧನೆಯನ್ನು ಕಡೆಗಣಿಸಿ ಕೇವಲ ಗುಜರಾತಿನ ತುತ್ತೂರಿ ಊದುತ್ತಿರುವ ಪೇಡ್ ಮೀಡಿಯಾಗಳು ಮಾಡುತ್ತಿರುವ ಅನಾಹುತ ಅವರಿಗೇ ಗೊತ್ತಿಲ್ಲದಿರುವುದು ಖೇದಕರ. ಮದ್ಯಪಾನ ನಿಷೇಧವಿರುವ ಗುಜರಾತಿನ ಗಲ್ಲಿ-ಗಲ್ಲಿಗಳಲ್ಲಿ ಕಳ್ಳ ಭಟ್ಟಿ ಸಾರಾಯಿ ಸಿಗುವಂತೆ ಮಾಡಿರುವ ಮೋದಿಯ ಸಾಧನೆಯನ್ನು ಪೇಡ್ ಮೀಡಿಯಾಗಲು ಮರೆಮಾಚುತ್ತಿವೆ.



ಕರ್ನಾಟಕದ ಮಟ್ಟಿಗೆ ಲೋಕಸಭೆ ಚುನಾವಣೆ ಮುಗಿಯಿತು. ಪ್ರಧಾನಮಂತ್ರಿ ಮೋದಿಯ ಮೀಡಿಯಾ ಅಡ್ವೈಸರ್ ಆಗುವ ಕನಸು ಕಾಣುತ್ತಿರುವ ಬೆತ್ತಲೆ ಸಿಂಹ-ಗೌಡ ಮತ್ತೂ ವಿಶ್ವೇಶ್ವರಭಟ್ಟರು ಹಾಗೂ ಇಡೀ ಬಿಜೆಪಿ ಪಕ್ಷಕ್ಕೆ ತಾನೇ ರಾಜಗುರು ಆಗುವ ಕನಸು ಕಾಣುತ್ತಿರುವ ಪೀಚಲು ಪೇಜಾವರ ಶ್ರೀಗಳು ಚುನಾವಣೆ ಫಲಿತಾಂಶದವರೆಗಾದರೂ ಭೂಮಿಯ ಮೇಲೆ ಇಳಿಯುತ್ತಾರೆ ಎಂದು ನಿರೀಕ್ಷಿಸೋಣವೇ? ಹಾಗೆಯೇ ಹಿಂದೂತ್ವವಾದಿ ಕನ್ನಡ ದಿನಪತ್ರಿಕೆಗಳಾದ ಕನ್ನಡ ಪ್ರಭ, ವಿಜಯವಾಣಿ, ಉದಯವಾಣಿ, ಹೊಸ ದಿಗಂತ ಮುಂತಾದ ದೈನಿಕಗಳು ಇನ್ನಾದರೂ ಕರ್ನಾಟಕದಲ್ಲಿ ಮೋದಿಯ ತುತ್ತೂರಿ ಊದುವುದನ್ನು ನಿಲ್ಲಿಸಿ ನಿಷ್ಪಕ್ಷ ಸುದ್ದಿಗಳನ್ನು ಪ್ರಸಾರ ಮಾಡಿದರೆ ಒಳಿತು.

- ಅಭಿಷೇಕ್ ಎ. ಪಡಿವಾಳ್, ಸುಳ್ಯ

ಜಾಹೀರಾತಿಲ್ಲದೆ ಪತ್ರಿಕೆ ನಡೆಯುತ್ತಿರುವುದು ಹೇಗೆ?

ರಾಜ್ಯದ 28 ಕ್ಷೇತ್ರಗಳಲ್ಲೂ ಕಾಂಗ್ರೆಸ್ ಗೆಲ್ಲುತ್ತದೆ ಎಂದು ಪತ್ರಿಕೆ ಹೇಳಿರುವುದರಿಂದ ನಾವ್ಯಾರೂ ಮತ ಚಲಾಯಿಸುವ ಅವಶ್ಯಕತೆ ಇಲ್ಲ ಎನಿಸುತ್ತದೆ. ನಾನು ಯಾವ ಪಕ್ಷದ ಸದಸ್ಯನಲ್ಲ, ಆದರೆ ಯುಪಿಎ ಸರ್ಕಾರ ಮಾಡಿರುವ ಭ್ರಷ್ಟಾಚಾರದ ಬಗ್ಗೆ ನೀವು ವರದಿ ಮಾಡದೆ ಇರುವುದು ಸರಿಯಲ್ಲ.


ಅಂದಹಾಗೆ, ನಿಮ್ಮ ಪತ್ರಿಕೆ ಜಾಹೀರಾತುಗಳನ್ನು ಸ್ವೀಕರಿಸುವುದಿಲ್ಲ. ಆದರೂ ನೀವು ಪತ್ರಿಕೆಯನ್ನು ನಡೆಸುವುದು ಹೇಗೆ? ಯಾರೂ ನಿಮ್ಮ ಪತ್ರಿಕೆಯನ್ನು ಓದುವುದಿಲ್ಲ. ಅದನ್ನು ಯಾರೂ ನಂಬುವುದಿಲ್ಲ, ನೀವು ಪತ್ರಿಕೆಯನ್ನು ಬಂದ್ ಮಾಡಿದರೆ ವಾಸಿ.

- ಸಂದೀಪ್, ಈ ಮೇಲ್ ಮೂಲಕ

ಸಮುದ್ರಕ್ಕೆ ಸೇತುವೆ ಕಟ್ಟದೇ ಮೋದಿಗೆ ಹೆಂಡತಿ ಸಿಕ್ಕಳು


ಮೂಗು ಹಿಡಿದರೆ ಬಾಯಿ ತೆರೆಯದೇ ಬೇರೆ ದಾರಿಯಿಲ್ಲ. ಚುನಾವಣಾ ಆಯೋಗದ ಕಟ್ಟುನಿಟ್ಟಿನ ನಿಯಮದ ಹಂಗಿಗೆ (ಇಲ್ಲವಾದಲ್ಲಿ ನಾಮಪತ್ರ ತಿರಸ್ಕೃತಗೊಂಡು ಹುಸಿ ಪ್ರಧಾನಿ ಪಟ್ಟ ಕಳೆಕೊಳ್ಳುವ ಭಯ) ಬಿದ್ದ ಮೋದಿ ಹಿಂದಿನಂತೆ ಕಳ್ಳಾಟವಾಡದೇ ಹೆಂಡತಿ ಹೆಸರಿನ ಜಾಗವನ್ನು ಖಾಲಿ ಬಿಡದೇ ಭರ್ತಿ ಮಾಡಿ ಈಗ ಇಂಗು ತಿಂದ ಮಂಗನಂತಾಗಿದ್ದಾನೆ.

ಮನಸಾರೆ ಮಾಡಿದ ಕಾರ್ಯವಲ್ಲದ ಕಾರಣ ಈ ಬಗ್ಗೆ ಮೋದಿ ಟುಟಿಪಿಟಿಕ್ ಎನ್ನಲಿಲ್ಲ, ಆತನದ್ದೇನಿದ್ದರೂ "ಎಕೆ-47, ಎಕೆ-47" ಎಂದು ಉಳಿದವರ ಬಗ್ಗೆ ಹರಿಹಾಯುವುದೇ ಹೊರತು ಆತನ ಬಗ್ಗೆ ಯಾರೂ ಪ್ರಶ್ನೆ ಕೇಳುವ ಹಾಗಿಲ್ಲ. ಅತ್ಯಂತ ದೀರ್ಘ ಸಮಯದ ಬಳಿಕ ಮೋದಿ ತನ್ನ ಹೆಂಡತಿಯ ಅಸ್ತಿತ್ವವನ್ನು ಒಪ್ಪಿಕೊಂಡಿದ್ದಾನೆ. ಆದರೂ ಆತನ ಹೆಂಡತಿಯ ಬಗ್ಗೆ ಮಾತಾಡುವುದು ಮಾತ್ರ ಆತನ ಚೇಲಾಗಳೇ ಹೊರತು ಮೋದಿಯಲ್ಲ. ಆತನದ್ದು ಬಾಲ್ಯ ವಿವಾಹವಂತೆ, ಹೆಂಡತಿಯೇ ಗಂಡನನ್ನು ದೇಶಸೇವೆಗೋಸ್ಕರ ಮನದುಂಬಿ ಹಾರೈಸಿ ಕಳಿಸಿಕೊಟ್ಟಳಂತೆ, ಹಾಗಂತೆ ಹೀಗಂತೆ... ಮೋದಿ ಬುದ್ಧನಂತೆ



'ಟ್ಯೂಬ್‌ಲೈಟ್' ಮೇಲೆ ಫೋಕಸ್

ಈಗಾಗಲೇ ಲೆಹ್, ಲಡಾಕ್, ಗೋವ, ಬೆಂಗಳೂರುಗಳಲ್ಲಿ ಚಿತ್ರೀಕರಣ ನಡೆಸಿರುವ 'ಟ್ಯೂಬ್‌ಲೈಟ್' ಎಂಬ ವಿಚಿತ್ರ ಟೈಟಲ್ ಉಳ್ಳ ಚಿತ್ರದ ಮೂಲಕ ನಿರ್ದೇಶಕರಾಗುತ್ತಿರುವ ವೇಣು ಗೋಪಾಲ್ ಹೊಸ ಕನಸುಗಳನ್ನು ಹೊತ್ತ ಆಧುನಿಕ ಹುಡುಗ. 'ಟ್ಯೂಬ್‌ಲೈಟ್' ನಂತರ 'ಹವಾ ಹವಾಯಿ' ಎಂಬ ವಿಶಿಷ್ಟ ಟೈಟಲ್ ಇರುವ, ಚಿತ್ರದ ಬಹುಪಾಲು ಭಾಗವನ್ನು ದಕ್ಷಿಣ ಆಫ್ರಿಕಾದಲ್ಲಿ ಚಿತ್ರೀಕರಿಸುವ ಆಕಾಂಕ್ಷೆ ಹೊಂದಿರುವ ಇವರು ಇಲ್ಲಿ ಮಾತಾಡಿದ್ದಾರೆ.



ಸಂದರ್ಶನ

*** ನಿಮ್ಮ ಊರು, ಕುಟುಂಬ ವಿದ್ಯಾಭ್ಯಾಸ ಕುರಿತು ಹೇಳುತ್ತೀರ?**

ಐ ಯಾಮ್ ಬೇಸಿಕಲಿ ಫ್ರಮ್ ಬೆಂಗಳೂರು, ಹುಟ್ಟಿದ್ದು ...ಹಾಸನದಲ್ಲಿ, ವಿದ್ಯಾಭ್ಯಾಸ ಎಲ್ಲ ಬೆಂಗಳೂರಲ್ಲೇ ಆಗಿದ್ದು. ...ದ್ಯ ನಮ್ಮನೇಲಿ ನಾನು ಮತ್ತು ನಮ್ಮ ತಾಯಿ ಇರೋದು. ...ಮ್ಮ ತಾಯಿ ಸೌಭಾಗ್ಯ ಮತ್ತು ತಂದೆ ಶ್ರೀನಿವಾಸಮೂರ್ತಿ. ...ಂದೆ ಬಿಟಿಎಸ್ ಮೂರ್ತಿ ಅಂತ ಪರಿಚಿತರು. ಅವರು ...ಾವಿದರಾಗಿ ನೂರಿಪ್ಪತ್ತು ಚಿತ್ರಗಳಲ್ಲಿ ಅಭಿನಯಿಸಿದ್ರು. ...ವರು ನಮ್ಮ ಜೊತೆ ಇಲ್ಲ ಇವತ್ತು, ಅವರು ತೀರ್ಕೊಂಡು ...ಲ್ಕು ವರ್ಷ ಆಯ್ತು. ಇವತ್ತು ಅವರು ಇದ್ದಿದ್ರೆ ತುಂಬ ...ುಷಿ ಪಡ್ತಿದ್ರು. ಅವರ ಮಗ ಅಂತ ಹೇಳ್ಕೊಳಕ್ಕೆ ...ುಂಬ ಹೆಮ್ಮೆ ಆಗ್ತಿದೆ.

ವೆಬ್‌ಸ್ಟರ್ ಹೈಸ್ಕೂಲಲ್ಲಿ ಟೆಂತ್‌ವರೆಗು, ನಂತರ ...ಇಎಸ್ ಕಾಲೇಜಲ್ಲಿ ಪಿಯುಸಿ. ಆಮೇಲೆ ಕಾಲ್‌ಸೆಂಟರಲ್ಲಿ ...ಲಸ ಮಾಡ್ಕೊಂಡು, ಎರಡ್ ವರ್ಷ ಕರೆಸ್ಪಾಂಡೆನ್ಸ್ ಅಲ್ಲಿ ...ಕಾಂ ಮುಗ್ಸಿದಿನಿ.

*** ಕಲೆಕಡೆಗಿನ ಆಸಕ್ತಿ ಯಾವ ವಯಸ್ಸಿನಲ್ಲಿ ಬಂತು?**

ಮುಖ್ಯ ಕಾರಣ ಅಂದ್ರೆ ನಮ್ಮ ತಂದೆ. ಅವರು ...ಲಾವಿದರಾಗಿದ್ದರಿಂದ ಮನೇಲಿ ಬೇರೆ ಬೇರೆ ಸ್ಕ್ರಿಪ್ಟ್ ಪ್ರಾಕ್ಟಿಸ್ ...ಾಡ್‌ತಿದ್ರು. ಅದೇನು ಅರ್ಥ ಆಗ್‌ದಿದ್ರು ಅದನ್ನೆಲ್ಲ ...ೋಡಿ, ಅವರು ಹೇಳೋದನ್ನೆಲ್ಲ ಕೇಳುಸ್ಕೊತಿದ್ದೆ. ಅವರು ...ಾಗವಾಗ ಬರವಣಿಗೆಯಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ಅದನ್ನೆಲ್ಲ ನೋಡಿ ನನಗೂ ಕಲೆ ಕಡೆ ಆಸಕ್ತಿ ಬಂತು.

*** ಶಾಲಾಕಾಲೇಜು ದಿನಗಳಲ್ಲಿ ನಾಟಕ, ಸಿನಿಮಾದ ಕಡೆಗೆ ಒಲವಿತ್ತೆ?**

ಖಂಡಿತ ಇರಲಿಲ್ಲ, ನಾನು ಸೆವೆಂತ್‌ವರೆಗು ಓದಿದ್ದು ಐಸಿಎಸ್‌ಸಿ ಸಿಲಬಸ್, ಲಿಟಲ್ ಫ್ಲವರ್ ಪಬ್ಲಿಕ್ ಸ್ಕೂಲ್ ಅಂತ, ಅಲ್ಲಿ ಅವರು ಕನ್ನಡ ಹೇಳಿಕೊಟ್ಟಿದ್ದೆ ಐದನೆ ಕ್ಲಾಸಿಂದ. ಹೈಸ್ಕೂಲಲ್ಲಿ ನಾನು ಯಾವ್ದೆ ನಾಟಕದಲ್ಲಿ ಫಾರ್ಟಿಸಿಪೇಟ್ ಮಾಡಿಲ್ಲ. ಆದ್ರೂ ನಮ್ಮ ಸ್ಕೂಲ್ ಸೀನಿಯರ್ಸ್ ಯಾರ್‍ಯಾರ್ ನಾಟಕ ಮಾಡ್ತಿದ್ರೊ ಅವರಿಗೆಲ್ಲ ಅದರ ಬಗ್ಗೆ ತಿಳ್ಕೊಳಕ್ಕೆ ಕುತೂಹಲದಿಂದ ತಲೆ ತಿಂತಿದ್ದೆ. ಅಲ್ಲಿಂದ ಕನ್ನಡದ ಬಗ್ಗೆ ಒಂದು ಗೀಳು ತುಂಬಾ ಬೆಳಕೊಂತು.

*** ಸಿನಿಮಾ ರಂಗದತ್ತ ಆಸಕ್ತಿ ಹುಟ್ಟಿಕೊಂಡದ್ದು ಯಾವಾಗ? ನೀವು ಬಾಲ್ಯದಲ್ಲಿ ನೋಡಿದ ಸಿನಿಮಾಗಳನ್ನ ಹೆಸರಿಸಿ, ಅವುಗಳು ನಿಮ್ಮ ಮೇಲೆ ಬೀರಿದ ಪ್ರಭಾವ?**

ನಾನ್ ಪಿಯುಸಿಲಿ ಇದ್ದಾಗ ನಮ್ಮ ಕಾಲೇಜ್ ಹತ್ರ 'ಉಪ್ಪಿದಾದ ಎಂಬಿಬಿಎಸ್' ಶೂಟಿಂಗ್ ನಡಿತಿತ್ತು, ನಾನು ಮೊದಲಿಂದಲೂ ಉಪೇಂದ್ರರ ಫ್ಯಾನು. ಅವಾಗ ಎರಡು ತಿಂಗ್ಳು ಕಾಲೇಜ್‌ಗೆ ಬಂಕ್ ಹಾಕಿ ಶೂಟಿಂಗ್ ನೋಡಿದ್ದೆ. ಅಲ್ಲೆ ಶೂಟಿಂಗ್ ಅಂದ್ರೇನು, ಸ್ಕ್ರಿಪ್ಟ್ ಅಂದ್ರೇನು ಅಂತೆಲ್ಲ ಅಲ್ಪ ಸ್ವಲ್ಪ ತಿಳ್ಕೊಂಡಿದ್ದು. ಅಲ್ಲಿಂದ ಸಿನಿಮಾ ಬಗ್ಗೆ ಆಸಕ್ತಿ ಜಾಸ್ತಿ ಆಯ್ತು. ತಂದೆ ಇದೇ ರಂಗದಲ್ಲಿ ಇದ್ರೂ ಭಯದಿಂದ ಏನೂ ಹೇಳಕ್ಕಾಗ್ತಿರ್ಲಿಲ್ಲ, ಮತ್ತೆ ನಾನು ಸೆವೆಂತಲ್ಲಿ ಇರಬೇಕಾದ್ರೆ ನಮ್ಮ ತಂದೆಯ ಕಡೆಯಿಂದ, ಉಪೇಂದ್ರ ಸಿನಿಮಾದಲ್ಲಿ ನಟಿಸಲು ಅವಕಾಶ ಸಿಕ್ಕಿತ್ತು. ಆದ್ರೆ ಕಾರಣಾಂತರದಿಂದ ಆಗಲಿಲ್ಲ, ಅದೂ ನನ್ನ ಸಿನಿಮಾ ಆಸಕ್ತಿ ಜಾಸ್ತಿಯಾಗಲು ಒಂದು ಕಾರಣ.

ನಾನು ಆ ದಿನಗಳಲ್ಲಿ ನೋಡಿದ ಸಿನಿಮಾಗಳೆಂದರೆ, 'ಚಿನ್ನಾರಿಮುತ್ತ', 'ಆಕಸ್ಮಿಕ', 'ಆಕ್ಸಿಡೆಂಟ್', 'ಮಿಂಚಿನ ಓಟ', 'ನಾಗರಹಾವು', 'ಜನುಮದ ಜೋಡಿ', 'ಶಬ್ಧವೇಧಿ', 'ಉಪೇಂದ್ರ', 'ಹೆಚ್‌ಟುಒ', 'ಅಮೃತವರ್ಷಿಣಿ', 'ನಿಷ್ಕರ್ಷ', 'ಬೆಳದಿಂಗಳ ಬಾಲೆ' ಇನ್ನೂ ತುಂಬಾ ದೊಡ್ಡ ಪಟ್ಟಿಯಿದೆ. 'ಬೆಳದಿಂಗಳ ಬಾಲೆ' ತೆರೆಕಂಡು ಹದಿನೈದು ವರ್ಷಗಳಾದ್ ಮೇಲೂ ಪದೇ ಪದೇ ಅದನ್ನ ನೋಡಿ, ಸುನೀಲ್ ಕುಮಾರ್ ದೇಸಾಯಿಯವರ ಜೊತೆ ಕೆಲ್ಸ ಮಾಡ್ಬೇಕು ಅಂತ ಹೋಗಿದ್ದೆ. ಆಗ ಅವರು 'ಬೆಳದಿಂಗಳ ಬಾಲೆ' ಹೇಗೆ ಹುಟ್ಟಿತು ಅಂತ ತಿಳಿಸಿದ್ರು. ಅದು ಒಂದಾದ್ರೆ 'ಉಪೇಂದ್ರ', 'ಹೆಚ್‌ಟುಒ' ಚಿತ್ರಗಳಿಗಿದ್ದ ಕ್ರೇಜ್ ಮತ್ತೊಂದು ಕಾರಣ ಆಯ್ತು ನಂಗೆ 'ಟ್ಯೂಬ್‌ಲೈಟ್' ಸ್ಕ್ರಿಪ್ಟ್ ಬರಿಯಕ್ಕೆ.

*** ನೀವು ಮೊದಲಿಗೆ ಸಹಾಯಕ ನಿರ್ದೇಶಕರಾಗಿ ಯಾರ ಬಳಿ ಕೆಲಸ ಮಾಡಿದ್ದೀರ? ಅನುಭವ ಹೇಗಿತ್ತು?**

ನೋಡಿ, ನಾನು ಕಲ್ತಿರೋದೆ ಜಾಸ್ತಿ ಕೆಲಸ ಮಾಡಿ. ಯಾವುದೇ ಚಿತ್ರಕ್ಕೆ ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಕ್ಕೆ ಆಗಲಿಲ್ಲ, ನಿರ್ದೇಶನ ಮಾಡೊ ಅವಕಾಶನೇ ಸಿಕ್ತು, ಸುನೀಲ್ ಕುಮಾರ್ ದೇಸಾಯಿ ಅವರ ಹತ್ರ ಹೋಗಿದ್ದೆ ಕೆಲಸ ಮಾಡ್ಬೇಕು ಅಂತ. ಕಾರಣಾಂತರಗಳಿಂದ ಆಗಲಿಲ್ಲ, ಹಾಗೂ ಕೆ.ಕಲ್ಯಾಣ್ ನಂಗೆ ತುಂಬಾ ಆಪ್ತರು, ಅವರಿಂದನೇ ನಾನು ಇವತ್ತು ಕನ್ನಡ ಭಾಷೆಯ ಬಗ್ಗೆ ಹಿಡಿತ ಸಾಧಿಸಕ್ಕೆ ಆಗಿರೋದು. ಅವರು ನಂಗೆ ತುಂಬಾನೇ ತಿದ್ದಿ ಹೇಳಿಕೊಟ್ಟಿದ್ದಾರೆ ಬರವಣಿಗೆ ವಿಚಾರಗಳಲ್ಲಿ.

*** 'ಟ್ಯೂಬ್‌ಲೈಟ್' ಚಿತ್ರದ ಮೂಲಕ ನಿರ್ದೇಶಕರಾಗುತಿದ್ದಿರ, ಆ ಕುರಿತು ಹೇಳಿ?**

ನಿರ್ದೇಶಕ ಆಗ್ತಿದಿನಿ ಹೌದು. ಆದ್ರೂ ನಿರ್ದೇಶನದ ಬಗ್ಗೆ ಮಾತಾಡೊ ಅಷ್ಟು ದೊಡ್ಡ ವ್ಯಕ್ತಿ ನಾನಲ್ಲ, ಇನ್ನೂ ಕಲಿತಿದಿನಿ, ಕಲಿತಿರ್ತಿನಿ. ನನ್ನ ಮತ್ತು ನನ್ನ ಸುತ್ತಮುತ್ತಲಿನ ಜನರ ಅನುಭವಗಳನ್ನ ನೋಡಿ ಅನುಭವಿಸಿ ಮಾಡ್ತಿರೊ ಚಿತ್ರ 'ಟ್ಯೂಬ್‌ಲೈಟ್'. ಇದು ಜೀವನದ ಮೌಲ್ಯಗಳು ಮತ್ತು ಮೌಢ್ಯಗಳ ಬಗ್ಗೆ ಹ್ಯೂಮರಸ್ ಆಗಿ ಹೇಳತ್ತೆ. ಇದನ್ನ ನಾವು, ಲೆಹ್, ಲಡಾಕ್, ಗೋವಾದಲ್ಲಿ ಟೆಕ್ನಿಕಲಿ ತುಂಬಾ ಸ್ಟ್ರಾಂಗಾಗಿ ಮಾಡಿರೊ ಚಿತ್ರ. ಪ್ರಾಬಬ್ಲಿ ಜುಲೈ, ಆಗಸ್ಟಲ್ಲಿ ರಿಲೀಸ್ ಆಗತ್ತೆ. ಒಂದೆ ಮಾತಲ್ಲಿ ಹೇಳೊದಾದ್ರೆ ನಮ್ಮ ನಿಮ್ಮೆಲ್ಲರ ಜೀವನದ ಅನುಭವನೇ 'ಟ್ಯೂಬ್‌ಲೈಟ್'. ಮನೋಹರ್ ಜೋಷಿ ಕ್ಯಾಮರಾಮ್ಯಾನ್.

*** ನಿಮ್ಮ ಮೇಲೆ ಪ್ರಭಾವ ಬೀರಿದ ನಿರ್ದೇಶಕರು ಯಾರು? ಯಾಕೆ?**


ಶಂಕರ್ ನಾಗ್, ಪುಟ್ಟಣ್ಣ ಕಣಗಾಲ್, ಮೆಲ್ ಗಿಬ್ಸನ್, ಸುನೀಲ್ ಕುಮಾರ್ ದೇಸಾಯಿ, ಸ್ಟೀವನ್ ಸ್ಪೀಲ್‌ಬರ್ಗ್, ಅನುರಾಗ್ ಕಶ್ಯಪ್, ಓಂ ಪ್ರಕಾಶ್ ಝಾ... ಇವರೆಲ್ಲ ತುಂಬಾ ಪ್ರಭಾವ ಬೀರಿದವುರು. ಅವರ ಸಿನಿಮಾಗಳನ್ನ ರಿಪೀಟಾಗಿ ನೋಡಿ ಕಲ್ತಿದಿನಿ. ಅವೆಲ್ಲ ಒಂದು ಗೈಡ್ ಇದ್ದಂಗೆ. ಇದೇ ಕಾರಣಕ್ಕೆ ನಾನು ಯಾವ ಚಿತ್ರಕ್ಕೂ ಅಸಿಸ್ಟೆಂಟಾಗಿ ಕೆಲಸ ಮಾಡ್ಬೇಕು ಅನ್ನಿಸಲಿಲ್ಲ, ಐಮ್ ಥ್ಯಾಂಕ್‌ಫುಲ್ ಟು ಈಚ್ ಅಂಡ್ ಎವರಿ ಒನ್ ಆಫ್ ದೆಮ್.

*** ಒಬ್ಬ ನಿರ್ದೇಶಕನಿಗೆ ಅಧ್ಯಯನಶೀಲ ಗುಣಗಳಿರಬೇಕು, ನೀವು ಯಾವ ಯಾವ ಸಾಹಿತ್ಯಿಕ ಕೃತಿಗಳನ್ನು ಓದಿಕೊಂಡಿದ್ದೀರ?**

ಸಾಹಿತ್ಯಿಕ ಕಥೆಗಳಿಗಿಂತ ನಿಜ ಜೀವನದಲ್ಲಿ ನಡೆಯೊ ಕಥೆಗಳು ಜನಕ್ಕೆ ತುಂಬಾ ಹತ್ತಿರ ಆಗೋದ್ರಿಂದ ಅದಕ್ಕೆ ನಂಗೂ ನಿಜಜೀವನದಲ್ಲಿ ನಡೆಯೊ ಕಥೆಗಳೇ ತುಂಬಾ ಇಷ್ಟ ಆಗುತ್ತೆ, ಓಶೊ ಅವರು ನನ್ನ ಮೇಲೆ ತುಂಬಾ ಪ್ರಭಾವ ಬೀರಿದವರಲ್ಲಿ ಮುಂದಿದ್ದಾರೆ, ಅವರ 'ಮನಿ' ಎಂಬ ಕೃತಿ ತುಂಬಾನೇ ಪ್ರಭಾವ ಬೀರಿದ ಪುಸ್ತಕ, ಅದರ ಜೊತೆ ಎಸ್.ಎಲ್.ಭೈರಪ್ಪ ಪೂರ್ಣಚಂದ್ರ ತೇಜಸ್ವಿಯವರ ಕೃತಿಗಳನ್ನು ಓದಿದ್ದೀನಿ.

*** ನಿಮ್ಮ ಮುಂದಿನ ಯೋಜನೆಗಳೇನು?**

ಮುಂದಿನ ಯೋಜನೆ ಏನಿಲ್ಲ, ಕಾವೇರಿನ ಗಂಗೆ ಜೊತೆ ಒಂದು ಮಾಡಬೇಕು ಅಂತೂ ಅಲ್ಲ, ಸದ್ಯಕ್ಕೆ 'ಟ್ಯೂಬ್‌ಲೈಟ್' ಒಂದೇ ನನ್ನ ಫೋಕಸ್. ಮೇನ್ಲಿ ಜನ ಸಿನಿಮಾಗೆ ಬರೋದೆ ಎಲ್ಲಾ ಟೆನ್ಷನ್ ಮರಿಬೇಕು ಅಂತ. ಅವರನ್ನ ರಂಜಿಸಬೇಕು ಅನ್ನೋದೆ ನನ್ನ ಮುಖ್ಯ ಉದ್ದೇಶ. ಮತ್ತೆ ಇನ್ನೂ ಎರಡು ಕಥೆಗಳು ಕೊನೆ ಹಂತದಲ್ಲಿವೆ. ಅದರಲ್ಲಿ ಒಂದು 'ಹವಾ ಹವಾಯಿ' ಅಂತ. ಅದರ ಎಂಬತ್ತು ಭಾಗದಷ್ಟು ಚಿತ್ರೀಕರಣ ಸೌತ್ ಆಫ್ರಿಕಾದಲ್ಲಿ ಮಾಡೊ ಪ್ಲಾನ್ ಇದೆ. ಮತ್ತೊಂದು ಹಾರರ್ ಸ್ಟೋರಿ ರೆಡಿ ಮಾಡ್ಕೊಂಡಿದಿನಿ. ಆದರೆ ಸದ್ಯ 'ಟ್ಯೂಬ್‌ಲೈಟ್' ಮೇಲೆ ನನ್ನ ಸಂಪೂರ್ಣ ಫೋಕಸ್ ಇದೆ...



ಸಂದರ್ಶಕ: ಹೃದಯಶಿವ



ಹೊಗಳಿಕೆ ತೆಗಳಿಕೆ

...ರಮಹಂಸನಂತೆ... ಇದೆಲ್ಲ ಹೇಳುವುದು ಚೇಲಾಗಳೇ ...ನಹ ಈ ಬಗ್ಗೆ ಮಾತಾಡಬೇಕಿದ್ದ ಮೋದಿಯಾಗಲೀ ...ಮೋದಿಯ ಹೆಂಡತಿಯಾಗಲೀ ಅಲ್ಲ.

ಉತ್ತರ ಭಾರತದ ರಾಜಸ್ಥಾನ್, ಗುಜರಾತ್, ಯುಪಿ ...ಮೊದಲಾದೆಡೆಗಳಲ್ಲಿ ಇಂದಿಗೂ ಬಾಲ್ಯವಿವಾಹ ಸಾಮಾನ್ಯ. ...ದೀಗ ಕೆಲಮಟ್ಟಿಗೆ ಬದಲಾವಣೆಗಳಾದರೂ ಕೆಲದಶಕಗಳ ...ಂದೆ ಅಂದರೆ ಇಂದಿನ ಜನರೇಷನ್‌ನ ಪ್ರಜೆಗಳ ...ಂದೆತಾಯಿಂದಿರುಗಳು ಬಹುತೇಕ ಬಾಲ್ಯವಿವಾಹದಿಂದ ...ತೊಟ್ಟಿಲ ವಿವಾಹದಿಂದ ಹಿಡಿದು 18 ವಯಸ್ಸಿನೊಳಗಿನ ...ವಿವಾಹ) ದಂಪತಿಗಳಾದಂತವರೇ ಹೆಚ್ಚು, ಅದೇಕೆ ...ಗುಜರಾತಿನ ರತ್ನ ಮಹಾತ್ಮ ಗಾಂಧಿಯವರದ್ದೂ ಈ ಪ್ರಕಾರ ...ಬಾಲ್ಯವಿವಾಹವೇ ಆಗಿದೆ. ಇವುಗಳಿಗೆಲ್ಲ ಮಾನ್ಯತೆ ಇದ್ದರೆ ...17ನೇ ವಯಸ್ಸಿಗೆ ಮದುವೆಯಾಗಿ ಕೆಲಸಮಯ ಸಂಸಾರ ...ಮಾಡಿದ ಮೋದಿಯದ್ದು ಮಾತ್ರ ಮಾನ್ಯ ಮಾಡಲಾಗದ ...ಬಾಲ್ಯ ವಿವಾಹ ಎನ್ನುವುದು ಮೋದಿ ಚೇಲಾಗಳ ಕೂಗು.

ಉಳಿದದ್ದೆಲ್ಲಕ್ಕೆ ಕಿರುಚಿ ಕೂಗುವ ಮೋದಿ ಕಟ್ಟಿಕೊಂಡ ...ಹೆಂಡತಿಗೇ ದೋಖಾ ನೀಡಿದಂತಹ ವಿಚಾರದಲ್ಲಿ ಮಾತ್ರ ...ಬಾಯಿಗೆ ಬೀಗ ಹಾಕಿ ಕೂತಿರುತ್ತಾನೆ. ...ತಃ ಜಶೋದಾಬಾಯಿಯೇ ಟಿವಿ ...ಸಂದರ್ಶನವೊಂದರಲ್ಲಿ ನಾನು ಗುಜರಾತಿನ ...ಸಿಎಂ ಮೋದಿಯ ಧರ್ಮಪತ್ನಿ ಎಂದು ...ಹೇಳಿಕೊಂಡಿದ್ದರೂ ಮೋದಿ ಮಾತ್ರ ನೋ ...ಕಮೆಂಟ್ಸ್.

ಬೆಂಗಳೂರಿನ ಮಾನುಷಿಯ ಬೆನ್ನುಬಿದ್ದ ...ಮೋದಿ ಬಗ್ಗೆ ಮಾನುಷಿಯನ್ನು ಕೇಳಿ ...ತ್ಯಾಗತ್ಯಜಿ ತಿಳಿಯೋಣವೆಂದರೆ ...ಮಾನುಷಿಯೇ ಗಾಯಬ್..!! ಈಗ ಪತ್ನಿಯೆಂದು ಒಪ್ಪಿಕೊಂಡ ...ಮೇಲೆ ಜಶೋದಾಬಾಯಿಯನ್ನು ಮಾತಾಡಿಸೋಣವೆಂದರೆ ...ಜಶೋದಾಬಾಯಿಯೂ (ತನ್ನ ಕುಟುಂಬಸ್ಥರ ಸಮೇತ) ...ಗಾಯಬ್?!!! ತನ್ನ ಪತಿಯನ್ನು ದೇಶಸೇವೆಗಾಗಿ ...ತ್ಯಾಗಮಾಡಿದ ತ್ಯಾಗಮಯಿ ಜಶೋದಾಬಾಯಿಯ ಬಾಯಿ



ಮುಚ್ಚಿಸುವ ತಂತ್ರವಾದರೂ ಯಾತಕ್ಕೆ? ನಿಜಕ್ಕೂ ಆಕೆ ಅಮಾಯಕಿಯಾಗದೇ ತ್ಯಾಗಮಯಿಯಾಗಿದ್ದರೆ ಅಂತಹ ಮಾತು ಒತ್ತಾಯಪೂರ್ವಕವಾಗಿಯಲ್ಲದೇ (ಮಾನಸಿಯ ತಂದೆ ಹೇಳಿದಂತೆ) ಆಕೆಯ ಬಾಯಿಂದ ಬರುವುದಿದ್ದರೆ ಮೋದಿ ತಕ್ಕಮಟ್ಟಿಗಾದರೂ ಪ್ರಾಮಾಣಿಕ ಎನ್ನಬಹುದಲ್ಲವೆ? ಬದಲಿಗೆ ಈ ಕಳ್ಳಾಟವೆಲ್ಲ ಯಾಕೆ?

ತಮ್ಮದು ಪಾರ್ಟಿ ವಿತ್ ಡಿಫರೆನ್ಸ್ ಎನ್ನುವ ಚೆಡ್ಡಿಗಳು ಮೋದಿಯ ಈ ಹುಳುಕು ಮೋದಿಯಿಂದಲೇ ಹೊರಬಂದ ಬಳಿಕ ಅದಕ್ಕೆ ಪ್ರತಿತಂತ್ರವಾಗಿ ನೆಹರೂರವರ ಲೇಡಿ ಮೌಂಟ್ ಬ್ಯಾಟನ್ ಸಂಬಂಧವನ್ನು ಹೈಲೈಟ್ ಮಾಡ ತೊಡಗಿವೆ. ಇದು ನೆಹರೂವಿನ ವೀಕ್ನೆಸ್ ಇರಬಹುದು. ಆದರೆ ಅತ ಧರ್ಮ ಪತ್ನಿಯಾಗಿ ಕಟ್ಟಿಕೊಂಡ ಹೆಂಡತಿಯನ್ನು ನಿರ್ದಾಕ್ಷಿಣ್ಯವಾಗಿ ದೂರ ತಳ್ಳಲಿಲ್ಲ, ಇವತ್ತಿಗೂ ರಾಜಸ್ಥಾನ್, ಗುಜರಾತುಗಳಲ್ಲಿ ಮಹಿಳೆಯರು ಅರೆ ಪರ್ದಾದಲ್ಲೇ ತಿರುಗಾಡುತ್ತಾರೆ. ಸೆರಗನ್ನು ಮುಖಕ್ಕೆ ಹೊದ್ದುಕೊಳ್ಳುವ ಅಲ್ಲಿನ ಹೆಣ್ಣುಗಳು ಅನ್ಯ ಪುರುಷರೆದುರು ತಲೆ ಎತ್ತಿ ಮಾತಾಡುವುದಿಲ್ಲ, ಸಾಂಪ್ರದಾಯಿಕವಾಗಿ ಮದುವೆಯಾದ ಹೆಣ್ಣನ್ನು ಬಿಟ್ಟುಬಿಡುವುದೆಂದರೆ ಅಲ್ಲಿ ಆಕೆಯದ್ದು ನಾಯಿಪಾಡೇ ಸರಿ. ಇದನ್ನೇ ಸಂಸ್ಕೃತಿ ರಕ್ಷಕ ಪಕ್ಷ ಬಿಜೆಪಿಯ ಪ್ರಧಾನಿ ಅಭ್ಯರ್ಥಿ ಮಾಡಿ ಗಿಟ್ಟಿಸಿಕೊಂಡಿದ್ದಾನೆ. ಇದನ್ನು ತಿರುಚಿ ಇಂಥಾ ಸ್ತ್ರೀ ದ್ವೇಷಿಯನ್ನೇ ಆತನ ಚೇಲಾಗಳು ದೇಶಕ್ಕಾಗಿ ಹೆಂಡತಿಯನ್ನೇ ತ್ಯಾಗಮಾಡಿದ ಮಹಾತ್ಮ ಎಂದು ಹುತಾತ್ಮ ಪಟ್ಟ ಕಟ್ಟುತ್ತಿದ್ದಾರೆ. ಎಂಥಾ ಕುಚೋದ್ಯ.

- ಅವಿನಾಶ್ ಎಮ್.ಎಸ್. ನೆಲ್ಲಿಕಾರ್

ನೀವು ಕಾಂಗ್ರೆಸ್ ಏಜಂಟರು

ಇತ್ತೀಚೆಗೆ ಪತ್ರಿಕೆಯನ್ನು ಓದಿದೆ. ಪ್ರತಿ ಲೇಖನದಲ್ಲೂ ಮೋದಿಯನ್ನು ವಿರೋಧಿಸುವ ಕೆಲಸವನ್ನೇ ಮಾಡಿದ್ದೀರಿ. ಅದು ಹೇಗೆ ಮೋದಿಯನ್ನು ನರಹಂತಕ, ಕೊಲೆಗಡುಕ, ಮಹಿಳಾ ಪೀಡಕ ಎಂದು ಕರೆಯುತ್ತೀರಿ? ಅಂತಹ ಸ್ಥಾನದಲ್ಲಿರುವ ವ್ಯಕ್ತಿಗೆ ಕಿಂಚಿತ್ತೂ ಗೌರವ ಕೊಡುವುದು ಬೇಡವೇ? ಎಲ್ಲ ಕೋರ್ಟ್‌ಗಳಿಗಿಂತಲೂ ನೀವು ಮಿಗಿಲೆ? ನೀವು ಕಾಂಗ್ರೆಸ್ ಏಜಂಟರಂತೆ ವರ್ತಿಸುತ್ತಿದ್ದೀರಿ.

ಮೋದಿಯ ಸಾಮರ್ಥ್ಯ ಎಂತಹದ್ದೆಂದರೆ ಅವರು ಗುಜರಾತಿನಲ್ಲಿ ತುಂಬಾ ಅಭಿವೃದ್ಧಿ ತಂದಿದ್ದಾರೆ ಎಂಬುದು ನಿಮಗೆ ಗೊತ್ತಾ? ಅಲ್ಲಿ ದಿನದ 24 ಗಂಟೆ, ವರ್ಷದ 365 ದಿನಗಳಲ್ಲೂ ಕರೆಂಟ್ ಇರುತ್ತದೆ. ಅಲ್ಲಿ ಮಹಿಳೆಯರು ರಾತ್ರಿ ಹೊತ್ತಿನಲ್ಲೂ ಭಯವಿಲ್ಲದೆ ಸುತ್ತಾಡಬಹುದು. ಆದರೆ ಬೆಂಗಳೂರಿನಲ್ಲಿ ಫುಟ್‌ಪಾತ್‌ಗಳೂ ನೆಟ್ಟಗಿಲ್ಲ, ಆದರೂ ನೀವು ಅವರನ್ನು ಟೀಕಿಸುತ್ತೀರ. ಇದು ಸರಿಯಲ್ಲ.

- ಯೋಗೀಶ, ಎಸ್ ಎಂ ಎಸ್ ಮೂಲಕ

ಮೋದಿಯನ್ನು ವಿರೋಧಿಸುವ ನಿಮ್ಮ ಪತ್ರಿಕೆ ಬರೀ ಸುಳ್ಳು ಬರೆಯುತ್ತದೆ.

- ವಿಜಯ್ ಕುಮಾರ್, ಎಸ್‌ಎಂಎಸ್ ಮೂಲಕ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಮಿಂಚಂಚೆ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

Registered No.RNP/KA/BGS/2036/2014-16 Posted at : GPO, Bangalore-01. Friday R B P LANKESH, Kannada Weekly Price Rs. 15/- 07-05-2014 RNI No. KARKAN2005/14646

ಸುದೀಪ್ ತಮಿಳಿಗೆ



ರಜನಿಕಾಂತ್ ನಂತರ ತಮಿಳು ಚಿತ್ರರಂಗದಲ್ಲಿ ಯಶಸ್ವಿಯಾದ ಕನ್ನಡದ ನಾಯಕ ನಟರೆಂದರೆ ಅರ್ಜುನ್ ಸರ್ಜಾ, ಪ್ರಭುದೇವ, ಮುರಳಿ. ಉಳಿದಂತೆ ಪ್ರಕಾಶ್ ರೈ ತಮಿಳು ಚಿತ್ರರಂಗದಲ್ಲಿ ತಮ್ಮದೇ ಗಣನೀಯ ಸಾಧನೆ ಮಾಡಿದಂಥ ಮತ್ತೊಬ್ಬ ಕನ್ನಡಿಗ. ಇದೀಗ ಸುದೀಪ್ ತಮಿಳು ಚಿತ್ರರಂಗದಲ್ಲಿ ಗಟ್ಟಿಯಾಗಿ ನಿಲ್ಲಬಹುದಾದ ಸೂಚನೆಗಳು ಕಂಡುಬರುತ್ತಿವೆ. ಈ ದೆಸೆಯಲ್ಲಿ ಸುದೀಪ್ ಎರಡು ತಮಿಳು ಚಿತ್ರಗಳಲ್ಲಿ ನಟಿಸುತ್ತಿದ್ದಾರೆ. ಆ ಎರಡು ಚಿತ್ರಗಳ ಪೈಕಿ ರಜನಿಕಾಂತ್ ಜೊತೆ ನಟಿಸಲಿರುವ ಒಂದು ಚಿತ್ರ. ಈ ಚಿತ್ರವನ್ನು ಕೆ.ಎಸ್.ರವಿಕುಮಾರ್ ನಿರ್ದೇಶಿಸಲಿದ್ದು ರಾಕ್‌ಲೈನ್ ವೆಂಕಟೇಶ್ ನಿರ್ಮಿಸಲಿದ್ದಾರೆ.

ಇನ್ನು ಸುದೀಪ್ ತಮಿಳಿನಲ್ಲಿ ನಟಿಸುತ್ತಿರುವ ಎರಡನೇ ಸಿನಿಮಾ ಖ್ಯಾತ ತಮಿಳು ನಟ ವಿಜಯ್ ಜೊತೆಗಿನದ್ದು. ಈ ಚಿತ್ರವನ್ನು ಚಿಂಬು ದೇವನ್ ನಿರ್ದೇಶಿಸಲಿದ್ದಾರೆ. ವಿಜಯ್ ಜೊತೆಗಿನ ಈ ಸಿನಿಮಾ ಸೆಪ್ಟಂಬರ್‌ನಲ್ಲಿ ಶುರುವಾಗಲಿದ್ದು ರಜನಿಕಾಂತ್ ಜೊತೆಗಿನ ಸಿನಿಮಾ ಆನಂತರ ಶುರುವಾಗಲಿದೆ. ಸುದೀಪ್ ತಮಿಳು ಚಿತ್ರರಂಗದಲ್ಲೂ ಗೆದ್ದು ಸ್ಥಿರವಾಗಿ ನಿಲ್ಲಲಿ ಅಲ್ಲವೇ?

ಮಿಸ್ಟರ್ ಅಂಡ್ ಮಿಸ್ಸೆಸ್ ಶುರು



ಜಯಣ್ಣ-ಭೋಗೇಂದ್ರ ಜೋಡಿ ನಿರ್ಮಿಸುತ್ತಿರುವ ಯಶ್-ರಾಧಿಕಾ ಪಂಡಿತ್ ಮತ್ತೊಮ್ಮೆ ಒಟ್ಟಾಗುತ್ತಿರುವ 'ಮಿಸ್ಟರ್ ಅಂಡ್ ಮಿಸ್ಸೆಸ್ ರಾಮಾಚಾರಿ' ಎಂಬ ಚಿತ್ರವು ಗುಟ್ಟಾಗಿ ಶೂಟಿಂಗ್ ಶುರುಮಾಡಿಕೊಂಡಿದೆ. ವಾರದ ಹಿಂದೆಯೇ ಚಿತ್ರೀಕರಣ ಆರಂಭವಾಗಿದ್ದರೂ 'ಸದ್ಯಕ್ಕೆ ಯಾವುದೇ ಪ್ರಚಾರ, ಅನೌನ್ಸ್‌ಮೆಂಟ್ ಬೇಡ' ಎಂಬ ನಿಲುವು ಚಿತ್ರತಂಡದ್ದು.

ಯಶ್ ಈ ಬ್ಯಾನರಿನಡಿ ಈಗಾಗಲೇ 'ಡ್ರಾಮ' ಚಿತ್ರದಲ್ಲಿ ನಟಿಸಿದ್ದು ಇದೇ ಬ್ಯಾನರಿನಡಿಯ 'ಗಜಕೇಸರಿ' ಚಿತ್ರ ಬಿಡುಗಡೆಯಾಗಬೇಕಿದೆ. 'ಮಿಸ್ಟರ್ ಅಂಡ್ ಮಿಸ್ಸೆಸ್' ಚಿತ್ರಕ್ಕೆ ಹೊಚ್ಚ ಹೊಸ ನಿರ್ದೇಶಕರಿದ್ದು, ಅದು ಯಾರು ಎಂಬುದು ಇನ್ನಷ್ಟೇ ಗೊತ್ತಾಗಬೇಕಿದೆ.

ಜಯಣ್ಣ-ಭೋಗೇಂದ್ರ ಜೋಡಿ ಈಗ 'ಗಜಕೇಸರಿ'ಯತ್ತ ಚಿತ್ತ ಕೇಂದ್ರೀಕರಿಸಿರುವುದರಿಂದ 'ಮಿಸ್ಟರ್ ಅಂಡ್ ಮಿಸ್ಸೆಸ್' ಬಗ್ಗೆ ಅಷ್ಟಾಗಿ ಮಾಹಿತಿ ಬಿಟ್ಟುಕೊಡದಿದ್ದರೂ ಗುಟ್ಟಾಗಿ ಚಿತ್ರದ ಶೂಟಿಂಗ್ ಅಂತೂ ಶುರುವಾಗಿದೆ. 'ಮೊಗ್ಗಿನ ಮನಸು', 'ಡ್ರಾಮ' ಚಿತ್ರಗಳ ನಂತರ ಮತ್ತೊಮ್ಮೆ ಒಟ್ಟಿಗೆ ನಟಿಸುತ್ತಿರುವ ಯಶ್-ರಾಧಿಕಾ ಪಂಡಿತ್ ಜೋಡಿ ಈ ಚಿತ್ರದ ಮೂಲಕ ಮತ್ತೆ ಯಶಸ್ವಿಯಾಗುತ್ತಾ ಅನ್ನೋದನ್ನು ಕಾದುನೋಡಬೇಕು.

ರಾಗಿಣಿ ಈಗ ಬಾರ್ ಗರ್ಲ್

ರಾಗಿಣಿ ದ್ವಿವೇದಿ ಮೊಟ್ಟಮೊದಲ ಬಾರಿಗೆ ಬಾರ್ ಗರ್ಲ್ ಆಗುತ್ತಿದ್ದಾರೆ. ಅದೂ 'ಪರ್ಪಂಚ' ಚಿತ್ರದ ಮುಖಾಂತರ. ತಾವು ಬಾರ್ ಗರ್ಲ್ ಆಗುತ್ತಿರುವುದರ ಕುರಿತು ರಾಗಿಣಿಗೆ ಖುಷಿ ಇದೆಯಂತೆ. ಈ ಬಗೆಯ ರೋಲ್‌ಗಳಲ್ಲಿ ನಟಿಸುವ ಅವಕಾಶ ಹೆಚ್ಚಾಗಿ ಸಿಗುವುದಿಲ್ಲವಂತೆ. ಹಾಗಾಗಿ ಬಾರ್ ಗರ್ಲ್ ಆಗಿ ನಟಿಸಲು ರಾಗಿಣಿಗೆ ಖುಷಿಯಂತೆ.

'ಪರ್ಪಂಚ' ಎಂಬುದು ಚಿತ್ರದಲ್ಲಿ ಬಾರೊಂದರ ಹೆಸರಾಗಿದ್ದು ತಮ್ಮ ಪಾತ್ರ ಕೆಟ್ಟದಾಗೇನೂ ಚಿತ್ರಿತವಾಗುವುದಿಲ್ಲ, ಬದಲಾಗಿ ಬಾರ್ ಗರ್ಲ್ ಒಬ್ಬಳ ಬದುಕನ್ನು ಕಟ್ಟಿಕೊಡುವಂಥ ನೈಜ ಮಿಡಿತಗಳ ಪಾತ್ರ ಅನ್ನೋದು ರಾಗಿಣಿ ಮಾತು. ಅಂದಹಾಗೆ, ಈ ಚಿತ್ರವು ಯೋಗರಾಜ್ ಭಟ್ ಬ್ಯಾನರಿನಡಿ ನಿರ್ಮಾಣವಾಗುತ್ತಿದ್ದು, ಕ್ರಿಶ್ ಜೋಷಿ ಎಂಬುವವರು ನಿರ್ದೇಶಕರು. ದಿಗಂತ್ ಹೀರೋ.





ಉಸಿರು ಬೌನಾಡಿಯಾದಾ…

'ಬೌನಾಡಿ' ಎಂಬ ಮಕ್ಕಳ ಸಿನಿಮಾ ಮೂಲಕ ನಾಗರಾಜ ಕೋ… ನಿರ್ದೇಶಕರಾಗುತ್ತಿದ್ದಾರೆ. ತೊಂಭತ್ತರ ದಶಕದಲ್ಲಿ ತಾವೇ ಬರೆದಿದ್ದ 'ಉಸಿ… ಎಂಬ ಕಾದಂಬರಿಯನ್ನು ಆಧರಿಸಿ ಈ ಚಿತ್ರದ ಚಿತ್ರಕಥೆಯನ್ನು ಹೆಣೆ… ಇದೀಗ ನಿರ್ದೇಶನ ಮಾಡುವತ್ತ ಆಸಕ್ತರಾಗಿದ್ದಾರೆ. ಈ ಚಿತ್ರದ ಕಥಾವ… ಬೆಳೆಯುತ್ತಿರುವ ಮಕ್ಕಳ ತಲ್ಲಣಗಳ ಕುರಿತದ್ದಾಗಿದ್ದು ಮೂರು ತಲೆಮಾರು… ಸುತ್ತ ಹೆಣೆಯಲ್ಪಟ್ಟಿದೆ. ಬೆಂಗಳೂರು, ಚನ್ನಪಟ್ಟಣ, ಶ್ರೀರಂಗಪಟ್ಟಣ, … ತೊನ್ನೂರು ಸೇರಿದಂತೆ ಹಲವೆಡೆ ಚಿತ್ರೀಕರಣಗೊಳ್ಳಲಿರುವ ಈ ಚಿತ್… ಕಾರ್ತಿಕ್‌ಶರ್ಮ ಸಂಗೀತ ನೀಡುತ್ತಿದ್ದಾರೆ. ಗಿರೀಶ್ ಕಾಸರವಳ್ಳಿ ಮುಹೂರ್ತ… ಸಂದರ್ಭದಲ್ಲಿ ಹಾಜರಿದ್ದು ಚಿತ್ರತಂಡಕ್ಕೆ ಶುಭಕೋರಿದ್ದಾರೆ.

ತಿಲಕ್‌ಗೆ ಹೊಸ ಲುಕ್

ರವಿ ಶ್ರೀವತ್ಸ ನಿರ್ದೇಶನದ 'ಗಂಡಹೆಂಡತಿ' ಚಿತ್ರದಲ್ಲಿ ತಿಲಕ್ … ಸಂಜನಾ ತುಟಿಗೆ ತುಟಿ ಬೆಸೆದು ಸ್ಯಾಂಡಲ್‌ವುಡ್‌ನ ಇಮ್ರಾನ್ ಹಷ್ಮಿಯಾಗ… ಹೊರಟು ಪ್ರಥಮ ಚುಂಬನಂ ದಂತಭಗ್ನಂ ಎನ್ನುವ ರೀತಿಯಲ್ಲಿ ಆನಂತರ ದಿನಗಳಲ್ಲಿ ಅವಕಾಶಗಳೇ ಇಲ್ಲದಾಗಿ ಪರಿತಪಿಸಿದ್ದು ನಿಮಗೆಲ್ಲ ಗೊತ್ತಿದೆ.



ಆ ಚಿತ್ರದ 'ನಿದಿರೆಗೂ ರಜ... ನೋವೆಲ್ಲಾ ವಜಾ... ತನು ತನುವಿನಲು ಮಜಾ ಒಂದೇ ನಿಜ' ಎಂಬ ಕುನಾಲ್ ಗಾಂಜಾವಾಲಾ ಹಾಡಿರುವ ಗೀತೆಯಲ್ಲಿನ ತಿಲಕ್-ಸಂಜನಾ ನಡುವಿನ ರೋಮ್ಯಾನ್ಸ್ ಯಾವ ಮಟ್ಟಕ್ಕಿತ್ತೆಂದರೆ ಆ ಹಾಡನ್ನು ಯಾವ ಚಾನಲ್‌ನವರೂ ಆಗ ಪ್ರಸಾರ ಮಾಡುವ ಧೈರ್ಯ ತೋರುತ್ತಿರಲಿಲ್ಲ, ಹೆಚ್ಚೆಂದರೆ; ಮಧ್ಯರಾತ್ರಿಯಲ್ಲಿ ಒಂದಿಷ್ಟು ಬಿಸಿ ಬಿಸಿ ಹಾಡುಗಳ ಜೊತೆ ಪ್ರಸಾರ ಮಾಡಿ ಯುವಕ ಯುವತಿಯರನ್ನು ಬೆಚ್ಚಗೆ ಮಾಡುತಿದ್ದರಷ್ಟೇ.

ಆ ಎಫೆಕ್ಟಿನಿಂದಾಗಿ ತಿಲಕ್ ಆನಂತರದ ದಿನಗಳಲ್ಲಿ ಸಣ್ಣಪುಟ್ಟ ಪಾತ್ರಗಳಿಗೆ ತೃಪ್ತಿ ಪಟ್ಟುಕೊಂಡು ಒಂದೊಳ್ಳೆಯ ಅವಕಾಶಕ್ಕಾಗಿ ಕಾಯುವುದೇ ಕಾಯಕವಾಗಿದ್ದು ನಿಮಗೆ ಗೊತ್ತಿದೆ. ಈಗ ತಿಲಕ್‌ಗೂ ಕೂಡ ಶುಭಕಾಲ ಬಂದಿದೆಯಂತೆ. ಅದೇನೆಂದರೆ, ಅಕುಲ್ ಬಾಲಾಜಿ ಜೊತೆಗೂಡಿ ನಟಿಸುತ್ತಿರುವ ಹೊಸದೊಂದು ಸಿನಿಮಾದಲ್ಲಿನ ಒನ್ ಆಫ್ ದಿ ಹೀರೋ ಪಾತ್ರ. ಆ ಚಿತ್ರದ ಹೆಸರು 'ಲವ್ ಇನ್ ಎನ್‌ಎಚ್ 4' ಅಂತ. ಶ್ರೀನಾಥ್ ಎಂಬುವವರು ನಿರ್ದೇಶಿಸುತ್ತಿರುವ ಈ ಚಿತ್ರ ಜೂನ್‌ನಲ್ಲಿ ಆರಂಭವಾಗಲಿದ್ದು ನಿರಂಜನ್ ಬಾಬು ಛಾಯಾಗ್ರಹಣದ ಹೊಣೆ ಹೊತ್ತಿದ್ದಾರೆ. ಈ ಚಿತ್ರದ ಜೊತೆಗೆ 'ಪಲ್ಲವಿ ಟಾಕೀಸ್' ಎಂಬ ಚಿತ್ರದಲ್ಲೂ ಹೀರೋ ಪಾತ್ರ ನಿರ್ವಹಿಸುತ್ತಿ… ತಿಲಕ್ ಅವರಿಗೆ ಒಂದು ಶುಭಾಶಯ ಹೇಳಿಬಿಡೋಣ ಅಲ್ವಾ?

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com